ಸಿಂಹ ಎಂದರೇ ಮೃಗರಾಜ ಎಂದು ಕರೆಯುತ್ತಾರೆ. ಅದನ್ನು ಬರವಣಿಗೆಯಲ್ಲಿ ಬರೆಯುವಾಗ ನರಶಿಂಹ ಎಂದು ಬರೆಯುತ್ತಿದ್ದೇವೆ. ಸಿ ಎನ್ನುವ ಅಕ್ಷರ ಇಲ್ಲಿ **ಶಿ** ಎನ್ನುವ ಅಕ್ಷರವಾಗಿ ಬದಲಾಗಿಹೋದಂತೆ, **ಉಪನಿಶತ್** ಎಂಬ ಪದದಲ್ಲಿನ **ಶ** ಸ್ವಲ್ಪ **ಷ** ಆಗಿ ಬದಲಾಗಿಹೋಗಿದೆ. ಆದರೂ ಅರ್ಥವನ್ನು **ಶ** ಎನ್ನುವ ಅಕ್ಷರದಿಂದಲೇ ತೆಗೆದುಕೊಳ್ಳುತ್ತಿದ್ದೇವೆ. ಕಾಣಿಸದ ಆತ್ಮ, ಪರಮಾತ್ಮಗಳನ್ನು ಕಾಣಿಸುವುದಿಲ್ಲ ಎನ್ನುವಂತೆ, ಮನುಷ್ಯನಿಗೆ ತಿಳಿಯದ ಎರಡು ಆತ್ಮಗಳನ್ನು ಬೆಲೆಯಿಲ್ಲದ ಸೊನ್ನೆಗಳಾಗಿ ತೋರಿಸುವುದಾಗಿದೆ. ಆತ್ಮಗಿಂತ ಕಡಿಮೆಯದ್ದಾದ ಜೀವಾತ್ಮವನ್ನು ಕಡಿಮೆಯಾಗಿ ಇರುವಂತೆ ಸೊನ್ನೆಯಲ್ಲಿ ಅರ್ಧ ಭಾಗವಾಗಿಯೇ ತೋರಿಸುವುದಾಗಿದೆ. ಮೊದಲು ಒಂದು ನಂತರ

ಎರಡು ಸೊನ್ನೆಗಳು ಇರುವುದರಿಂದ ಎರಡು ಸೊನ್ನೆಗಳು ಬೆಲೆಯುಳ್ಳವಾಗಿ ತಿಳಿಯುತ್ತಾ ಒಟ್ಟಾರೆ ಮೂರು ಆತ್ಮಗಳಾಗಿವೆ. ಜೀವಿಯಾದ ನೀನು ಮೂರು ಆತ್ಮಗಳಲ್ಲಿ ಒಬ್ಬನಾಗಿದ್ದೀಯಾ ಎನ್ನುವುದು ವಾಸ್ತವ. ಆದ್ದರಿಂದ ನೀನು **ಮೂರು** ಆತ್ಮಗಳಿಗೆ ಹತ್ತಿರವಾಗಿ ಇಲ್ಲ ಎನ್ನುವುದನ್ನು ಉಪನಿಷತ್ ಎಂದು ಕರೆದಿದ್ದಾರೆ. ಇನ್ನೊಂದು ವಿಧವಾಗಿ ಹೇಳಿದರೂ **"ಮೂರು ಆತ್ಮಗಳ ಪಕ್ಕದಲ್ಲಿ ನೀನು ಇಲ್ಲ"** ಎಂದು ಪೂರ್ತಿ ಅರ್ಥವಾಗಿದೆ. ಈ ಪದವೊಂದರ ಅರ್ಥ ಆ ದಿನ ವೇದಗಳನ್ನು, ಉಪನಿಷತ್ತುಗಳನ್ನು ಬರೆದವರಿಗೆ ತಿಳಿಯದಿದ್ದರೂ ದೇವರು ಅಸಲಾದ ತ್ರೈತ ಸಿದ್ಧಾಂತಕ್ಕೆ ಗುರುತಾಗಿ ಉಪನಿಷತ್ ಎಂಬ ಹೆಸರನ್ನು ಸ್ಫುರಣಗೆ ತಂದಿದ್ದಾನೆ. **ತ್ರೈತ ಪಕ್ಕದಲ್ಲಿ ನೀನು ಇಲ್ಲ.** ವಾಸ್ತವವಾಗಿ ತ್ರೈತದಲ್ಲಿ (ಮೂರು ಆತ್ಮಗಳಲ್ಲಿ) ನೀನು ಭಾಗವಾಗಿ ಇದ್ದೀಯೆಂಬ ದೊಡ್ಡ ಅರ್ಥವನ್ನು ತಿಳಿಸುವ ನಿಮಿತ್ತವೇ ಉಪನಿಷತ್ (ಉಪನಿಶತ್) ಎಂದು ಹೇಳುವುದಾಗಿದೆ. ಗತದಲ್ಲಿ ಬಹಳಜನ ಈ ಪದಕ್ಕೆ ಅರ್ಥವನ್ನು ಹೇಳಿದರೂ ಅವುಗಳಿಗಿಂತ ಈ ದಿನ ನಮಗೆ ಆತ್ಮದ ಮೂಲಕ ತಿಳಿದ ಅರ್ಥ ದೊಡ್ಡದಾಗಿ ಇದೆಯೆಂದು ಹೇಳಬಹುದು.

**15) ಪ್ರಶ್ನೆ :- ಆತ್ಮವನ್ನು ಕುರಿತು ಯಮ ಧರ್ಮರಾಜ ನಚಿಕೇತನಿಗೆ ಅನೇಕ ವಿಷಯಗಳನ್ನು ಹೇಳಿದ್ದಾನೆ. ಯಮ ಧರ್ಮರಾಜ ಹೇಳಿದ ನಂತರ ಆತ್ಮಜ್ಞಾನವನ್ನು ನಚಿಕೇತನು ತಿಳಿದುಕೊಂಡಿದ್ದಾನೆಂದು ಅಂದುಕೊಳ್ಳೋಣ. ಆದರೆ ನಚಿಕೇತನು ಶರೀರದೊಂದಿಗೆ ಯಮ ಲೋಕಕ್ಕೆ ಹೇಗೆ ಬಂದಿದ್ದಾನೆ? ನಚಿಕೇತನು ಯಮಲೋಕಕ್ಕೆ ಬಂದಾಗ, ಯಮನು ಮನೆಹತ್ತಿರ ಇಲ್ಲವೆಂದು, ಯಮನು ಬರುವವರೆಗು ಎರಡು ದಿನಗಳು ನಚಿಕೇತನು ಯಮನ ಮನೆಮುಂದೆ ಯಮನ ದರ್ಶನ ಕೋರುತ್ತಾ, ದರ್ಶನಾರ್ಥವಾಗಿ ಎರಡು ದಿನಗಳು ನಿರಾಹಾರ**

**ದೀಕ್ಷೆ ಮಾಡಿದ್ದಾನೆಂದು ಕಠೋಪನಿಷತ್ತಿನಲ್ಲಿ ಬರೆದಿದ್ದಾರೆ. ಒಬ್ಬ ಮನುಷ್ಯ ಶರೀರದೊಂದಿಗೆ ಯಮಲೋಕಕ್ಕೆ ಹೋಗುವುದು, ಅಲ್ಲಿ ಕೂಡಾ ನಿರಾಹಾರ ದೀಕ್ಷೆ ಮಾಡುವುದು ಸಾಧ್ಯವಾ?**

**ಉತ್ತರ :–** ಕಠೋಪನಿಷತ್ತು ಎನ್ನುವುದು ದಶೋಪನಿಷತ್ತುಗಳಲ್ಲಿ ಒಂದೆಂದು ಹೇಳುವುದರಿಂದ ಬಹಳ ಮುಖ್ಯವಾದುದೆಂದು ತಿಳಿಯುತ್ತಿದೆ. ನಿಜಕ್ಕೆ ಮನುಷ್ಯರು ಕಲ್ಪಿಸಿ ಬರೆದ ಕಥೆ 'ನಚಿಕೇತನು ಯಮಲೋಕಕ್ಕೆ ಹೋಗಿದ್ದಾನೆ' ಎಂದು ಹೇಳುವುದು. ಮನುಷ್ಯರು ಕಥೆಗಳನ್ನು ಹೇಗಾದರೂ ಕಲ್ಪಿಸಿ ಬರೆಯಬಲ್ಲರು. ಆದ್ದರಿಂದ ನಚಿಕೇತನ ಚರಿತ್ರೆ ವಾಸ್ತವವಾಗಿ ನಡೆದ ಚರಿತ್ರೆ ಅಲ್ಲ. ನಿಜಕ್ಕೆ ಯಮಲೋಕವೇ ಇಲ್ಲದಿದ್ದಾಗ ನಚಿಕೇತನು ಮರಣಿಸದಂತೆ ಶರೀರದೊಂದಿಗೆ ಯಮಲೋಕಕ್ಕೆ ಹೋಗುವುದು ದುಸ್ಸಾಧ್ಯ. ಆದ್ದರಿಂದ ಕಠೋಪನಿಷತ್ತಾಗಲಿ, ಕಠೋಪನಿಷತ್ತಿನಲ್ಲಿ ನಡೆದ ಸಂಘಟನೆಗಳಾಗಲಿ ಕೇವಲ ಕಲ್ಪಿತಗಳು ಎಂದು ಮೊದಲು ಗ್ರಹಿಸಬೇಕಾಗಿದೆ. ಹಾಗೇ ಅದರಲ್ಲಿ ಹೇಳಿದ ಜ್ಞಾನ ಕೂಡಾ ಕಲ್ಪಿತ ಜ್ಞಾನವಾಗಿದೆ.

**16) ಯಮಧರ್ಮರಾಜ ನಚಿಕೇತನಿಗೆ ಆತ್ಮಜ್ಞಾನವನ್ನು ಬೋಧಿಸಿದ್ದಾನೆ ಅಲ್ಲವೆ! ಅದರಲ್ಲಿ ಆತ್ಮ ಎನ್ನುವುದು ಶರೀರದಲ್ಲಿ ಇದ್ದರೂ ಸರ್ವವು ವ್ಯಾಪಿಸಿದೆಯೆಂದು, ಎಲ್ಲಕಡೆಗು ಹೋಗ ಬಲ್ಲದೆಂದು ಕೆಳಗಿನ ಶ್ಲೋಕಗಳಲ್ಲಿ ಹೇಳುತ್ತಿದ್ದಾರೆ. ಆತ್ಮ ಹಾಗೆ ಎಲ್ಲಾಕಡೆಗಳಿಗೆ ಹೋಗಬಲ್ಲದಾ?**

**ಉತ್ತರ :–** ಯಮನು ಹೇಳಿದ ಶ್ಲೋಕಗಳನ್ನು ನೋಡಿದರೆ ಹೀಗೆ ಇವೆ. ಈ ಶ್ಲೋಕಗಳು ಆಧ್ಯಾತ್ಮಿಕಕ್ಕೆ ಸಂಬಂಧಿಸಿರುವವಾಗಿ ಕಾಣಿಸಿದರೂ, ವಾಸ್ತವಕ್ಕೆ ಅವು ಆಧ್ಯಾತ್ಮಿಕಕ್ಕೆ ಸಂಬಂಧ ಇಲ್ಲದವಾಗಿ ಕಾಣಿಸುತ್ತಿವೆ.

**1) ಶ್ಲೋಕ :–**

**ಆಸೀನೊ ದೂರಂ ವ್ರಜತಿ ಶಯನೋ ಯಾತಿ ಸರ್ವತಃ (2–21)**

**2) ಶ್ಲೋಕ :–**

**ಅಶರೀರಂ ಶರೀರೇಷ್ಯನವಸ್ಥೇ ವ್ಯವಸ್ಥಿತಮ್**
**ಮಹಾನ್ತಂ ವಿಭೂಮಾತ್ಮಾನಂ ಮತ್ವಾ ಧೀರೋನ ಶೋಚತಿ (2–22)**

**ಭಾವಾರ್ಥ :–** ಆತ್ಮ ಒಂದುಕಡೆ ಇದ್ದರೂ ದೂರವಾಗಿ ಹೋಗಬಲ್ಲದು. ಮನುಷ್ಯ ಮಲಗಿ ಇದ್ದಲ್ಲಿಯೂ ಎಲ್ಲಾಕಡೆ ಹೋಗಬಲ್ಲದು. ಅಶಾಶ್ವತಗಳಾದ ಶರೀರಗಳಲ್ಲಿ ಇದ್ದಲ್ಲಿಯೂ ಈ ಆತ್ಮ ಶರೀರ ಇಲ್ಲದ್ದು, ಬಹಳ ದೊಡ್ಡದು. ಸರ್ವವ್ಯಾಪಿ. ಅಂತಹ ಆತ್ಮವನ್ನು ತಿಳಿದುಕೊಂಡು ಧೀರನಾಗುವವನು ದುಃಖಿಸುವುದಿಲ್ಲ.

ಸಮಸ್ತ ಜೀವರಾಶಿಗಳ ಶರೀರಗಳಲ್ಲಿ ಆತ್ಮ ನಿವಾಸಿಸುವುದು ವಾಸ್ತವ. ಒಬ್ಬ ಮನುಷ್ಯನ ಶರೀರದಲ್ಲಿ ಜೀವಾತ್ಮ ಇದ್ದಂತೇ ಮತ್ತೊಬ್ಬ ಮನುಷ್ಯನ ಶರೀರದಲ್ಲಿ ಜೀವಾತ್ಮ ಇರುತ್ತದೆ. ಪ್ರತಿ ಶರೀರದಲ್ಲಿಯೂ ಜೀವಾತ್ಮಗಳು ಬೇರೆಬೇರೆಯಾಗಿ ಇರುತ್ತವೆ. ಒಂದು ಶರೀರದಲ್ಲಿರುವ ಜೀವಾತ್ಮದಂತೆ, ಮತ್ತೊಂದು ಶರೀರದಲ್ಲಿ ಜೀವಾತ್ಮ ಇರುವುದಿಲ್ಲ. ಪ್ರತಿ ಜೀವಿಗು ಕರ್ಮದಲ್ಲಿ ವ್ಯತ್ಯಾಸಗಳಿರುತ್ತವೆ. ಆದ್ದರಿಂದ ಅನೇಕ ಶರೀರಗಳಲ್ಲಿ ಅನೇಕ ಜೀವಾತ್ಮಗಳು ಇವೆಯೆಂದು ಹೇಳಬಹುದು. ಮನುಷ್ಯನ ಶರೀರದಲ್ಲಿ ಜೀವಾತ್ಮಗೆ ಜೊತೆಯಾಗಿ ಆತ್ಮ ಇರುತ್ತಿದೆ. ಶರೀರಗಳು ಎಷ್ಟಿದ್ದರೂ ಅದರಲ್ಲಿ ಕೂಡಾ ಜೀವಿಯಂತೆ ಆತ್ಮ ಭಿನ್ನವಾಗಿರುತ್ತದೆ. ಎಷ್ಟು ಶರೀರಗಳು ಇವೆಯೋ ಅಷ್ಟು ಶರೀರಗಳಲ್ಲಿ ಅಷ್ಟು ಆತ್ಮಗಳು ಇವೆಯೆಂದು ಹೇಳಬಹುದು. ಆದರೇ ಅಷ್ಟು ಶರೀರಗಳಲ್ಲಿ ಆತ್ಮ ಬೇರೆಬೇರೆಯಾಗಿ ಖಂಡ ಖಂಡಗಳಾಗಿ ಇದೆ. ಪ್ರತಿ ಜೀವಾತ್ಮಗು ಒಂದು ಆತ್ಮ ಇರುವುದು ವಾಸ್ತವವೇ ಆದರೂ, ಆತ್ಮ ಎಷ್ಟು ಶರೀರಗಳಲ್ಲಿ ಇದ್ದರೂ, ಜೀವಾತ್ಮನಂತೆ ಅಲ್ಲದೇ ಆತ್ಮ ಒಂದಾಗಿ ಇದೆ. ಆತ್ಮ ಅನೇಕರಲ್ಲಿ ಅನೇಕ

ಖಂಡಗಳಾಗಿ ಇದ್ದರೂ ಆತ್ಮವನ್ನು ಒಂದೇಯೆಂದು ಹೇಳಬಹುದು. ಎಲ್ಲಾ ಶರೀರಗಳಲ್ಲಿ ಜೀವಾತ್ಮಗೆ ಜೋಡಿ ಆತ್ಮವಾಗಿ, ಜೊತೆ ಆತ್ಮವಾಗಿ ಇದ್ದರೂ ಎಲ್ಲಾ ಶರೀರಗಳಲ್ಲಿನ ಆತ್ಮ ಮಾತ್ರ ಒಂದೇಯೆಂದು ಏಕಾತ್ಮವಾಗಿ ಇದೆಯೆಂದು ಹೇಳುವುದು ಸತ್ಯ.

ಮೇಲಿನ ಶ್ಲೋಕದಲ್ಲಿ ಆತ್ಮ ಒಂದುಕಡೆ ಶರೀರದಲ್ಲಿ ಇದ್ದರೂ ದೂರವಾಗಿ ಹೋಗಬಲ್ಲದೆಂದು ಹೇಳಿದ್ದಾರೆ. ಅಷ್ಟೇಅಲ್ಲದೆ ಮನುಷ್ಯ ಮಲಗಿದ್ದರೂ ಶರೀರವನ್ನು ಬಿಟ್ಟು ಎಲ್ಲಾಕಡೆ ಹೋಗಬಲ್ಲದೆಂದು ಹೇಳಿದ್ದಾರೆ. ಇಲ್ಲಿ ಹೇಳಿದ ವಿಷಯವನ್ನು ಅನುಸರಿಸಿ ಕೆಲವರು ಆಧ್ಯಾತ್ಮಿಕ ಜ್ಞಾನ ತಿಳಿಯದಿದ್ದಾಗಲೂ ಆತ್ಮ ಶರೀರವನ್ನು ಬಿಟ್ಟು ಹೇಗೆ ಹೊರಗೆ ಹೋಗುತ್ತಿದೆ, ಪುನಃ ಅದೇ ಶರೀರದೊಳಗೆ ಹೇಗೆ ಬರುತ್ತಿದೆ, ಚಿತ್ರಪಟಗಳ ರೂಪದಲ್ಲಿ ಗೀಚಿ ತೋರಿಸಿದ್ದಾರೆ. ಮನುಷ್ಯ ಶರೀರದಲ್ಲಿನ ಆತ್ಮ ಹೊರಗೆ ಹೋಗುವಾಗ, ಹೊಕ್ಕಳಿಂದ ಹೊರಗೆ ಹೋಗುತ್ತದೆಂದು, ಹೊಕ್ಕಳಿಂದ ಒಂದು ಹಗ್ಗದಂಥಾದ್ದನ್ನು ತನಗೆ ಅಂಟಿಸಿಕೊಂಡು ಹೋಗುತ್ತಿದೆಯೆಂದು ತೋರಿಸುವುದು, ಹೇಳುವುದು ನಡೆಯುತ್ತಿದೆ. ಆತ್ಮ ಶರೀರದಿಂದ ಎಷ್ಟುಸಾವಿರ ಕಿಲೋಮೀಟರುಗಳ ದೂರವಾಗಿ ಹೋದರೂ, ಹೊಕ್ಕಳಿಂದ ಅಂಟಿಕೊಂಡಿರುವ ಹಗ್ಗ ಉದ್ದ ಬೆಳೆಯುತ್ತಾ ಆತ್ಮಗೆ ಅನುಸಂಧಾನವಾಗಿ ಇರುತ್ತದೆಂದು ಕೂಡಾ ಹೇಳಿದ್ದಾರೆ. ಹಾಗೆ ಮನುಷ್ಯ ಶರೀರದಿಂದ ಹಗ್ಗದಂಥಾದ್ದು ಆತ್ಮಕ್ಕೆ ಅಂಟಿಕೊಂಡು ಆತ್ಮ ಎಷ್ಟು ದೂರ ಹೋದರೆ ಅಷ್ಟು ದೂರ ಉದ್ದ ಬೆಳೆಯುತ್ತಾ ಇರುತ್ತದೆಂದು ಹೇಳಿದ್ದಾರೆ. ಮನುಷ್ಯನ ಶರೀರದೊಳಗಿನ ಆತ್ಮ ಮನುಷ್ಯ ನಿದ್ರಿಸುವ ಸಮಯದಲ್ಲಿ ಹೊರಗೆ ಸಾವಿರ, ಲಕ್ಷಗಳ ಕಿಲೋಮೀಟರುಗಳ ದೂರ ಹೋಗಿ ನಂತರ ತನಗು ಶರೀರಕ್ಕು ಅಂಟಿಕೊಂಡಿರುವ ಹಗ್ಗದ ಆಧಾರವಾಗಿ ಪುನಃ ಅದೇ ಶರೀರವನ್ನು ಸೇರುತ್ತಿದೆಯೆಂದು ಹೇಳುತ್ತಿದ್ದಾರೆ.

ಇದೆಲ್ಲವೂ ಕಠೋಪನಿಷತ್ತಿನಲ್ಲಿನ ಮೇಲಿನ ಶ್ಲೋಕದ ಆಧಾರದಿಂದ ಊಹಿಸಿಕೊಂಡು, ಕಲ್ಪಿಸಿ ಹೇಳಿರುವುದು ಹೊರತು ಇದರಲ್ಲಿ ಯಾವುದೇ ಸತ್ಯ

ಇಲ್ಲವೆಂದು ಹೇಳುತ್ತಿದ್ದೇವೆ. ಆತ್ಮವನ್ನು ಅಧ್ಯಾಯನ (ಆಧ್ಯಾತ್ಮಿಕ) ಮಾಡಿದ ನಂತರ ವಾಸ್ತವವಾಗಿರುವ ಸತ್ಯ ತಿಳಿಯಲ್ಪಡುತ್ತದೆ. ನನಗೆ ತಿಳಿದ ಸತ್ಯದ ಪ್ರಕಾರ ಕಠೋಪನಿಷತ್ತಿನಲ್ಲಿ ಬರೆದ ಈ ವಿಷಯ ಬ್ರಹ್ಮವಿದ್ಯಾ ಶಾಸ್ತ್ರಕ್ಕೆ ಪೂರ್ತಿ ವಿರುದ್ಧವಾಗಿ ಇದೆಯೆಂದು ಹೇಳಬಹುದು. ಆಧ್ಯಾತ್ಮಿಕದ ಪ್ರಕಾರ ಬ್ರಹ್ಮವಿದ್ಯಾ ಶಾಸ್ತ್ರವನ್ನು ಅನುಸರಿಸಿ ಆತ್ಮವನ್ನು ತಿಳಿದಿದ್ದರೆ, ಆತ್ಮ ರಾತ್ರಿಸಮಯ ಮನುಷ್ಯ ನಿದ್ರೆ ಹೋಗುವಾಗ ಶರೀರವನ್ನು ಬಿಟ್ಟು ಹೊರಗೆ ಹೋಗುತ್ತದೆಂದು ಯಾರೂ ಹೇಳುವುದಿಲ್ಲ. ಏಕೆಂದರೇ! ಆತ್ಮ ಶರೀರವನ್ನು ಬಿಟ್ಟುಹೋದರೆ ಅದು ಮರಣವಾಗುತ್ತದೆ. ಒಂದುಸಲ ಹೊರಗೆ ಹೋದ ಆತ್ಮ ಪುನಃ ಅದೇ ಶರೀರದೊಳಗೆ ಪ್ರವೇಶಿಸುವುದಿಲ್ಲ. ಒಂದುಸಲ ಹೊರಗೆ ಹೋದ ಆತ್ಮ ಪುನಃ ಆ ಶರೀರದೊಳಗೆ ಬರುವುದು ಧರ್ಮವಿರುದ್ಧವಾಗುತ್ತದೆ. ಒಂದು ಶರೀರದೊಳಗೆ ಆತ್ಮ ಒಂದುಬಾರಿ ಪ್ರವೇಶಿಸುತ್ತದೆ, ಅದನ್ನೇ ಜನ್ಮ ಎನ್ನುತ್ತಿದ್ದೇವೆ. ಹಾಗೇ ಒಂದು ಶರೀರದಿಂದ ಆತ್ಮ ಒಂದುಬಾರಿ ಹೊರಗೆ ಹೋಗುತ್ತದೆ, ಅದನ್ನೇ ಮರಣ ಎನ್ನುತ್ತಿದ್ದೇವೆ. ಜನನದಲ್ಲಿ ಶರೀರದೊಳಗೆ ಸೇರುವುದು, ಮರಣದಲ್ಲಿ ಶರೀರವನ್ನು ಬಿಡುವುದು ಹೊರತು ಮಧ್ಯದಲ್ಲಿ ಶರೀರವನ್ನು ಬಿಟ್ಟುಹೋಗುವುದಾಗಲಿ, ಪುನಃ ಅದೇ ಶರೀರದೊಳಗೆ ಬರುವುದಾಗಲಿ ನಡೆಯುವುದಿಲ್ಲ.

ಆತ್ಮ ಜೀವಾತ್ಮಗೆ ಜೊತೆಯಾಗಿ ಶರೀರದಲ್ಲಿರುತ್ತದೆ. **"ಜೀವಿಯೊಂದಿಗೆ ಕೂಡಿ ಇರುವ ಆತ್ಮವನ್ನು ಕೂಟಸ್ಥನು"** ಎಂದು ಭಗವದ್ಗೀತೆಯಲ್ಲಿ ಪುರುಷೋತ್ತಮ ಪ್ರಾಪ್ತಿ ಯೋಗದಲ್ಲಿ 16ನೇ ಶ್ಲೋಕದಲ್ಲಿ ಹೇಳಿದ್ದಾರೆ. ಎಂದಿಗೂ ಶಾಶ್ವತವಾಗಿ ಜೀವಾತ್ಮ ಆತ್ಮಗಳು ಎರಡೂ ಕೂಡಿ ಇರುತ್ತವೆ. ಆದ್ದರಿಂದ ಜೀವಾತ್ಮ ಆತ್ಮಗಳನ್ನು ಜೋಡಿ ಆತ್ಮಗಳಾಗಿ ಹೇಳಿದ್ದಾರೆ. ಅಷ್ಟೇಅಲ್ಲದೆ **"ಜೀವಾತ್ಮಗೆ ಆತ್ಮ ಪೊರಗಿನವನಾಗಿ (ಪಕ್ಕದವನಾಗಿ)"** ಇದ್ದಾನೆಂದು ದ್ವಿತೀಯ ದೈವಗ್ರಂಥದಲ್ಲಿ ಮತ್ತಾಯ ಸುವಾರ್ತೆ 22ನೇ ಅಧ್ಯಾಯದಲ್ಲಿ 39ನೇ ವಚನದಲ್ಲಿ ಹೇಳಿದ್ದಾರೆ. ಅಷ್ಟೇಅಲ್ಲದೆ ಅಂತಿಮ ದೈವಗ್ರಂಥ (ಖುರಾನ್) ನಲ್ಲಿ ಎರಡನೆ ಸೂರಾ 186ನೇ ಆಯತ್‌ನಲ್ಲಿ **"ನಿನಗೆ ಅತ್ಯಂತ ಸಮೀಪದಲ್ಲಿ ನಿನ್ನ ಆತ್ಮ**

**(ಅಲ್ಲಾ)"** ಇದ್ದಾನೆಂದು ಹೇಳಿದ್ದಾರೆ. ಈ ವಿಧವಾಗಿ ಮೂರು ದೈವಗ್ರಂಥಗಳಲ್ಲಿ ಆತ್ಮ ವೊಂದರ ಇರುವಿಕೆಯನ್ನು ಕುರಿತು ಹೇಳಿದ್ದಾರೆ.

ಜೀವಾತ್ಮ ಶರೀರವನ್ನು ಬಿಟ್ಟರೂ ಆತ್ಮ ಜೀವಾತ್ಮ ಹಿಂದೆ ಹೋಗುತ್ತದೆ. ಒಂದುವೇಳೆ ಆತ್ಮ ಶರೀರವನ್ನು ಬಿಟ್ಟರೂ ಜೀವಾತ್ಮ ಆತ್ಮ ಹಿಂದೆ ಹೋಗುತ್ತದೆ. ಹೀಗೆ ಒಂದರೊಂದಿಗೆ ಮತ್ತೊಂದು ಬಿಟ್ಟಿರದ ಬಂಧವನ್ನು ಜೀವಾತ್ಮ, ಆತ್ಮ ಹೊಂದಿವೆ. ಜೀವಾತ್ಮ ಶರೀರವನ್ನು ಬಿಟ್ಟರೆ ಅದರ ಹಿಂದೆ ಆತ್ಮ ಹೋದರೆ ಅದು 'ಮರಣ' ವಾಗುತ್ತದೆ. ಹಾಗಲ್ಲದೆ ಆತ್ಮ ಮೊದಲು ಶರೀರವನ್ನು ಬಿಟ್ಟರೆ ಅದರಹಿಂದೆ ಜೀವಾತ್ಮ ಹೋದರೆ ಅದು 'ಅಕಾಲ ಮರಣ' ಆಗುತ್ತದೆ. ಮರಣದಲ್ಲಿ ಆದರೂ, ಅಕಾಲ ಮರಣದಲ್ಲಿ ಆದರೂ ಜೀವಾತ್ಮ ಆತ್ಮಗಳು ಎರಡೂ ಬೆರೆತೇ ಇರುತ್ತವೆ. ಈ ವಿಧವಾಗಿ ಆತ್ಮ ಜೀವಾತ್ಮದೊಂದಿಗೆ ಶರೀರದಲ್ಲಿ ನಿವಾಸಿಸುತ್ತಿರುವಾಗ, ರಾತ್ರಿ ನಿದ್ರೆ ಹೋಗುವ ಸಮಯದಲ್ಲಿ ಆತ್ಮ ಶರೀರವನ್ನು ಬಿಟ್ಟು ದೂರವಾಗಿ ಹೋಗಿಬರಬಲ್ಲದು ಎಂದು ಹೇಳುವುದು ಕಠೋಪನಿಷತ್ತಿನಲ್ಲಿ ಲೋಪ ಅಲ್ಲವೇ? ಶುದ್ಧ ಅಸತ್ಯ ಅಲ್ಲವೇ!

ಈ ಶ್ಲೋಕದಲ್ಲಿ ಅಶರೀರಂ ಎಂದು ಆತ್ಮ ಶರೀರದಲ್ಲಿ ಇದ್ದರೂ ಶರೀರ ಇಲ್ಲದ್ದು, ಸರ್ವವ್ಯಾಪಿ ಎಂದು ಬರೆದಿದ್ದಾರೆ. ಜನ್ಮಿಸಿದಾಗಿನಿಂದ ಮರಣಿಸುವವರೆಗು ಆತ್ಮ ಒಂದುಕ್ಷಣ ಕೂಡಾ ಶರೀರವನ್ನು ಬಿಟ್ಟಿಲ್ಲ. ಹಾಗಿರುವಾಗ ಆತ್ಮಕ್ಕೆ ಶರೀರ ಇಲ್ಲ ಎನ್ನುವುದು "ವಸ್ತ್ರಗಳು ಧರಿಸಿದವನು ನಗ್ನವಾಗಿ ಇರುತ್ತಾನೆ" ಎಂದು ಹೇಳಿದಂತಿದೆ. ಶರೀರ ಇದ್ದರೂ, ಶರೀರ ಇಲ್ಲದವನು ಮತ್ತು ಸರ್ವವ್ಯಾಪಿ ಪರಮಾತ್ಮ ಆಗುತ್ತದೆ ಆದರೆ ಆತ್ಮ ಅಲ್ಲ. ಈ ಶ್ಲೋಕದಲ್ಲಿ ಆತ್ಮ ಹೆಸರು ಹೇಳುತ್ತಾ ಸ್ವಲ್ಪ ಆತ್ಮಗು, ಸ್ವಲ್ಪ ಪರಮಾತ್ಮಗು ಅನ್ವಯಿಸುವಹಾಗೆ ಹೇಳುವುದು, ಕುರುಡನು ಒಂದು ಗುರಿ ಇಲ್ಲದೆ ಕಲ್ಲನ್ನು ಬೀಸಿದಹಾಗೆ, ಒಂದು ಪದ್ಧತಿ ಎನ್ನುವುದು ಏನೂ ಇಲ್ಲದೆ, ಯಾವ ಆತ್ಮಗೆ ಹೇಳುತ್ತಿದ್ದೇವೊ ಆಲೋಚಿಸದೆ ಹೇಳುವುದನ್ನು ನೋಡಿದರೆ, 1108 ಉಪನಿಷತ್ತುಗಳಲ್ಲಿ ಮುಖ್ಯವಾದವೆಂದು 108, ಅವುಗಳಲ್ಲಿ ಅತಿ ಮುಖ್ಯವಾದವುಗಳೆಂದು ಹತ್ತು ಉಪನಿಷತ್ತುಗಳನ್ನು

ಆಯ್ಕೆ ಮಾಡಿಕೊಂಡು, ಆ ದಶೋಪನಿಷತ್ತುಗಳಲ್ಲಿ ಒಂದಾದ ಕಠೋಪನಿಷತ್ತಿನಲ್ಲಿ ಹೀಗಿರುವುದು ಶೋಚನೀಯ. ಆತ್ಮ ಒಂದು ಶರೀರವೆಲ್ಲಾ ವ್ಯಾಪಿಸಿ ನಖ ಶಿಖ ಪರ್ಯಂತವು ಇರುತ್ತದೆ. ಪರಮಾತ್ಮನಾದರೆ ಶರೀರದೊಳಗೆ, ಶರೀರದ ಹೊರಗೆ ಅಣುವಣುವಿನಲ್ಲೂ ವ್ಯಾಪಿಸಿರುತ್ತದೆ. ಆತ್ಮಕ್ಕೆ ಶರೀರವಿದೆ ಆದರೆ ಪರಮಾತ್ಮನಿಗೆ ಶರೀರ ಇರುವುದಿಲ್ಲ. ಪರಮಾತ್ಮನನ್ನು 'ಅಶರೀರಿ' ಎಂದು ಹೇಳಬಹುದು ಆದರೆ, ಆತ್ಮನನ್ನು ಹಾಗೆ ಅನ್ನುವುದಕ್ಕೆ ಸಾಧ್ಯವಿಲ್ಲ. ಆತ್ಮ ಶರೀರಕ್ಕೆ ಅಧಿಪತಿಯಾಗಿದ್ದು ಶರೀರವನ್ನು ನಡೆಸುತ್ತಿದೆ. ಜೀವಾತ್ಮ ಶರೀರದಲ್ಲಿ ಒಂದುಕಡೆ ರವೆಯಷ್ಟು ಇರುವಾಗ, ಆತ್ಮ ಶರೀರವೆಲ್ಲವೂ ವ್ಯಾಪಿಸಿದೆ. ಪರಮಾತ್ಮ ಶರೀರದೊಳಗೂ, ಶರೀರದ ಹೊರಗೂ ಅಣುವಣುವಿನಲ್ಲೂ ವ್ಯಾಪಿಸಿದ್ದಾನೆ. ಪರಮಾತ್ಮನಿಗೆ ಶರೀರವೆನ್ನುವುದು ಏನೂ ಇಲ್ಲ. ಈ ವಿಧವಾಗಿ **ಜೀವಾತ್ಮ, ಆತ್ಮ, ಪರಮಾತ್ಮ** ವಿಷಯಗಳನ್ನು ತಿಳಿಯದಹಾಗೆ ಬರೆಯುವುದರಿಂದ ಕಠೋಪನಿಷತ್ತು ಬರೆದವರಿಗೆ ಸತ್ಯಾಸತ್ಯಗಳು ತಿಳಿದಿಲ್ಲ ಎಂದು ಹೇಳಬಹುದು. ಅಂತಹವರು ಉಪನಿಷತ್ತುಗಳು ಎಂದು ಹೆಸರಿಟ್ಟು ಬರೆದರೂ, ಅದರಲ್ಲಿ ಲೋಪಗಳು ಎಷ್ಟೋ ಕಾಣಿಸುತ್ತಿವೆ. ಅವುಗಳಲ್ಲಿ ಕೆಲವುಗಳನ್ನೇ ಸಾಕ್ಷಿಗಾಗಿ ತಿಳಿಸುತ್ತಿದ್ದೇವೆ.

ಈ ಶ್ಲೋಕಗಳಲ್ಲಿ "ಆತ್ಮವನ್ನು ತಿಳಿಯುವವನು ದುಃಖಪಡುವುದಿಲ್ಲ" ಎಂದು ಬರೆದಿದ್ದಾರೆ. ಆತ್ಮವನ್ನು ತಿಳಿಯಬಹುದು ಆದರೆ, ಪರಮಾತ್ಮನನ್ನು ತಿಳಿಯುವುದಕ್ಕೆ ಯಾರಿಗೂ ಸಾಧ್ಯಪಡುವುದಿಲ್ಲ. ಒಂದುವೇಳೆ ಆತ್ಮವನ್ನು ತಿಳಿದರೂ ದುಃಖಗಳು ಕರ್ಮದಲ್ಲಿದ್ದರೆ ಅವನನ್ನು ಬಿಟ್ಟುಹೋಗುವುದಿಲ್ಲ. ಆತ್ಮವನ್ನು ತಿಳಿದವರು ಕೂಡಾ ದುಃಖಗಳನ್ನು ಹೊಂದಬೇಕಾದ್ದೆ. ಆತ್ಮವನ್ನು ಅಧ್ಯಾಯನ ಮಾಡಿ ತಿಳಿಯಬಹುದು. ಅಷ್ಟುಮಾತ್ರಕ್ಕೆ ಅನುಭವಿಸುವ ಕರ್ಮಗಳು ಹೋಗುವುದಿಲ್ಲ. ದುಃಖಗಳು ಹೋಗಬೇಕೆಂದರೇ ಮನುಷ್ಯನಿಗಿರುವ ಪಾಪಕರ್ಮಗಳು ಇಲ್ಲದಹಾಗೆ ಹೋಗಬೇಕು. ಹಾಗೆ ಮನುಷ್ಯನ ಕರ್ಮಗಳು ಹೋಗಬೇಕೆಂದರೇ, ಅವುಗಳನ್ನು ಕ್ಷಮಿಸುವವನು ಇಲ್ಲದಹಾಗೆ ಮಾಡುವವನು ಪರಮಾತ್ಮ.

ಮನುಷ್ಯ ಸರಿಯಾದ ಜ್ಞಾನಮಾರ್ಗದಲ್ಲಿ ಇರುತ್ತಾ ಆತ್ಮವನ್ನು ತಿಳಿದಿದ್ದಾನೆಂದು ಪರಮಾತ್ಮಗೆ ತಿಳಿದರೆ ಆತನು ಅನುಭವಿಸಬೇಕಾಗಿರುವವುಗಳನ್ನು ಕ್ಷಮಿಸಿದರೆ, ಆಗ ಮನುಷ್ಯ ಕೆಲವು ದುಃಖಗಳಿಂದ ಹೊರಬೀಳಬಲ್ಲನು. ಈ ವಿಷಯ ತಿಳಿಯದೆ ಆತ್ಮವನ್ನು ತಿಳಿದವನು ದುಃಖಗಳನ್ನು ಹೊಂದುವುದಿಲ್ಲ ಎನ್ನುವುದು ಪೂರ್ತಿ ತಪ್ಪು. ಒಂದು ಶ್ಲೋಕದಲ್ಲಿಯೇ ಇಷ್ಟು ತಪ್ಪುಗಳಿದ್ದರೆ, ಪೂರ್ತಿ ಉಪನಿಷತ್ತುಗಳಲ್ಲಿ ಎಷ್ಟು ಲೋಪಗಳಿರುತ್ತವೊ ಹೇಳಲಾರೆವು ಆದರೆ, ಕೆಲವನ್ನು ಮಾತ್ರ ನಿಮಗೆ ತೋರಿಸುತ್ತಿದ್ದೇವೆ, ವಿಚಕ್ಷಣದಿಂದ ಗ್ರಹಿಸಬೇಕು.

## 17) ಪ್ರಶ್ನೆ :– ಶರೀರದಲ್ಲಿರುವ ಆತ್ಮ ಹೆಬ್ಬೆರಳು ಪರಿಮಾಣವಾಗಿ ಇದ್ದಾನೆಂದು ಒಂದು ಶ್ಲೋಕದಲ್ಲಿ ಹೇಳಿದ್ದಾರೆ. ಕಠೋಪನಿಷತ್ತಿನಲ್ಲಿ ಹೇಳಿದ ಈ ಶ್ಲೋಕ ವಾಸ್ತವವಾದುದೇನಾ, ಇದರಲ್ಲಿ ಲೋಪಗಳು ಇಲ್ಲವಾ?

**ಶ್ಲೋ॥ ಅಂಗುಷ್ಟ ಮಾತ್ರಃ ಪುರುಶೋಮಧ್ಯ ಆತ್ಮನಿ ತಿಷ್ಟತಿ,**
**ಈಶಾನೊ ಭೂತ ಭವ್ಯಸ್ಯ ನತತೋ ವಿಜುಗುಪ್ಸತೇ ಏತದ್ವೈತತ್ (4–12)**

**ಶ್ಲೋ॥ ಅಂಗುಷ್ಟಮಾತ್ರಃ ಪುರುಶೋ ಜ್ಯೋತಿರಿವಾಧೂಮಕಃ**
**ಈಶಾನ್ ಭೂತ ಭವ್ಯಸ್ಯ ಸ ಏವಾದ್ಯ ಸ ಉಶ್ವಃ ಏತ ದ್ವೈತತ್ (4–13)**

**ಭಾವಾರ್ಥ :– ಹೆಬ್ಬೆರಳಿನ ಪರಿಮಾಣವಿರುವ ಪುರುಷನು ಶರೀರದಲ್ಲಿ ಇದ್ದಾನೆ. ಈ ಪುರುಷನು ಭೂತಕಾಲ ಭವಿಷ್ಯತ್ಕಾಲಗಳಿಗೆ ಅಧಿಪತಿ ಆಗುವುದರಿಂದ ಇನ್ನು ಯಾರಿಗೂ ಭಯವಿಲ್ಲ. ಈತನೇ ಆ ಆತ್ಮ.**

**ಹೆಬ್ಬೆರಳಿನ ಪರಿಮಾಣ ಹೊಂದಿ ಭೂತ, ಭವಿಷ್ಯತ್ಕಾಲಗಳಿಗೆ ಅಧಿಪತಿಯಾಗುವ ಪುರುಷನು ಹೊಗೆಯಿಲ್ಲದ ಅಗ್ನಿಯಂತಹವನು. ಈ ದಿನ ನಾಳೆ ಕೂಡಾ ಭೇದ ರಹಿತನಾಗಿ ಈತನೇ ಇದ್ದಾನೆ. ಈತನೇ ಆ ಆತ್ಮ.**

**ಉತ್ತರ :–** ಆತ್ಮ ಶರೀರವೆಲ್ಲಾ ವ್ಯಾಪಿಸಿ ಶರೀರ ಆಕೃತಿಯನ್ನು ಹೋಲಿರುವಾಗ, ಜೀವಾತ್ಮ ಶರೀರದಲ್ಲಿನ ತಲೆಯಲ್ಲಿರುವ ಕಾಲ, ಕರ್ಮ, ಗುಣಚಕ್ರಗಳಲ್ಲಿ ಕೆಳಗಿರುವ ಗುಣಚಕ್ರದಲ್ಲಿ ಗುಣಗಳ ಮಧ್ಯದಲ್ಲಿ ನಿವಾಸಿಸುತ್ತಿದ್ದಾನೆ. ಜೀವಿಯ ಪರಿಮಾಣ ರವೆಯಷ್ಟುಯೆಂದು ಹೇಳಬಹುದು. ಆತ್ಮ ಶರೀರವೆಲ್ಲಾ ವ್ಯಾಪಿಸಿ ಶರೀರ ಆಕೃತಿಯನ್ನು ಹೋಲಿದೆ. ಆನೆಯಲ್ಲಿರುವ ಆತ್ಮ ಆನೆ ಶರೀರದಷ್ಟು ಪರಿಮಾಣದಲ್ಲಿ ಇದೆಯೆಂದು ಹೇಳಬಹುದು. ಮನುಷ್ಯನ ಶರೀರದಲ್ಲಿನ ಆತ್ಮ ಮನುಷ್ಯ ಶರೀರ ಪರಿಮಾಣದಲ್ಲಿ ಇದೆಯೆಂದು ಹೇಳಬಹುದು. ಈ ವಿಧವಾಗಿ ಯಾವ ಶರೀರದಲ್ಲಿ ಆತ್ಮ ಇದ್ದರೆ ಆ ಶರೀರವೆಲ್ಲಾ ತುಂಬಿದ್ದು ಆ ಶರೀರ ಆಕೃತಿಯನ್ನು ಹೋಲಿರುತ್ತದೆ. ಪರಮಾತ್ಮಗೆ ಪರಿಮಾಣವಿಲ್ಲ. ಆತನು ಅಳತೆಗಳು ಇಲ್ಲದವನು.

ಹೀಗೆ ಮೂರು ಆತ್ಮಗಳು ಇರುವಾಗ ಹೆಬ್ಬೆರಳಿನ ಪರಿಮಾಣದಲ್ಲಿ ಆತ್ಮ ಇದೆಯೆಂದು ಹೇಳುವುದು ಬ್ರಹ್ಮವಿದ್ಯಾ ಶಾಸ್ತ್ರಕ್ಕೆ ವಿರುದ್ಧ. ಹೆಬ್ಬೆರಳಿನ ಪರಿಮಾಣ ಎಂದು ಭಗವದ್ಗೀತೆಯಲ್ಲಾಗಲಿ, ಮತ್ತು ಯಾವ ಇತರೆ ದೈವಗ್ರಂಥ ಗಳಲ್ಲಾಗಲಿ ಹೇಳಲಿಲ್ಲ. ಆಧ್ಯಾತ್ಮಿಕಕ್ಕೆ ಶಾಸ್ತ್ರಬದ್ಧತೆ ಇದೆ. ಏನಾದರೂ ಆತ್ಮವನ್ನು ಕುರಿತು ಹೇಳಿದರೆ ಬ್ರಹ್ಮವಿದ್ಯಾ ಶಾಸ್ತ್ರವನ್ನು ಅನುಸರಿಸಿ ಹೇಳಬೇಕು. ಅಷ್ಟೇ ಹೊರತು ಪುರಾಣಗಳನ್ನು ಬರೆದಂತೆ ಕಲ್ಪಿಸಿ ಬರೆಯಬಾರದು. ಹಾಗೆ ಬರೆದರೆ ಪ್ರಜೆಗಳನ್ನು ತಪ್ಪುದಾರಿಯಲ್ಲಿ ಕಳಿಸಿದಂತಾಗುತ್ತದೆ. ಶಾಸ್ತ್ರಪ್ರಮಾಣ ಇಲ್ಲದ ಮಾತುಗಳನ್ನು ಬಿಟ್ಟು ಭಗವಂತನು ಹೇಳಿದ ಜ್ಞಾನವನ್ನು ಅನುಸರಿಸಿ ಆತ್ಮವನ್ನು ಕುರಿತು ಹೇಳುವುದು ಒಳ್ಳೆಯದು.

**18) ಪ್ರಶ್ನೆ :– ಜ್ಞಾನವಿರುವ ಮನುಷ್ಯನವೊಂದು ಆತ್ಮ ಬ್ರಹ್ಮವೇ ಆಗುತ್ತಿದೆಯೆಂದು ಕೆಳಗಿನ ಶ್ಲೋಕದಲ್ಲಿ ಹೇಳಿದ್ದಾರೆ. ಅದರ ಪ್ರಕಾರವಾದರೆ ಜ್ಞಾನವಿಲ್ಲದ ಅಜ್ಞಾನ ಮನುಷ್ಯನವೊಂದು ಆತ್ಮ ಬ್ರಹ್ಮ ಅಲ್ಲವಾ?**

**ಶ್ಲೋ॥ ಯಥೋದಕಂ ಶುದ್ದೇ ಶುದ್ಧಮಾಸಿಕ್ತಂ ತಾದೃಗೇವ ಭವತಿ,**
**ಏವಂ ಮುನೇ ರ್ವಿಜಾನತ ಆತ್ಮಾಭವತಿ ಗೌತಮ (4–15)**

**ಭಾವಾರ್ಥ :– ನಚಿಕೇತಾ! ನಿರ್ಮಲವಾದ ಜಲ ನಿರ್ಮಲವಾದ ಜಲದಲ್ಲಿ ಬಿದ್ದು ಅದರೊಂದಿಗೆ ಏಕವಾದಂತೆ ಜ್ಞಾನವಿರುವ ಮನುಷ್ಯನ ಆತ್ಮ ಕೂಡಾ ಬ್ರಹ್ಮವೇ ಆಗುತ್ತದೆ.**

**ಉತ್ತರ :–** ಶರೀರದಲ್ಲಿ ಮೂರು ಆತ್ಮಗಳು ಇವೆ. ಅವು ವರಸೆಯಾಗಿ ಜೀವಾತ್ಮ, ಆತ್ಮ, ಪರಮಾತ್ಮವಾಗಿ ಇವೆಯೆಂದು ಹೇಳಬಹುದು. ಜೀವಾತ್ಮಗಿಂತ ಆತ್ಮ ಎಲ್ಲಾ ವಿಧಗಳಲ್ಲಿ ದೊಡ್ಡದು ಆಗಿರುವುದರಿಂದ ಆತ್ಮವನ್ನು ಬ್ರಹ್ಮಯೆಂದು ಹೇಳಿದ್ದಾರೆ. **ಬ್ರಹ್ಮ** ಎಂದರೇ **'ದೊಡ್ಡದು'** ಎಂದು ಅರ್ಥವಿದೆ. ಜೀವಾತ್ಮಗಿಂತ ಆತ್ಮ ದೊಡ್ಡದಾಗಿದ್ದು, ಆತ್ಮಗಿಂತ ಪರಮಾತ್ಮ ಹೇಳಲಾರದಷ್ಟು ದೊಡ್ಡದಾಗಿದೆ. ಆದ್ದರಿಂದ ಅದನ್ನು ಪರಬ್ರಹ್ಮ ಎಂದು ಕರೆಯುತ್ತಿದ್ದೇವೆ. ಬ್ರಹ್ಮಯೆಂದು ಆತ್ಮವನ್ನು ಹೇಳುತ್ತಿದ್ದೇವೆ. ಜೀವಾತ್ಮವನ್ನು ಜೀವಿಯೆಂದು, ಆತ್ಮನನ್ನು ದೇವರು ಅಥವಾ ಬ್ರಹ್ಮಯೆಂದು ಕರೆಯುತ್ತಿದ್ದೇವೆ. ಮನುಷ್ಯ ಜ್ಞಾನಿಯಾಗಲಿ, ಅಜ್ಞಾನಿಯಾಗಲಿ ಯಾರಾದರೂ ಆಗಬಹುದು. ಆತನ ಶರೀರದಲ್ಲಿರುವ ಆತ್ಮವನ್ನು **'ಬ್ರಹ್ಮ'** ಎಂದೇ ಹೇಳಬೇಕು. ಮೇಲಿನ ಶ್ಲೋಕದಲ್ಲಿ ಜ್ಞಾನವಿರುವ ಮನುಷ್ಯನ ಶರೀರದಲ್ಲಿನ ಆತ್ಮವನ್ನು ಬ್ರಹ್ಮಯೆಂದು ಕರೆಯಬಹುದು ಎಂದು ಹೇಳಿದ್ದಾರೆ. ಅದರ ಪ್ರಕಾರವಾದರೆ ಜ್ಞಾನವಿಲ್ಲದ ಮನುಷ್ಯನ ಶರೀರದಲ್ಲಿರುವ ಆತ್ಮವನ್ನು ಬ್ರಹ್ಮಯೆಂದು ಅನ್ನಬಾರದೆಂದು ಅರ್ಥವಾಗುತ್ತಿದೆ. ಮನುಷ್ಯ ಅಜ್ಞಾನಿಯಾಗಲಿ, ಜ್ಞಾನಿಯಾಗಲಿ ಯಾರಾದರೂ ಆಗಬಹುದು, ಆತನ ಶರೀರದಲ್ಲಿರುವ ಆತ್ಮವನ್ನು 'ಬ್ರಹ್ಮ' ಎಂದೇ ಹೇಳಬೇಕು. ಅಷ್ಟೇ ಅಲ್ಲದೆ ತಿಳಿವಳಿಕೆ ಇರುವ ಮನುಷ್ಯನಲ್ಲಾಗಲಿ, ತಿಳಿವಳಿಕೆಯಿಲ್ಲದ ಜೀವರಾಶಿಗಳಲ್ಲಾಗಲಿ ಇರುವ ಆತ್ಮವನ್ನು ಬ್ರಹ್ಮ ಅಥವಾ ದೇವರುಯೆಂದು ಹೇಳುತ್ತಿದ್ದೇವೆ. ಹಾಗಿರುವಾಗ ಕೇವಲ ಜ್ಞಾನ ಇರುವ ಮನುಷ್ಯನ ಶರೀರದಲ್ಲಿನ ಆತ್ಮವನ್ನು ಮಾತ್ರವೇ ಬ್ರಹ್ಮಯೆಂದು ಹೇಳುವುದು ಕಠೋಪನಿಷತ್ತಿನಲ್ಲಿ ಲೋಪವೇ ಆಗುತ್ತದೆ.

**19) ಪ್ರಶ್ನೆ :– ಬ್ರಹ್ಮ ಎನ್ನುವ ಆತ್ಮವನ್ನು ಅಜನು ಎಂದು ಅಗತ್ಯ ಬಂದಾಗ ಹೇಳಬಹುದು. ಅಜನು ಎಂದರೇ ಜನ್ಮ ಇಲ್ಲದವನು ಎಂದು ಅರ್ಥ. ಅಜನು ಆದ ಆತ್ಮ ನಿವಾಸಿಸುವ ಶರೀರವನ್ನು ಅಜನ ಪುರ ಎಂದು ಹೇಳಬಹುದು. ಅಜನ ಪುರಕ್ಕಿರುವ ದಾರಿಗಳನ್ನು ಕುರಿತು ಹೇಳುತ್ತಾ ಕೆಳಗಿನ ಶ್ಲೋಕದಲ್ಲಿ ಹನ್ನೊಂದು ಎಂದು ಹೇಳಿದ್ದಾರೆ. ವಾಸ್ತವವಾಗಿ ಹನ್ನೊಂದು ದಾರಿಗಳೇ ಇವೆಯಾ ಅಥವಾ ಹೆಚ್ಚಾಗಲಿ, ಕಡಿಮೆಯಾಗಲಿ ಇವೆಯಾ ಎಂದು ಕೇಳುತ್ತಿದ್ದೇವೆ. ಕೆಳಗಿನ ಶ್ಲೋಕವನ್ನು ನೋಡಿರಿ.**

**ಉತ್ತರ :– ಕಠೋಪನಿಷತ್ತಿನಲ್ಲಿ ಹೇಳಿದ ಈ ಶ್ಲೋಕವನ್ನು ಕೆಳಗೆ ನೋಡಿರಿ.**

**ಶ್ಲೋ॥**

**ಪುರ ಮೇಕಾದಶ ದ್ವಾರ ಮಜಸ್ಯಾವಕ್ರ ಚೇತಸಃ**
**ಅನುಷ್ಟಾಯ ನ ಶೋಚತಿ ವಿಮುಕ್ತಶ್ಚ ವಿಮುಚ್ಯತೇ ಏ ತದ್ವೈತತ್ (5–1)**

**ಭಾವಾರ್ಥ :– ನಿತ್ಯನು, ಚೈತನ್ಯ ಸ್ವರೂಪನಾದ ಈ ಅಜನ ಪುರಕ್ಕೆ ಹನ್ನೊಂದು ದ್ವಾರಗಳು ಇವೆ. ಈ ಅಜನನ್ನು ಧ್ಯಾನಿಸಿದವನಿಗೆ ಶೋಕವಿಲ್ಲ.**

"ಆತನು ಅಜ್ಞಾನ ಸಂಬಂಧದಿಂದ ಬಿಡುಗಡೆ ಹೊಂದಿ ಸ್ವಾತಂತ್ರ್ಯವನ್ನು ಪಡೆಯುತ್ತಾನೆ. ಆತನೇ ಈ ಆತ್ಮ" ಎಂದು ಭಾವನೆಯಲ್ಲಿ ಬರೆದಿದ್ದಾರೆ. "ಆತ್ಮನನ್ನು ಧ್ಯಾನಿಸಿದವನು ಸ್ವಾತಂತ್ರ್ಯವನ್ನು ಹೊಂದುತ್ತಾನೆ ಎನ್ನುವುದು ವಾಸ್ತವವೇ ಆದರೂ ಆತ್ಮ ಪುರಕ್ಕೆ ಹನ್ನೊಂದು ದ್ವಾರಗಳು ಎಂದು ಬರೆಯುವುದು, ದೊಡ್ಡ ಲೋಪವಾಗಿ ಕಾಣಿಸುತ್ತಿದೆ. ಆತ್ಮ ನಿವಾಸಿಸುವ ಶರೀರವನ್ನು ಆತ್ಮ ಪುರ ಎಂದು ಹೇಳುವುದರಲ್ಲಿ ತಪ್ಪಿಲ್ಲ. ಅದನ್ನೇ ಅಜನ

ಪುರ ಎಂದಿದ್ದಾರೆ, ಅದರಲ್ಲಿ ಕೂಡಾ ತಪ್ಪಿಲ್ಲ. ಆತ್ಮಗೆ ಜನ್ಮವಿಲ್ಲ, ಆತ್ಮ ಜೀವಿಯೊಂದಿಗೆ ಶರೀರಗಳನ್ನು ಬದಲಾಗುತ್ತಿದ್ದರೂ, ಕರ್ಮವಿರುವ ಜೀವಿಗೆ ಮಾತ್ರ ಅದು ಜನ್ಮಯೆಂದು ಹೇಳಲ್ಪಡುತ್ತದೆ. ಜೀವಿಯೊಂದಿಗೆ ಇರುವ ಆತ್ಮಗೆ ಅದು ಜನ್ಮವಲ್ಲ. ಆದ್ದರಿಂದ ಆತ್ಮವನ್ನು 'ಜನ್ಮ ಇಲ್ಲದವನು' ಎಂದು ಹೇಳುವುದಕ್ಕೆ ಬದಲು 'ಅಜನು' ಎಂದು ಹೇಳಿದ್ದಾರೆ. ಅಜನು ಎಂದರೇ ಜನ್ಮ ಇಲ್ಲದವನು ಎಂದು ಮಾತ್ರವೇ ಅರ್ಥವಿದೆ. ಬ್ರಹ್ಮವಿದ್ಯಾ ಶಾಸ್ತ್ರಕ್ಕೆ ಪ್ರತಿ ರೂಪವಾಗಿರುವ ಪ್ರಥಮ ದೈವಗ್ರಂಥವಾದ ಭಗವದ್ಗೀತೆಯಲ್ಲಿ ಜ್ಞಾನಯೋಗ ಎಂಬ ಅಧ್ಯಾಯದಲ್ಲಿ ಆರನೆ ಶ್ಲೋಕದಲ್ಲಿ 'ಅಜೋಪಿ' ಎಂದು ಆತ್ಮವನ್ನು ಸಂಬೋಧಿಸಿದ್ದಾರೆ. 'ಅಜೋಪಿ' ಅಂದರೇ ಜನ್ಮಯಿಲ್ಲದವನು ಅಜನು ಎಂದು ಅರ್ಥ. ಅದೇ ಪದವನ್ನೇ ಕಠೋಪನಿಷತ್ತಿನಲ್ಲಿ ಕೂಡ ಹೇಳುವುದು ಒಳ್ಳೆಯದೇ. ಆದರೇ ಅಜನ ಪುರಕ್ಕೆ ದ್ವಾರಗಳು ಹನ್ನೊಂದು ಎನ್ನುವುದರಲ್ಲಿ ಸ್ವಲ್ಪ ಆಲೋಚಿಸಬೇಕಾಗಿದೆ.

ಶರೀರವನ್ನು ಅಜನ ಪುರ ಎನ್ನುತ್ತಿದ್ದೇವೆ. ಅಜನ ಪುರವಾದ ಶರೀರಕ್ಕೆ ಯಾವ ವಿಧವಾಗಿ ನೋಡಿದರೂ ಒಂಭತ್ತು ರಂಧ್ರಗಳು ಮಾತ್ರವೇ ಇವೆ. ಎರಡು ಕಿವಿಗಳು, ಎರಡು ಕಣ್ಣುಗಳು, ಎರಡು ಮೂಗುಗಳು, ಒಂದು ಬಾಯಿ, ಒಂದು ಗುದ, ಒಂದು ಲಿಂಗ ಎನ್ನುವ ಒಂಭತ್ತು ಅವಯವಗಳ ಹತ್ತಿರ ಮಾತ್ರ ರಂಧ್ರಗಳು ಇವೆ. **ಆರು** ಜ್ಞಾನೇಂದ್ರಿಯಗಳು, **ಮೂರು** ಕರ್ಮೇಂದ್ರಿಯಗಳ ಹತ್ತಿರ ಮಾತ್ರವೇ ರಂಧ್ರಗಳು ಇವೆ. ಒಂಭತ್ತು ರಂಧ್ರಗಳನ್ನೇ ಒಂಭತ್ತು ದ್ವಾರಗಳಾಗಿ ಹೇಳುತ್ತಿದ್ದೇವೆ. ಶರೀರದಲ್ಲಿ ಈಶ್ವರನಾಗಿರುವ ಆತ್ಮವನ್ನು **ಆರು** ಸಂಖ್ಯೆಯಿಂದಲೂ, ಜೀವಿಯನ್ನು **ಮೂರು** ಸಂಖ್ಯೆಯಿಂದಲೂ ಗುರುತಿಸುತ್ತಿದ್ದೇವೆ. ಆತ್ಮ ಎಂದರೇ **'6'** ಎಂದೂ, ಜೀವಾತ್ಮ ಎಂದರೇ **'3'** ಎಂದೂ, ಎರಡನ್ನು ಸೇರಿಸಿದರೆ ಒಂಭತ್ತು ಆಗುತ್ತದೆ. ಆದ್ದರಿಂದ ಪರಮಾತ್ಮ ಗುರುತಾಗಿ '9' ನ್ನು ಹೇಳುತ್ತಾ, 9, 6, 3 ಎಂದು ಗತದಲ್ಲಿ ಕೂಡಾ ಹೇಳಿದ್ದೇವೆ. ಜೀವಿಯು ಕರ್ಮದಿಂದ ಕೂಡಿಕೊಂಡವನು ಆದ್ದರಿಂದ ಜೀವಾತ್ಮವನ್ನು ಕರ್ಮೇಂದ್ರಿಯಗಳಿಗೆ ಗುರುತಾಗಿ

ಮೂರು ಸಂಖ್ಯೆಯಾಗಿ ಹೇಳಿದ್ದೇವೆ. ಹಾಗೇ ಆತ್ಮಜ್ಞಾನದಿಂದ ಕೂಡಿಕೊಂಡಿರುವವನು, ಜ್ಞಾನಕ್ಕೆ ನಿಲಯ ಆಗಿರುವುದರಿಂದ ಜ್ಞಾನೇಂದ್ರಿಯಗಳ ಸಂಖ್ಯೆಯಾದ **ಆರಕ್ಕೆ** ಹೋಲಿಸಿ ಹೇಳಿದ್ದೇವೆ. ಜೀವಿಯು ಆತ್ಮನಲ್ಲಿ ಬೆರೆತರೆ, ಆತ್ಮ ಪರಮಾತ್ಮನಲ್ಲಿ ಬೆರೆತು ಜೀವಿಯು ಪರಮಾತ್ಮನಾಗಿ ಬದಲಾಗಿಹೋ ಗುತ್ತಿದ್ದಾನೆ ಆದ್ದರಿಂದ ಮೂರು ಆರನ್ನು ಸೇರಿಸಿದರೆ ಬರುವ **ಒಂಭತ್ತು** ಸಂಖ್ಯೆಯನ್ನು ಪರಮಾತ್ಮಗೆ ಗುರುತಾಗಿ ಹೇಳಿದ್ದೇವೆ.

ಗಣಿತ ಶಾಸ್ತ್ರವನ್ನು ಅನುಸರಿಸಿ ಜೀವಾತ್ಮವನ್ನು ಮೂರಾಗಿ, ಆತ್ಮವನ್ನು ಆರಾಗಿ, ಪರಮಾತ್ಮನನ್ನು ಒಂಭತ್ತಾಗಿ ಹೇಳುತ್ತಾ **"ದೇವರ ಗುರುತು 9 6 3"** ಎಂದು ಒಂದು ಚಿಕ್ಕ ಗ್ರಂಥವನ್ನು ಕೂಡಾ ಬರೆದಿದ್ದೇವೆ. ಈ ಲೆಕ್ಕಗಳೆಲ್ಲವೂ ಶರೀರಕ್ಕಿರುವ ರಂಧ್ರಗಳೊಂದಿಗೆ ಲೆಕ್ಕಿಸಿ ಹೇಳಿರುವವೇಯೆಂದು ತಿಳಿಯಬೇಕು. ಇದರ ಪ್ರಕಾರ ಶರೀರಕ್ಕೆ ರಾಜ, ಅಧಿಪತಿ, ಈಶ್ವರನು ಎಂದು ಹೇಳಲ್ಪಡುವ ಆತ್ಮವನ್ನು ಅಜನು ಎಂದೂ, ಶರೀರ ರಂಧ್ರಗಳನ್ನು ಅಜನ ಪುರಕ್ಕೆ ದ್ವಾರಗಳೆಂದು ಹೇಳುತ್ತಿದ್ದೇವೆ. ಜೀವಾತ್ಮ ಆತ್ಮಗಿಂತ ಚಿಕ್ಕವನು ಆದ್ದರಿಂದ, ಜೀವಿಗೆ ಸಂಬಂಧಿಸಿದ ಮೂರು ದ್ವಾರಗಳು ಬಾಯಿ, ಗುದ, ಲಿಂಗ ಎನ್ನುವವು ಮೂರು, ಆತ್ಮ ಗುರುತುಗಳಾಗಿ ಹೋಲಿಸಿರುವ ಕಿವಿಗಳು, ಕಣ್ಣುಗಳು, ಮೂಗುಗಳಿಗೆ ಕೆಳಗಿನ ಭಾಗದಲ್ಲಿ ಇವೆ. ಆತ್ಮ ಎಲ್ಲಾ ವಿಧಗಳಲ್ಲಿ ಜೀವಿಗಿಂತ ಮೇಲಿನವನೇ ಆದ್ದರಿಂದ, ಆತ್ಮ ಗುರುತಾಗಿ ಹೇಳಿದ ಜ್ಞಾನೇಂದ್ರಿಯಗಳು ಮೂರು, ಕರ್ಮೇಂದ್ರಿಯಗಳಿಗಿಂತ ಮೇಲೆ ಇವೆ. ಶರೀರ ಒಟ್ಟಾರೆ ಆತ್ಮ ಅಧೀನದಲ್ಲಿರುವುದರಿಂದ ಶರೀರಕ್ಕಿರುವ ರಂಧ್ರಗಳೆಲ್ಲವನ್ನು ದ್ವಾರಗಳಾಗಿ ಹೇಳಿದರೆ ಒಂಭತ್ತು ದ್ವಾರಗಳೆಂದೇ ಹೇಳಬೇಕು. ಆದ್ದರಿಂದ ಅಜನ ಪುರಕ್ಕೆ ಹನ್ನೊಂದು ದ್ವಾರಗಳೆನ್ನುವುದು ಎಲ್ಲಾ ವಿಧಗಳಲ್ಲಿ ತಪ್ಪಾಗಿ ಇದೆಯೆಂದು ಹೇಳಬಹುದು.

## 20) ಪ್ರಶ್ನೆ :- ಹೆಬ್ಬೆರಳಿನ ಪರಿಮಾಣವಿರುವ ಅಂತರಾತ್ಮ ಯೆನ್ನುವ ಪುರುಷನು ಸದಾಪ್ರಾಣಿಗಳ ಹೃದಯಗಳಲ್ಲಿ

**ವಾಸಿಸುವನು. ಮುಂಜ ಹುಲ್ಲಿನಿಂದ ದರ್ಭೆಯನ್ನು ಬೇರೆ ಮಾಡಿದಹಾಗೆ, ಮನುಜನ ಶರೀರದಿಂದ ಇದನ್ನು ಬೇರೆ ಮಾಡಬೇಕು. ಇದೇ ಶುದ್ಧ, ಅಮೃತ ಎಂದು ತಿಳಿದುಕೊಳ್ಳಬೇಕು (ಈ ಭಾವನೆಗೆ ಹೇಳಿರುವ ಕಠೋಪನಿಷತ್ತಿನಲ್ಲಿನ ಶ್ಲೋಕವನ್ನು ನೋಡಿರಿ)**

**ಶ್ಲೋ॥**

**ಅಂಗುಷ್ಟಮಾತ್ರಃ ಪುರುಷೋನ್ತರಾತ್ಮಾ ಸದಾ ಜನಾನಾಂ ಹೃದಯೇ ಸನ್ನಿವಿಷ್ಟಃ**
**ತಂ ಸ್ವಾಚ್ಛರೀರಾತ್ರು ವೃಹೇನ್ಮು ಙ್ಞಾದಿ ವೇಷೀಕಾಂ ಧೈರ್ಯೇಣ**
**ತಂ ವಿದ್ಯಾಚ್ಛುಕ್ರ ಮಮೃತಂ ತಂ ವಿದ್ಯಾಚ್ಛುಕ್ರ ಮಮೃತ ಮಿತಿ (6–17)**

**ಈ ಶ್ಲೋಕ ಭಾವ ಮೇಲೆ ಇದೆ ಅಲ್ಲವೇ! ಆಧ್ಯಾತ್ಮಿಕ ರೀತಿ ಇದು ವಾಸ್ತವವಾದ ಜ್ಞಾನವೇನಾ?**

**ಉತ್ತರ :–** ಶರೀರದಲ್ಲಿನ ಆತ್ಮ ಹೆಬ್ಬೆರಳಿನ ಪರಿಮಾಣವಾಗಿ ಇದೆಯೆಂಬುದು ಅಸತ್ಯವೆಂದು ಇದಕ್ಕುಮುನ್ನವೇ ಹೇಳಿದ್ದೇನೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾಗಿರುವುದು ಏನೆಂದರೇ! ಹೃದಯ ಎಂದರೇ ಮನುಷ್ಯನಲ್ಲಿನ ಗುಂಡಿಗೆಯೆಂದು ಬಹಳಜನ ಹೇಳುವುದು ನಡೆಯುತ್ತಿದೆ. ಆತ್ಮ ಹೃದಯಗಳಲ್ಲಿ ನಿವಾಸಿಸುವುದು ಸತ್ಯವೇ ಆದರೂ ಹೃದಯವನ್ನು ಗುಂಡಿಗೆ ಎಂದು ಅಂದುಕೊಳ್ಳುವುದು ದೊಡ್ಡ ತಪ್ಪೆಂದು ಹೇಳಬಹುದು. ಗುಂಡಿಗೆಗು ಹೃದಯಕ್ಕು ಸ್ವಲ್ಪವೂ ಸಂಬಂಧವಿಲ್ಲ. ರಕ್ತವನ್ನು ಪಂಪು ಮಾಡುತ್ತಾ, ಶರೀರವೆಲ್ಲಾ ರಕ್ತವನ್ನು ಹರಡುವ ಹಾಗೆ ಮಾಡುವುದು ಗುಂಡಿಗೆ. ಆತ್ಮಗೆ ನಿಲಯವಾಗಿರುವುದು ಹೃದಯ. ಹೃದಯದಿಂದ ಆತ್ಮ ತನ್ನ ಶಕ್ತಿಯನ್ನು ಶರೀರವೆಲ್ಲಾ ಪ್ರಸರಿಸುವಂತೆ ಮಾಡುತ್ತಿದೆ. ಹೃದಯ ಎಂದರೇ ದೊಡ್ಡನಾಡಿ ಅಥವಾ ಬ್ರಹ್ಮನಾಡಿಯೆಂದು ಹೇಳಬಹುದು. ಶರೀರದಲ್ಲಿನ ಎಲ್ಲಾ ನಾಡಿಗಳಲ್ಲಿ ಅತಿ ದೊಡ್ಡನಾಡಿಗಳು ಮೂರು ಇವೆ. ಅವುಗಳನ್ನೇ ಇಡಾ,

ಪಿಂಗಳ, ಸುಷುಮ್ನ ನಾಡಿಗಳೆಂದು ಕರೆಯುತ್ತಾರೆ. ಅವುಗಳನ್ನೇ ಸೂರ್ಯನಾಡಿ, ಚಂದ್ರನಾಡಿ, ಬ್ರಹ್ಮನಾಡಿಯೆಂದು ಅನ್ನುತ್ತಾರೆ. ಮೂರು ನಾಡಿಗಳಲ್ಲಿ ಬ್ರಹ್ಮನಾಡಿಯೇ ದೊಡ್ಡದು. ಬ್ರಹ್ಮನಾಡಿ ಬೆನ್ನುಮೂಳೆಯಲ್ಲಿ ಹಾವಿನ ಆಕಾರದಲ್ಲಿ ಇದೆಯೆಂದು ಅನ್ನುತ್ತಾರೆ. ಕುಂಡಲಿ (ಬೆನ್ನುಹುರಿ) ಯನ್ನೇ ನಾವು ಹೃದಯ ಎಂದು ಕೂಡಾ ಕರೆಯುತ್ತೇವೆ.

ಕುಂಡಲಿ ಶಿರಸ್ಸಿನಿಂದ ಮೊದಲುಗೊಂಡು ಗುದಸ್ಥಾನದವರೆಗು ವ್ಯಾಪಿಸಿದೆಯೆಂದು ಹೇಳಬಹುದು. ಬೆನ್ನುಹುರಿ ಎನ್ನುವ ದೊಡ್ಡ ನರ ಬೆನ್ನನ್ನು ಅನುಸರಿಸಿ ತಲೆಯಿಂದ ಕೆಳಗೆ ಗುದಸ್ಥಾನದವರೆಗು ವ್ಯಾಪಿಸಿದೆಯೆಂದು ಎಲ್ಲರೂ ತಿಳಿಯಬೇಕು. ಕುಂಡಲಿ ಎನ್ನುವ ನರದಲ್ಲಿ ಆತ್ಮ ನಿವಾಸಿಸುತ್ತಿದೆ. ಸೂರ್ಯನು ಒಂದುಕಡೆ ಇದ್ದು ಪ್ರಪಂಚವೆಲ್ಲವೂ ಪ್ರಕಾಶಿಸುವಹಾಗೆ, ಆತ್ಮ ಕುಂಡಲಿಯಲ್ಲಿದ್ದು ತನ್ನ ಶಕ್ತಿಯನ್ನು ಶರೀರವೆಲ್ಲಾ ವ್ಯಾಪಿಸುವಹಾಗೆ ಮಾಡುತ್ತಿದೆ. ಇದೇ ವಿಷಯವನ್ನೇ ಭಗವದ್ಗೀತೆಯಲ್ಲಿ ಕ್ಷೇತ್ರಕ್ಷೇತ್ರಜ್ಞ ಯೋಗ ಎಂಬ ಅಧ್ಯಾಯದಲ್ಲಿ 34ನೇ ಶ್ಲೋಕದಲ್ಲಿ ಹೇಳಿದ್ದಾರೆ.

**ಶ್ಲೋ॥ 34.** **ಯಥಾ ಪ್ರಕಾಶಯತ್ಯೇಕಂ ಕೃತ್ಸ್ನಂ ಲೋಕಮಿಮಂ ರವಿಃ।**
**ಕ್ಷೇತ್ರಂ ಕ್ಷೇತ್ರೀ ತಥಾ ಕೃತ್ಸ್ನಂ ಪ್ರಕಾಶಯತಿ ಭಾರತ ॥**

**ಭಾವಾರ್ಥ :–** ಹೇಗೆ ಸೂರ್ಯನೊಬ್ಬನೇ ಈ ಲೋಕವನ್ನು ಪ್ರಕಾಶಿಸುವಹಾಗೆ ಮಾಡುತ್ತಿದ್ದಾನೊ, ಹಾಗೆ ಆತ್ಮ ತನ್ನ ದೇಹವೆಲ್ಲವೂ ತನ್ನ ಶಕ್ತಿಯನ್ನು ವ್ಯಾಪಿಸುವ ಹಾಗೆ ಮಾಡುತ್ತಿದೆ.

**"ಸೂರ್ಯನು ಬೆಳಗುವ ಕಿರಣಗಳನ್ನು ಪ್ರಪಂಚವೆಲ್ಲಾ ಪ್ರಸರಿಸುವಂತೆ, ಆತ್ಮ ತನ್ನಶಕ್ತಿ ಅಲೆಗಳನ್ನು ಮನುಷ್ಯನ ಶರೀರದಲ್ಲಿ ವ್ಯಾಪಿಸುವಹಾಗೆ ಮಾಡುತ್ತಿದೆ"** ಎಂದು ಭಗವದ್ಗೀತೆಯಲ್ಲಿ ಕೂಡಾ ಹೇಳಿದ್ದಾರೆ ಅಲ್ಲವೇ! ಆತ್ಮ ಬ್ರಹ್ಮನಾಡಿಯೆಲ್ಲಾ ನಿವಾಸವಾಗಿದ್ದು ಅಲ್ಲಿಂದ ಶರೀರವೆಲ್ಲಾ ವ್ಯಾಪಿಸಿದ ನರಗಳ ಮೂಲಕ ತನ್ನ ಶಕ್ತಿಯನ್ನು ಶರೀರವೆಲ್ಲಾ ಪ್ರಸರಿಸುತ್ತಿದೆ. ಇದನ್ನನುಸರಿಸಿ ಆತ್ಮ ಶರೀರವೆಲ್ಲಾ

ತುಂಬಿದೆಯೆಂದು ಹೇಳಬಹುದು. ಬ್ರಹ್ಮನಾಡಿಯಿಂದ ತನ್ನ ಸಾಮ್ರಾಜ್ಯವನ್ನು ಶರೀರವೆಲ್ಲಾ ವಿಸ್ತರಿಸಿರುವುದರಿಂದ ಶರೀರವೆಷ್ಟು ಇದೆಯೋ ಆತ್ಮ ಅಷ್ಟು ಇದೆಯೆಂದು ಹೇಳಬಹುದು. ಅಂತಹ ಆತ್ಮವನ್ನು ಶರೀರದಿಂದ ಯಾರಾದರೂ ಬೇರೆ ಮಾಡಿದರೆ ಅದನ್ನು 'ಆತ್ಮಹತ್ಯೆ' ಎಂದು ಹೇಳಬಹುದು. ಆದ್ದರಿಂದ ಆತ್ಮವನ್ನು ಶರೀರದಿಂದ ಬೇರೆ ಮಾಡುವುದು ದೊಡ್ಡ ತಪ್ಪಾಗುತ್ತದೆ. ಆದರೇ ಮೇಲಿನ ಶ್ಲೋಕದಲ್ಲಿ ಶರೀರದಿಂದ ಆತ್ಮವನ್ನು ಬೇರೆ ಮಾಡಬೇಕೆಂದು ಅದೇ ಶುದ್ಧ, ಅಮೃತ ಎಂದು ಹೇಳಿದ್ದಾರೆ. ಅದು ಏನೇ ಆಗಲಿ ವಾಸ್ತವವಾಗಿ ಶರೀರದಿಂದ ಆತ್ಮವನ್ನು ಬೇರೆಮಾಡಿದರೆ ಅದು ಆತ್ಮವನ್ನು ಹತ್ಯೆ ಮಾಡಿದಂತಾಗುತ್ತದೆ, ಶುದ್ಧ ಪಾಪ ಏರ್ಪಡುತ್ತದೆ. ಆದ್ದರಿಂದ ಈ ಶ್ಲೋಕವನ್ನು ಹೇಳಿದ ವ್ಯಕ್ತಿಗೆ ಆತ್ಮವೊಂದರ ಜ್ಞಾನ ಸ್ವಲ್ಪವೂ ತಿಳಿದಿಲ್ಲವೆಂದು ಹೇಳಬಹುದು. ಒಂದು ಮುಖ್ಯವಾದ ಉಪನಿಷತ್ತಿನಲ್ಲಿ ಹೀಗೆ ಇರುವುದು ದೊಡ್ಡ ಲೋಪ.

## ಪ್ರಶ್ನೋಪನಿಷತ್ತು

**21) ಪ್ರಶ್ನೆ :– ಈಗ ಪ್ರಶ್ನೋಪನಿಷತ್ತಿನಲ್ಲಿನ ಒಂದು ಶ್ಲೋಕವನ್ನು ನೋಡಿ, ಅದರಲ್ಲಿ ಹೇಳಿದ ವಿಷಯ ಲೋಪಭೂಯಿಷ್ಟವಾಗಿ ಇದೆಯೆಂದು ನನಗರ್ಥವಾಗುವುದರಿಂದ ನನ್ನ ಭಾವನೆ ಸರಿಯಾದುದಾ, ಅಲ್ಲವಾಯೆಂದು ನಿಮ್ಮನ್ನು ಕೇಳುತ್ತಿದ್ದೇನೆ. ನಾನು ನೋಡಿದ ಶ್ಲೋಕ, ಅದರ ಭಾವನೆಯನ್ನು ಕೆಳಗೆ ಬರೆಯುತ್ತಿದ್ದೇನೆ. ನೋಡಿ ಹೇಳಿರೆಂದು ಕೋರುತ್ತಿದ್ದೇನೆ?**

**ಶ್ಲೋ॥ ಅಥೋತ್ತರೇಣ ತಪಸಾ ಬ್ರಹ್ಮಚರ್ಯೇಣ ಶ್ರದ್ಧಯಾ**
**ವಿದ್ಯಯಾತ್ಮಾನ ಮನ್ವಿಷ್ಯಾದಿತ್ಯ ಮಭಿಜಯನ್ತ, ಏತದ್ವೈ**

**ಪ್ರಾಣಾನಾಮಾಯತನ ಮೇತ ದಮೃತ ಮಭಯ ಮೇತತ್ಪ**

**ರಾಯಣ ಮೇ ತಸ್ಮಾನ್ನ ಪುನರಾವರ್ತಂತ (1–10)**

**ಭಾವಾರ್ಥ :– ಕೆಲವರು ಮಹನೀಯರು ಉತ್ತಮಮಾರ್ಗವನ್ನು ಅವಲಂಭಿಸಿ ತಪಸ್ಸು, ಬ್ರಹ್ಮಚರ್ಯ, ಶ್ರದ್ಧೆ, ವಿದ್ಯೆ ಎನ್ನುವವನಿಂದ ಆತ್ಮವನ್ನು ತಿಳಿದು, ಸೂರ್ಯ ಲೋಕವನ್ನು ಜಯಿಸುತ್ತಾರೆ. ಈ ಆತ್ಮರೂಪ ಸೂರ್ಯನೇ ಪ್ರಾಣಾಧಾರ. ಇದು ಅಮೃತ, ಭಯರಹಿತ. ಎಲ್ಲದಕ್ಕಿಂತ ಶ್ರೇಷ್ಠವಾದ ಗತಿ. ಇಲ್ಲಿಂದ ಪುನಃ ಮತ್ತೆ ಬರುವುದು ಇಲ್ಲ. ಅಂದರೇ ಪುನರ್ಜನ್ಮ ಇಲ್ಲ.**

**ಉತ್ತರ :–** ಪುನರ್ಜನ್ಮ ಇಲ್ಲ ಎಂದರೇ ಆತನು ಮೋಕ್ಷವನ್ನು ಹೊಂದಿ ದೇವರಲ್ಲಿ ಐಕ್ಯವಾಗಿ ಹೋಗುತ್ತಾನೆಂದು ಹೇಳುವುದು. ಆದರೇ ಮೋಕ್ಷವನ್ನು ಹೊಂದಬೇಕೆಂದರೇ, ದೇವರನ್ನು ಸೇರಬೇಕು ಎಂದರೇ **"ತಪಸ್ಸುಗಳಿಂದ, ವೇದಗಳಿಂದ, ಯಜ್ಞಗಳಿಂದ ಸಾಧ್ಯ ಆಗುವುದಿಲ್ಲವೆಂದು"** ಭಗವದ್ಗೀತೆಯಲ್ಲಿ ವಿಶ್ವರೂಪ ಸಂದರ್ಶನ ಯೋಗ ಎಂಬ ಅಧ್ಯಾಯದಲ್ಲಿ 48, 53 ಶ್ಲೋಕಗಳಲ್ಲಿ ಹೇಳಿದ್ದಾರೆ. ಹಾಗಿರುವಾಗ ತಪಸ್ಸಿನಿಂದ ಪುನರ್ಜನ್ಮ ಇಲ್ಲದೇ ಮೋಕ್ಷವನ್ನು ಹೊಂದುತ್ತಾರೆ ಎನ್ನುವುದು ಪೂರ್ತಿ ಧರ್ಮ ವಿರುದ್ಧ. ಪ್ರಶ್ನೋಪನಿಷತ್ತಿನಲ್ಲಿ ಬ್ರಹ್ಮವಿದ್ಯಾ ಶಾಸ್ತ್ರಕ್ಕೆ ವಿರುದ್ಧವಾಗಿ ಬರೆದಿರುವುದನ್ನು ನೋಡಿದರೆ ಈ ಉಪನಿಷತ್ತನ್ನು ಬರೆದವರಿಗೆ ಆಧ್ಯಾತ್ಮಿಕ ಜ್ಞಾನ ತಿಳಿದಿಲ್ಲವೆಂದೇ ಹೇಳಬಹುದು. ಭಗವದ್ಗೀತೆಯಲ್ಲಿ ತಪಸ್ಸುಗಳನ್ನು ಕುರಿತು ಏನು ಹೇಳಿದ್ದಾರೋ ನೋಡಿರಿ.

## ಭಗವದ್ಗೀತೆ ವಿಶ್ವರೂಪ ಸಂದರ್ಶನ ಯೋಗ :

**ಶ್ಲೋ॥ 48 :**

**ನವೇದ ಯಜ್ಞಾಧ್ಯಯನೈರ್ನ ದಾನೈರ್ನ ಚಕ್ರಿಯಾ ಭಿರ್ನತಪೋಭಿರು ಗ್ರೈಃ।**
**ಏವಂ ರೂಪಶ್ಶಕ್ಯ ಅಹಂ ನೃಲೋಕೇ ದ್ರಷ್ಟುಂ ತ್ವದನ್ಯೇನ ಕುರುಪ್ರವೀರಾ ॥**

**ಭಾವಾರ್ಥ:–** ಭೂಮಿಮೇಲೆ ನೀನು ಹೊರತು ನನ್ನ ರೂಪವನ್ನು ನೋಡಿದವನು ಯಾರೂ ಇಲ್ಲ. ವೇದಾಧ್ಯಯನದಿಂದಾಗಲಿ, ಯಜ್ಞಗಳಿಂದಾಗಲಿ, ದಾನಗಳಿಂದಾಗಲಿ, ದೊಡ್ಡ ತಪಸ್ಸುಗಳಿಂದಾಗಲಿ ಯಾರಿಗೂ ನನ್ನನ್ನು ನೋಡಲು ಶಕ್ಯವಾಗುವುದಿಲ್ಲ.

**ಶ್ಲೋ॥ 53: ನಾಹಂ ವೈದೈರ್ನ ತಪಸಾ ನದಾನೇನ ನಚೇಜ್ಯಯಾ।**
**ಶಕ್ಯ ಏವಂ ವಿಧೋ ದ್ರಷ್ಟುಂ ದೃಷ್ಟವಾನಸಿ ಮಾಂ ಯಥಾ ॥**

**ಭಾವಾರ್ಥ :–** ತಪಸ್ಸುಗಳಿಂದಾಗಲಿ, ದಾನಗಳಿಂದಾಗಲಿ, ಯಜ್ಞಗಳಿಂದಾಗಲಿ, ವೇದಗಳಿಂದಾಗಲಿ ಈಗ ನೀನು ನೋಡಿದ ಈ ರೂಪವನ್ನು ನೋಡುವುದು ದುರ್ಲಭ.

ಈ ವಿಧವಾಗಿ ಪ್ರಥಮ ದೈವಗ್ರಂಥವಾದ ಭಗವದ್ಗೀತೆಯಲ್ಲಿ ಸ್ವತಃವಾಗಿ ಭಗವಾನನೇ ಹೇಳಿರುವಾಗ, ಆತನ ಮಾತಿಗೆ ವಿರುದ್ಧವಾಗಿ, ಧರ್ಮವಿರುದ್ಧವಾಗಿ ತಪಸ್ಸಿನಿಂದ ಪುನರ್ಜನ್ಮ ಬರುವುದಿಲ್ಲ ಎನ್ನುವುದು ತಪ್ಪು ಅಲ್ಲವೇ! **"ತಪಸ್ವಿಭ್ಯೋಧಿಕೋ ಯೋಗಿ"** ಎಂದು ಭಗವದ್ಗೀತೆಯಲ್ಲಿ ಆತ್ಮ ಸಂಯಮ ಯೋಗ ಎಂಬ ಅಧ್ಯಾಯದಲ್ಲಿ 46ನೇ ಶ್ಲೋಕದಲ್ಲಿ ಹೇಳಿರುವಾಗ, ಭಗವದ್ಗೀತೆಗಿಂತ ಮೊದಲು ಬರೆದ ಉಪನಿಷತ್ತಿನಲ್ಲಿ ಹಾಗೆ ತಪ್ಪು ಬರೆದಿದ್ದಾರೆಂದು ತಿಳಿಯುತ್ತಿದೆ. ತಪಸ್ಸಿಗಿಂತ ಯೋಗ ದೊಡ್ಡದೆಂದು, ಯೋಗದಿಂದ ಮೋಕ್ಷ ಲಭಿಸುತ್ತದೆಂದು ಭಗವದ್ಗೀತೆಯಲ್ಲಿ ಹೇಳಿದ್ದಾರೆ. ಅದರ ಪ್ರಕಾರ ಯೋಗ ಮಾಡಿರಿ, ತಪಸ್ಸು ಬಿಟ್ಟುಹಾಕಿರಿ. ಆಗ ನಿಮಗೆ ಮೋಕ್ಷ ಲಭಿಸುತ್ತದೆಂದು ಹೇಳಬೇಕಾಗಿರುವುದು ಹೋಗಿ ತಪಸ್ಸಿನಿಂದ ಮೋಕ್ಷ ಲಭಿಸುತ್ತದೆಂದು ಹೇಳುವುದು ಪೂರ್ತಿ ತಪ್ಪುಯೆಂದು ಹೇಳಬಹುದು.

# ಬೃಹದಾರಣ್ಯಕೋಪನಿಷತ್ತು

## 22) ಪ್ರಶ್ನೆ :– ಬೃಹದಾರಣ್ಯಕೋಪನಿಷತ್ತಿನಲ್ಲಿ ಒಂದುಮಾತು ಬರೆಯಲ್ಪಟ್ಟಿದೆ. ಅದು ಏನೆಂದರೇ! "ಆತ್ಮವೇದ ಸಮಗ್ರ ಆಸೀತ್" ಅದರ ಭಾವನೆ ಹೀಗೆ ಇದೆ. ಸೃಷ್ಠಿಗೆ ಪೂರ್ವದಲ್ಲಿ ಆತ್ಮ ಒಂದೇ ಇದೆ. ಈ ಮಾತು ವಾಸ್ತವವೇನಾ?

**ಉತ್ತರ :–** ಸೃಷ್ಠಿ ಪೂರ್ವದಲ್ಲಿ ಒಂದೇ ಒಂದು ಪರಮಾತ್ಮ ಮಾತ್ರ ಇದೆ. ಪರಮಾತ್ಮ ಯಾರಿಗೂ ತಿಳಿಯದಿರುವುದು. ಆದ್ದರಿಂದ ಪರಮಾತ್ಮನನ್ನು ಅಂತಿಮ ದೈವಗ್ರಂಥದಲ್ಲಿ 97ನೇ ಸೂರಾ 1, 2, 3, 4, 5, ಆಯತ್‌ಗಳಲ್ಲಿ **ಕತ್ತಲೆ ರಾತ್ರಿ** ಯಾಗಿ ವರ್ಣಿಸಿ ಹೇಳಿದ್ದಾರೆ. ಯಾರಿಗೂ ಕಾಣಿಸದವನು, ಯಾರಿಗೂ ತಿಳಿಯದವನು, ಊಹೆಗು ಕೂಡಾ ಸಿಗದವನಾದ ಪರಮಾತ್ಮ ತನ್ನ ಸಂಕಲ್ಪದಿಂದ ಮೊದಲು ಪ್ರಕೃತಿಯನ್ನು ತಯಾರು ಮಾಡಿದ್ದಾನೆ. ಅಂದರೇ ಜೀವರಾಶಿಗಳು ಇಲ್ಲದ ಪ್ರಪಂಚವನ್ನು ತಯಾರು ಮಾಡಿದ್ದಾನೆ. ನಂತರ ಜೀವರೂಪ ಪ್ರಪಂಚವನ್ನು ತಯಾರು ಮಾಡುವ ನಿಮಿತ್ತ ಆತ್ಮವನ್ನು ಸೃಷ್ಠಿಸಿದ್ದಾನೆ. ಆ ನಂತರ ಜೀವಾತ್ಮವನ್ನು ಸೃಷ್ಠಿಸುವುದು ನಡೆದಿದೆ. ಇದೆಲ್ಲವೂ ಸೃಷ್ಠಿ ರಹಸ್ಯವನ್ನು ತಿಳಿದವರಿಗೇ ಅರ್ಥವಾಗುತ್ತದೆ. ನಾನು **"ಘನವಾದ ರಾತ್ರಿ"** ಎನ್ನುವ ವ್ಯಾಸವನ್ನು ಅಂತಿಮ ದೈವ ಗ್ರಂಥದಲ್ಲಿ 128ನೇ ವ್ಯಾಸವಾಗಿ ಬರೆದಿದ್ದೇವೆ. ಅದನ್ನು ಓದಿದರೆ ಸೃಷ್ಠಿ ಹೇಗೆ ತಯಾರಾಗಿರುವುದು, ಸೃಷ್ಠಿ ಪೂರ್ವದಲ್ಲಿ ಯಾರಿರುವುದು ತಿಳಿಯುತ್ತದೆ. ಆತ್ಮ, ಜೀವಾತ್ಮ, ಪ್ರಕೃತಿ ಸೃಷ್ಠಿಸಲ್ಪಟ್ಟಿರುವವಾಗಿವೆ. ಎಲ್ಲರನ್ನು ಎಲ್ಲವನ್ನು ಸೃಷ್ಠಿಸಿದ ಸೃಷ್ಠಿಕರ್ತನಾದ ಪರಮಾತ್ಮ ಒಬ್ಬನೇ ಸೃಷ್ಟಿ ಪೂರ್ವ ದಲ್ಲಿದ್ದಾನೆಂದು ತಿಳಿಯಬೇಕು. ಪರಮಾತ್ಮ ಸೃಷ್ಠಿಕರ್ತನಾಗಿದ್ದು, ಆತ್ಮ ಸೃಷ್ಟಿ ಸಲ್ಪಟ್ಟವನು. ಹಾಗಿರುವಾಗ ಆತ್ಮ ಸೃಷ್ಠಿಗೆ ಪೂರ್ವದಲ್ಲಿ ಹೇಗೆ ಇರಬಲ್ಲದು? ಮನುಷ್ಯನಿಗೆ ತಂದೆ ಆತ್ಮವಾಗಿದ್ದು, ಆತ್ಮಗೆ ತಂದೆ ಪರಮಾತ್ಮಯೆಂದು ಮೂರು

ದೈವಗ್ರಂಥಗಳಲ್ಲಿ ಹೇಳಲ್ಪಟ್ಟಿದೆ. ಹಾಗಿರುವಾಗ ಯಾವ ಆಧಾರ ಇಲ್ಲದೆ, ಏನು ತಿಳಿಯದೇ, ಆತ್ಮ ಸೃಷ್ಠಿ ಪೂರ್ವದಲ್ಲಿಯೇ ಇದೆಯೆನ್ನುವುದು ಶುದ್ಧ ಅಸತ್ಯ. ಇದು ಉಪನಿಷತ್ತಿನಲ್ಲಿನ ಲೋಪ ಅಲ್ಲವಾ? ಈ ವಿಷಯ ಉಪನಿಷತ್ತುಗಳು ದೊಡ್ಡವೆಂದು ಹೇಳುವವರಿಗೆ ಕಾಣಿಸಲಿಲ್ಲವಾ?

## 23) ಪ್ರಶ್ನೆ :– ಈ ಕೆಳಗಿನ ಶ್ಲೋಕವೊಂದರ ಭಾವವು ವಾಸ್ತವವೇನಾ ಧರ್ಮಸಮ್ಮತವಾಗಿ ಇದೆಯಾ?

**ಶ್ಲೋ॥ ಬ್ರಹ್ಮವಾ ಇದ ಮಗ್ರ ಆಸೀ ತ್ತದಾತ್ಮಾನ ಮೇವವೇತ್**

**ಅಹಂ ಬ್ರಹ್ಮಸ್ಮಿತಿ ತಸ್ಮಾ ತ್ಸರ್ವ ಮಭವತ್ ॥ (1–4–10)**

**ಭಾವಾರ್ಥ:– ಸೃಷ್ಠಿಗೆ ಪೂರ್ವದಲ್ಲಿ ಈ ಪ್ರಪಂಚ ಬ್ರಹ್ಮವಾಗಿತ್ತು. "ನಾನೇ ಬ್ರಹ್ಮನಾಗಿ ಇದ್ದೇನೆ" ಎಂದು ಬ್ರಹ್ಮ ನೆನೆದಾಗ ಆಗ ಬ್ರಹ್ಮ ಸಮಸ್ತವು ಆಗಿದೆ.**

**ಉತ್ತರ :–** ಈ ಮಾತು ಶುದ್ಧ ಸುಳ್ಳು. ಸೃಷ್ಠಿಗೆ ಪೂರ್ವ ಬ್ರಹ್ಮಕ್ಕಿಂತ ಬೇರೆಯಾಗಿರುವ ಪರಬ್ರಹ್ಮ ಇತ್ತು. ಅಂದರೇ ಆತ್ಮ ಅಲ್ಲದೇ ಆತ್ಮಗಿಂತ ಬೇರೆಯಾಗಿರುವ ಪರಮಾತ್ಮ ಇತ್ತೆಂದು ಮೊದಲೇ ಹೇಳಿಕೊಂಡಿದ್ದೇವೆ. ಪರಮಾತ್ಮನಿಂದ (ಪರಬ್ರಹ್ಮದಿಂದ) ಸೃಷ್ಠಿ ತಯಾರಾದಾಗ ಮೊದಲು ಪ್ರಕೃತಿ ಹುಟ್ಟಿದಾಗ ಆ ನಂತರ ಬ್ರಹ್ಮ ಎನ್ನುವ ಆತ್ಮ ಸೃಷ್ಠಿಸಲ್ಪಟ್ಟಿದೆ. ಬ್ರಹ್ಮ, ಪ್ರಕೃತಿ ನಂತರ ಸೃಷ್ಠಿಕರ್ತನಾದ ಪರಬ್ರಹ್ಮದಿಂದ ಸೃಷ್ಠಿಸಲ್ಪಟ್ಟಿದೆ. ಬ್ರಹ್ಮಗಿಂತ ಮೊದಲೇ ಪ್ರಕೃತಿ ಸೃಷ್ಠಿಸಲ್ಪಟ್ಟಿರುವಾಗ ಸೃಷ್ಠಿ ಪೂರ್ವ ಬ್ರಹ್ಮ ಪ್ರಪಂಚವಾಗಿ ಇತ್ತೆಂದು ಅನ್ನುವುದು ಪೂರ್ತಿ ಅಸತ್ಯವಾಗುತ್ತದೆ. ಇದು ಬೃಹದಾರಣ್ಯ ಕೋಪನಿಷತ್ತಿನಲ್ಲಿನ ಲೋಪ ಅಲ್ಲವೇ! ಎಂದು ನಾನು ಬೆರಳೆತ್ತಿ ತೋರಿಸುತ್ತಿದ್ದೇನೆ.

## 24) ಪ್ರಶ್ನೆ: ಶ್ಲೋಕ :– ಆತ್ಮೈವೇದ ಮಗ್ರ ಆಸೀತ್ (1–4–1)

**ಭಾವಾರ್ಥ :– "ಆದಿಯಲ್ಲಿ ಆತ್ಮ ಒಂದೇ ಇದೆ" ಎಂದು ಇನ್ನೊಂದು ಕಡೆ**

**ಕೂಡಾ ಹೇಳಿದ್ದಾರೆ ಅಲ್ಲವೇ! ಇದು ಸತ್ಯ ಅಲ್ಲದಿದ್ದರೆ ಇಷ್ಟುಸಲ ಒಂದೇ ವಿಷಯವನ್ನು ಏಕೆ ಹೇಳುತ್ತಾರೆ? ಅವರು ಅಷ್ಟುಸಲ ಹೇಳಿರುವುದು ಅಸತ್ಯವೆಂದು ನೀವು ಅನ್ನುತ್ತಿದ್ದೀರ ಅಲ್ಲವೇ! ನೀವು ಹೇಳುವುದೇ ಸತ್ಯವೆಂದು ನಾವು ಹೇಗೆ ನಂಬಬೇಕು.?**

**ಉತ್ತರ :–** ಯಾವ ವಿಷಯವನ್ನಾದರೂ ನಂಬುವುದು, ನಂಬದಿರುವುದು ನಿಮ್ಮವೊಂದು ಇಷ್ಟ ಅಯಿಷ್ಟದ ಮೇಲೆ ಆಧಾರಪಟ್ಟಿರುತ್ತದೆ. ನಾನು ಹೇಳಿದ ಪ್ರತಿ ವಿಷಯವನ್ನು ನಂಬಿರೆಂದು ನಾನು ಹೇಳುತ್ತಿಲ್ಲ. ನಾನು ಹೇಳುವುದು ಸತ್ಯ ಎನ್ನುವುದಕ್ಕೆ ನನ್ನ ಮಾತಿನ ಹಿಂದೆ ಬ್ರಹ್ಮವಿದ್ಯಾ ಶಾಸ್ತ್ರವಿದೆ. ನಾನು ಪ್ರತಿ ವಿಷಯವನ್ನು ಬ್ರಹ್ಮವಿದ್ಯಾ ಶಾಸ್ತ್ರವನ್ನು ಅನುಸರಿಸಿ ಹೇಳುತ್ತಿದ್ದೇನೆ. ಶಾಸ್ತ್ರಬದ್ಧತೆ ಯಿಂದ ಕೂಡಿಕೊಂಡ ಆಧ್ಯಾತ್ಮಿಕದಲ್ಲಿ ಪ್ರತಿ ವಿಷಯ ಪ್ರಮಾಣದಿಂದ ಕೂಡಿ ಕೊಂಡಿರುತ್ತದೆ. ಗಣಿತ ಶಾಸ್ತ್ರದಲ್ಲಿ ಯಾವ ವಿಧವಾಗಿ ಲೆಕ್ಕಾಚಾರ ಇರುತ್ತದೋ ಆ ವಿಧವಾಗಿ ಪ್ರತಿಯೊಂದಕ್ಕು ಲೆಕ್ಕಪ್ರಕಾರವಾಗಿ ಉತ್ತರ ಇರುತ್ತದೆ. ಸತ್ಯದಿಂದ ಕೂಡಿಕೊಂಡಿರುವುದು ಶಾಸ್ತ್ರ. ಶಾಸ್ತ್ರದಿಂದ ಕೂಡಿಕೊಂಡಿರುವುದು ಸತ್ಯ. ಆದ್ದರಿಂದ ನಾನು ಹೇಳುವ ಪ್ರತಿ ಮಾತು ಪೂರ್ತಿ ಸತ್ಯವಾಗಿದೆ. ಶಾಸ್ತ್ರೀಯ ಆಧ್ಯಾತ್ಮಿಕವು ಕಣ್ಣಿಗೆ ಕಾಣಿಸುವ ದೃಶ್ಯದಂತೆ ಇರುತ್ತದೆ. ಯಾವ ವಿಷಯವು ಊಹಿಸಿ ಹೇಳುವುದು ಅಲ್ಲ. ಹಾಗೆ ಊಹಿಸಿ ಹೇಳುವುದು ಕತ್ತಲಿಂದ ಕೂಡಿಕೊಂಡ ವಿಷಯವಾಗಿರುತ್ತದೆ. ಆದ್ದರಿಂದ ಅದು ಸತ್ಯವಾಗಬಹುದು ಇಲ್ಲವೆ ಅಸತ್ಯ ವಾಗಬಹುದು. ನಾನು ಶಾಸ್ತ್ರಬದ್ಧತೆ ಎಂಬ ಬೆಳಕಿನಲ್ಲಿ ಹೇಳುತ್ತಿದ್ದೇನೆ. ಆದ್ದರಿಂದ ನನ್ನ ಮಾತಿನಲ್ಲಿನ ಪ್ರತಿ ವಿಷಯ ಸತ್ಯವೇ ಆಗಿರುತ್ತದೆ. ಅಸತ್ಯ ಎನ್ನುವುದಕ್ಕೆ ಅವಕಾಶವೇ ಇರುವುದಿಲ್ಲ. ಈಗ ಮೇಲಿನ ಶ್ಲೋಕದಲ್ಲಿ ಹೇಳಿದ "ಆದಿಯಲ್ಲಿ ಆತ್ಮ ಒಂದೇ ಇದೆ" ಎನ್ನುವುದು ಅಸತ್ಯವೆಂದು ಪ್ರತ್ಯಕ್ಷವಾಗಿ ತಿಳಿಯುತ್ತಿದೆ. ಮೊದಲು ಪ್ರಕೃತಿ ಹುಟ್ಟಿದ ನಂತರ ಜೀವಿಗಳನ್ನು ಪರಮಾತ್ಮ ತಯಾರು ಮಾಡಲು ನಿರ್ಣಯಿಸಿ, ಜೀವಿಗೆ ಜೊತೆಯಾಗಿರುವುದಕ್ಕೆ ಆತ್ಮವನ್ನು ಸೃಷ್ಟಿಸಿ, ಆತ್ಮದಿಂದ ಜೀವರಾಶಿಗಳನ್ನು ಸೃಷ್ಟಿಸುವಹಾಗೆ ಪರಮಾತ್ಮ ಏರ್ಪಾಟು

ಮಾಡಿದ್ದಾನೆ. ಆತ್ಮನನ್ನು ಸೃಷ್ಟಿಸಿದವನು ಪರಮಾತ್ಮನಾಗಿದ್ದು, ಜೀವಿಗಳನ್ನು ಸೃಷ್ಠಸಿದವನು ಆತ್ಮಯೆಂದು ತಿಳಿಯಬೇಕು. ಇದರ ಪ್ರಕಾರ ಆತ್ಮಕ್ಕೆ ತಂದೆ ಪರಮಾತ್ಮವಾಗಿದ್ದು, ಆತ್ಮ ಜೀವಿಗಳಿಗೆ ತಂದೆಯಾಗಿದೆ. ಆದ್ದರಿಂದ ಇತ್ತ ಜೀವಾತ್ಮ, ಅತ್ತ ಆತ್ಮ ಇಬ್ಬರೂ ಸೃಷ್ಠಿಸಲ್ಪಟ್ಟವರೇ ಹೊರತು ಸೃಷ್ಠಿ ಪೂರ್ವದಲ್ಲಿ ಆತ್ಮಇಲ್ಲ, ಜೀವಾತ್ಮ ಇಲ್ಲ. ಸಂಪೂರ್ಣ ಜ್ಞಾನಿಯಾಗಿ ಯೋಗವಾಚರಿಸುವವನು ಬ್ರಹ್ಮವಿದ್ಯಾ ಶಾಸ್ತ್ರವನ್ನು ಚೆನ್ನಾಗಿ ತಿಳಿದಿರುತ್ತಾನೆ. ಆದ್ದರಿಂದ ಪ್ರತಿ ವಿಷಯದಲ್ಲಿನ ಪ್ರತಿ ಪ್ರಶ್ನೆಗು ಸುಲಭವಾಗಿ ಉತ್ತರವನ್ನು ಹೇಳಬಲ್ಲನು. ಜ್ಞಾನ ತಿಳಿಯದವನು, ಯೋಗಿ ಅಲ್ಲದವನು ಕತ್ತಲಲ್ಲಿ ಹಗ್ಗವನ್ನು ಹಾವೆಂದುಕೊಂಡಹಾಗೆ ಅಸತ್ಯವನ್ನು ಮಾತನಾಡುತ್ತಾ ತನಗೆ ಕಾಣಿಸಿದ ಹಗ್ಗವನ್ನೇ ಹಾವೆನ್ನುವಹಾಗೆ, ತನಗೆ ತಿಳಿದಿರುವ ಅಜ್ಞಾನವನ್ನೇ ಜ್ಞಾನವೆಂದು ಹೇಳುತ್ತಿರುತ್ತಾನೆ. ಬೃಹದಾರಣ್ಯಕೋಪನಿಷತ್ತನ್ನು ಬರೆದವರು ಲೋಪಗಳಿಂದ ಕೂಡಿದ ವಾಕ್ಯಗಳನ್ನು ಹೇಳಿದ್ದಾರೆಂದು ತಿಳಿಯುತ್ತಿದೆ.

**25) ಪ್ರಶ್ನೆ :– ಮನುಷ್ಯನ ಶರೀರ ಸ್ಥೂಲ ಸೂಕ್ಷ್ಮಗಳೆನ್ನುವ ಎರಡು ಭಾಗಗಳಾಗಿ ಇದೆಯೆಂದು ನೀವು ಹೇಳಿದ್ದೀರ. ಸೂಕ್ಷ್ಮ ಶರೀರದಲ್ಲಿ ಕಣ್ಣಿಗೆ ಕಾಣಿಸದ ಶರೀರ ಭಾಗಗಳು ಹದಿನೈದು ಇವೆಯೆಂದು ಕೂಡಾ ಹೇಳಿದ್ದೀರ. ಅದರಲ್ಲಿ ಮನಸ್ಸು ಎನ್ನುವುದು ಮುಖ್ಯಪಾತ್ರವನ್ನು ಪೋಷಿಸುತ್ತಾ ಶರೀರದಲ್ಲಿ ಇದೆಯೆಂದು ಕೂಡಾ ಹೇಳಿದ್ದೀರ. ಈಗ ಮನಸ್ಸನ್ನು ಕುರಿತಾದ ವಿಷಯವನ್ನು ಬೃಹದಾರಣ್ಯ ಎಂಬ ಮಹಾರ್ಷಿಯೋ ಅಥವಾ ಮುನಿಯೋ ತನ್ನ ಶ್ಲೋಕದಲ್ಲಿ ತನ್ನ ಉಪನಿಷತ್ತಿನಲ್ಲಿ ಹೀಗೆ ಹೇಳಿದ್ದಾನೆ ನೋಡಿರಿ.**

**ಶ್ಲೋ :– ಕಾಮ ಸಂಕಲ್ಪೋ ವಿಚಿಕಿತ್ಸಾ ಶ್ರದ್ಧಾ ಶ್ರದ್ಧಾ ಧೃತಿರಧೃತಿಃ**

**ಹ್ರೀರ್ಧೀ ರ್ಭೀರಿತ್ಯೇ ತತ್ಸರ್ವಂ ಮನ ಏವ (1–5–3)**

**ಭಾವಾರ್ಥ:– ಕಾಮ, ಸಂಶಯ, ಸಂಕಲ್ಪ, ಶ್ರದ್ಧೆ, ಅಶ್ರದ್ಧೆ, ಧೈರ್ಯ, ಅಧೈರ್ಯ, ಲಜ್ಜೆ, ಬುದ್ಧಿ, ಭಯ ಇವು ಎಲ್ಲವೂ ಮನಸ್ಸು ಆಗಿವೆ (ಮನೋರೂಪಗಳಾಗಿವೆ) ಎಂದು ಹೇಳಿದ್ದಾರೆ. ಈ ಮಾತು ವಾಸ್ತವವಾ ಎಂದು ಪ್ರಶ್ನಿಸುತ್ತಿದ್ದೇವೆ.**

**ಉತ್ತರ :–** ಭೂಮಿಯಲ್ಲಿ ಬೆಳೆಯುವ ಆಲೂಗಡ್ಡೆಯನ್ನು, ಬಳ್ಳಿಗೆ ನೇತಾಡುವ ಈರೆಕಾಯನ್ನು, ಕಿರುಧಾನ್ಯಗಳಾದ ರಾಗಿ, ಬೆಳೆದ ಅಕ್ಕಿ ಅನ್ನ, ಹಸುವಿನಿಂದ ಹಿಂಡಿದ ಹಾಲು, ಬಾವಿಯಲ್ಲಿನ ನೀರು ಎಲ್ಲವನ್ನು ಮಾಂಸ ಎಂದು ಹೇಳಬಹುದೆಂದು, ಮಾಂಸ ಒಂದರ ರೂಪಗಳೇ ಇಷ್ಟು ವಿಧಗಳಾಗಿ ಇವೆಯೆಂದು ಒಬ್ಬನು ಹೇಳಿದರೆ, ಅವನನ್ನು ಸ್ವಲ್ಪವೂ ಆಲೋಚಿಸದೆ ಹುಚ್ಚನೆಂದು ಹೇಳಬಹುದು. ಏಕೆಂದರೇ! ಮಾಂಸ ಪ್ರಾಣಿ ಶರೀರದಿಂದ ಬರುವುದು, ಆಲೂಗಡ್ಡೆ ಭೂಮಿಯೊಳಗೆ ಬೆಳೆಯುವುದು. ಈರೆಕಾಯಿ ಬಳ್ಳಿಗೆ ಬಿಡುವುದು. ಅನ್ನ ಅಕ್ಕಿಯನ್ನು ಬೇಯಿಸಿದರೆ ಬರುವುದು. ಇವೆಲ್ಲ ಬೇರೆ ಬೇರೆ ಪದಾರ್ಥಗಳಾಗಿವೆ. ಅವು ಹುಟ್ಟುವ ಸ್ಥಾನ ಬೇರೆ, ಬೆಳೆಯುವ ಸ್ಥಾನ ಬೇರೆ. ಇವೆಲ್ಲವನ್ನು ಆಲೋಚಿಸದೆ ಇವೆಲ್ಲಾ ಮಾಂಸವೊಂದರ ರೂಪಗಳು ಎಂದರೇ ಅದಕ್ಕಿಂತ ತಪ್ಪುಮಾತು, ಅದಕ್ಕಿಂತ ಅಸತ್ಯವಾದ ಮಾತು ಇಲ್ಲವೆಂದು ಹೇಳಬಹುದು. ಆ ಮಾತನ್ನು ಹೇಳಿದ ವ್ಯಕ್ತಿಯನ್ನು ಪೂರ್ತಿ ತಿಳುವಳಿಕೆ ಇಲ್ಲದವನೆಂದು. ಹುಚ್ಚನೆಂದು ಹೇಳಬಹುದು.

ಮೇಲೆ ಹೇಳಿದ ವಿಧವಾಗಿ ಶರೀರದಲ್ಲಿರುವ ಆರು ಕೆಟ್ಟಗುಣಗಳಲ್ಲಿ ಮೊದಲನೆಯದಾದ ಆಸೆ (ಕಾಮ), ಹಾಗೆ ಗುಣವಲ್ಲದ ಗುಣವಾದ ನಾಚಿಕೆ (ಲಜ್ಜೆ), ಶರೀರ ಭಾಗಗಳಲ್ಲಿ ಅತಿ ಮುಖ್ಯವಾದುದು ಬುದ್ಧಿ, ಮನುಷ್ಯನಿಗೆ ಸಹಜವಾಗಿರುವ ಶ್ರದ್ಧೆ, ಅಶ್ರದ್ಧೆ ಇವೆಲ್ಲವೂ ಸೇರಿಸಿ ಶರೀರದಲ್ಲಿನ ಒಂದು ಭಾಗವಾಗಿ ಹೇಳಲ್ಪಡುತ್ತಿರುವ ಮನಸ್ಸು ಎಂದು ಹೇಳುವುದು ಪೂರ್ತಿ ತಪ್ಪು ಆಗುತ್ತದೆ. ಹಾಗೆ ಹೇಳಿದವನನ್ನು ಅಜ್ಞಾನಿಯೆಂದು ಹೇಳಬಹುದು. ಮೇಲಿನ

ಶ್ಲೋಕದಲ್ಲಿ ಹೇಳಿದ ವಿಧಾನ ಕೂಡಾ ಹಾಗೇ ಇರುವುದರಿಂದ ಇದು ಪೂರ್ತಿ ಅಸತ್ಯವಾದ ಮಾತೆಂದು ಹೇಳಬಹುದು. ವಿವರವಾಗಿ ಹೇಳಿದರೆ ಕಾಮ ಎನ್ನುವುದು ಶರೀರಕ್ಕೆ ಸಂಬಂಧಿಸಿದ ಭಾಗಗಳಲ್ಲಿ ಸೇರುವುದಿಲ್ಲ. ಗುಣಗಳೆಲ್ಲವೂ ಪ್ರತ್ಯೇಕವಾಗಿ ಗುಣಚಕ್ರದಲ್ಲಿ ಇರುತ್ತವೆ. ಬುದ್ಧಿ ಮತ್ತು ಮನಸ್ಸು ಎರಡು ಸೂಕ್ಷ್ಮ ಶರೀರದಲ್ಲಿನ ಬೇರೆ ಬೇರೆ ಭಾಗಗಳಾಗಿವೆ. ಬುದ್ಧಿ ಶಿರಸ್ಸಿನಲ್ಲಿ ಜೀವಿಯ ಹತ್ತಿರ ಇರುವಾಗ, ಮನಸ್ಸು ಶರೀರವೆಲ್ಲಾ ವ್ಯಾಪಿಸಿದೆ. ಅದರ ಸ್ವಸ್ಥಾನ ಬ್ರಹ್ಮನಾಡಿ ಯಾಗಿದ್ದು, ನಿದ್ರಿಸುವಾಗ ಬ್ರಹ್ಮನಾಡಿಯಲ್ಲಿ, ಎಚ್ಚರಿಕೆಯಲ್ಲಿ ಶರೀರವೆಲ್ಲಾ ವ್ಯಾಪಿಸಿರುತ್ತದೆ. ಹೀಗೆ ಪ್ರತ್ಯೇಕ ಕಾರ್ಯವನ್ನು ಹೊಂದಿ ಪ್ರತ್ಯೇಕವಾಗಿರುವ ಮನಸ್ಸನ್ನು ಎಲ್ಲಾ ಭಾಗಗಳಾಗಿ ಮನೋರೂಪಗಳೇ ಹಾಗೆ ಇವೆಯೆಂದು ಹೇಳುವುದು, ತರಕಾರಿಗಳೆಲ್ಲವನ್ನು ಸೇರಿಸಿ ಮಾಂಸ ಎನ್ನುವಂತಿದೆ. ಬಿಡಿಬಿಡಿ ಯಾಗಿ ಬೇರೆಬೇರೆ ಹೆಸರುಗಳನ್ನು ಹೊಂದಿರುವ ತರಕಾರಿಗಳನ್ನು ಇವೆಲ್ಲವು ಮಾಂಸ ರೂಪಗಳೇ ಎಂದರೇ ಎಷ್ಟು ಅಸತ್ಯವೊ, ಹಾಗೇ ಬೇರೆ ಬೇರೆ ಅವಯವಗಳಾಗಿ, ಬೇರೆಬೇರೆ ಹೆಸರುಗಳಿಂದ ಇರುವ ಶರೀರ ಭಾಗಗಳನ್ನು ಸೇರಿಸಿ ಮನಸ್ಸು ಎನ್ನುವುದು ಅಷ್ಟೇ ಅಸತ್ಯವಾಗುತ್ತದೆ.

ಕಾಮ ಎಂದರೇ ಆಸೆ ಎಂದು ಅರ್ಥ. ಆಸೆ ಎನ್ನುವುದು ಮನುಷ್ಯನಿಗಿ ರುವ ಗುಣಗಳಲ್ಲಿ ಕೆಟ್ಟ ಗುಣಗಳಾದ ಷಟ್ ವರ್ಗ (ಆರು ಗುಂಪು) ದಲ್ಲಿ ಒಂದಾಗಿದೆ. ಗುಣಗಳು ಮನುಷ್ಯ ಮರಣಿಸಿದಾಗ ಶರೀರವನ್ನು ಬಿಟ್ಟು ಆತ್ಮದೊಂದಿಗೆ ಬೇರೆ ಜನ್ಮಕ್ಕೆ ಹೋಗುತ್ತಿವೆ. ಆದ್ದರಿಂದ ಮನುಷ್ಯನ ಶರೀರ ಅವಯವಗಳಿಗು ಆಸೆ ಎಂಬ ಗುಣಕ್ಕು ಎಂತಹ ಸಂಬಂಧವಿಲ್ಲ. ಶರೀರ ಅವಯವಗಳೆಲ್ಲ ಮರಣದಲ್ಲಿ ನಶಿಸಿ ಹೋಗುತ್ತಿವೆ. ಹಾಗೇ ಶರೀರ ಅವಯವಗಳಲ್ಲಿ ಒಂದು ಭಾಗವಾದ ಮನಸ್ಸು ಕೂಡಾ ಮರಣದಲ್ಲಿ ನಶಿಸಿ ಇಲ್ಲದಹಾಗೆ ಹೋಗುತ್ತಿದೆ. ಗುಣಗಳು ಮರಣದಲ್ಲಿ ನಶಿಸದೆ ಹೊಸ ಶರೀರಕ್ಕೆ

ಆತ್ಮ, ಜೀವಾತ್ಮದೊಂದಿಗೆ ಸಹಾ ಹೋಗುತ್ತಿವೆ. ಮರಣದಲ್ಲಿ ನಶಿಸುವ ಮನಸ್ಸನ್ನು ಎಂದಿಗೂ ನಶಿಸದ ಗುಣಗಳೊಂದಿಗೆ ಹೋಲಿಸುವುದು ಆಧ್ಯಾತ್ಮಿಕದಲ್ಲಿ ಪೂರ್ತಿ ತಪ್ಪಾಗುತ್ತದೆ. ಶರೀರ ಮರಣಿಸಿದಾಗ ಅಂದರೇ ಶರೀರ ಶಿಥಿಲಾವಸ್ಥೆಗೆ ಬಂದಾಗ ಶರೀರ ಅವಯವಗಳಾದ 24 ಭಾಗಗಳು ಪೂರ್ತಿಯಾಗಿ ನಶಿಸಿಹೋಗುವುದು ವಾಸ್ತವ. ಆದರೇ ಅಲ್ಲಿಯವರೆಗು ಶರೀರದಲ್ಲಿ ಕಾಲ, ಕರ್ಮ, ಗುಣ ಚಕ್ರಗಳಲ್ಲಿರುವ ಜೀವಾತ್ಮ, ಗುಣಗಳು ಮತ್ತು ಆತ್ಮ ಎಲ್ಲವೂ ಸೇರಿ ಕಾಲ, ಕರ್ಮ, ಗುಣಚಕ್ರಗಳೊಂದಿಗೆ ಸೇರಿ ಬೇರೆ ಜನ್ಮದವರೆಗು ಹೋಗುತ್ತಿವೆ. ಮನಸ್ಸು ನಶಿಸಿ ಹೋಗುವುದು, ಆಸೆ ನಶಿಸದಿರುವುದು, ಮನಸ್ಸು, ಆಸೆ ಬೇರೆ ಬೇರೆ ಸ್ಥಾನಗಳಲ್ಲಿ ಬೇರೆ ಬೇರೆ ಕಾರ್ಯಗಳನ್ನು ಮಾಡುವುದಕ್ಕೆ ಶರೀರದಲ್ಲಿ ನಿಯಮಿಸಲ್ಪಟ್ಟಿವೆ. ಗುಣಗಳು ಕರ್ಮ ಆಧೀನದಲ್ಲಿ ಇರುವಾಗ, ಮನಸ್ಸು ಆತ್ಮ ಆಧೀನದಲ್ಲಿರುತ್ತದೆ. ಈ ವಿಧವಾಗಿ ಬೇರೆಬೇರೆ ಕಾರ್ಯಗಳ ನಿಮಿತ್ತ, ಬೇರೆ ಬೇರೆ ಸ್ಥಾನಗಳಲ್ಲಿರುವ ಮನಸ್ಸನ್ನು, ಆಸೆಯನ್ನು ಸೇರಿಸಿ ಮನಸ್ಸೇ ಆಸೆಯಾಗಿ ಇದೆಯೆಂದು ಹೇಳುವುದು ಆಧ್ಯಾತ್ಮಿಕಕ್ಕೇ ಪೂರ್ತಿ ವಿರುದ್ಧ. ಇಂತಹ ದೊಡ್ಡ ಲೋಪವನ್ನು ಬೃಹದಾರಣ್ಯ ಎನ್ನುವಾತನು ಬರೆಯುವುದು ನೋಡಿದರೆ, ಆತನನ್ನು ಪೂರ್ತಿ ಆಧ್ಯಾತ್ಮಿಕ ತಿಳಿಯದವನಾಗಿ ಹೇಳಬಹುದು. ಹಾಗೇ ಈ ವಿಷಯ ಈ ಉಪನಿಷತ್ತಿನಲ್ಲಿರುವ ಲೋಪಗಳೆಲ್ಲವುಗಳಲ್ಲಿ ದೊಡ್ಡದೆಂದು ಹೇಳಬಹುದು.

**26) ಬೃಹದಾರಣ್ಯಕೋಪನಿಷತ್ತಿನಲ್ಲಿ ಮತ್ತೊಂದು ದೊಡ್ಡ ಲೋಪವಾಗಿ ಜೀವಿಗೆ ಸಂಬಂಧಿಸಿದ ವಿಷಯವಿದೆ. ಅದಕ್ಕೆ ಸಂಬಂಧಿಸಿದ ಶ್ಲೋಕ, ಭಾವನೆ ಎರಡೂ ಕೆಳಗೆ ಬರೆಯುತ್ತಿದ್ದೇವೆ ನೋಡಿರಿ. ಈ ಶ್ಲೋಕದಲ್ಲಿ ಹೇಳಿದ ಬೃಹದಾರಣ್ಯ ಮಹಾರ್ಷಿ**

**ಎನ್ನುವಾತನು ಬರೆದಿರುವುದು ಸತ್ಯವಾ, ಅಸತ್ಯವಾ ನಿರ್ಣಯಿಸಿ ವಿವರಿಸಿ ಹೇಳಿರೆಂದು ಕೋರುತ್ತಿದ್ದೇನೆ.**

**ಶ್ಲೋ॥ ಯದಾ ಸರ್ವೇ ಪ್ರಮುಚ್ಯನ್ತೇ ಕಾಮಾ ಯೇಸ್ಯ ಹೃದಿ ಶ್ರಿತಾಃ**
**ಅಥಮರ್ತ್ಯೋಽಮೃತೋ ಭವ ತ್ಯತ್ರ ಬ್ರಹ್ಮ ಸಮಶ್ನುತೇ (4–4–7)**

**ಭಾವಾರ್ಥ :– ಯಾವಾಗ ಜೀವಿಯ ಹೃದಯದಲ್ಲಿರುವ ಕೋರಿಕೆಗಳೆಲ್ಲವು ನಶಿಸಿ ಹೋಗುತ್ತವೋ, ಆಗ ಮನುಜನು ಅಮೃತನಾಗುತ್ತಿದ್ದಾನೆ. ಇಲ್ಲಿಯೇ ಬ್ರಹ್ಮವನ್ನು ಹೊಂದುತ್ತಿದ್ದಾನೆ.**

**ಉತ್ತರ :–** ಜೀವಿಯು ಗುಣಚಕ್ರದಲ್ಲಿರುವ ಮೂರು ಭಾಗಗಳಲ್ಲಿ ಯಾವುದೊ ಒಂದು ಭಾಗದಲ್ಲಿ ನಿವಾಸಿಸುತ್ತಿರುತ್ತಾನೆ. ಆ ಮೂರು ಭಾಗಗಳನ್ನು ಸಾತ್ತ್ವಿಕ ಗುಣ ಭಾಗ, ರಾಜಸ ಗುಣಭಾಗ, ತಾಮಸ ಗುಣಭಾಗ ಎಂದು ಕರೆಯುತ್ತಾರೆ. ಒಂದು ಗುಣ ಭಾಗದಲ್ಲಿ ಕಾಮಾದಿ ಕೆಟ್ಟ ಗುಣಗಳು ಆರು, ದಾನಾದಿ ಒಳ್ಳೆಯ ಗುಣಗಳು ಆರು ಒಟ್ಟು ಹನ್ನೆರಡು ಗುಣಗಳಿರುವಾಗ ಮೂರು ಭಾಗಗಳಲ್ಲಿ ಒಟ್ಟು 36 ಗುಣಗಳು ಇವೆ. ಜೀವಿಯು ಒಂದು ಭಾಗದಲ್ಲಿಯೇ ಇರುತ್ತಾನೆ ಆದ್ದರಿಂದ ಒಳ್ಳೆಯ ಕೆಟ್ಟ 12 ಗುಣಗಳನ್ನು ಹೇಳಿಕೊಳ್ಳಬಹುದು. ಹೃದಯ ಎನ್ನುವುದು ಬ್ರಹ್ಮನಾಡಿ ಆಗುತ್ತದೆ. ಬ್ರಹ್ಮನಾಡಿಯೆಂಬ ಹೃದಯದಲ್ಲಿ ಆತ್ಮ ನಿವಾಸಿಸುತ್ತಿರುತ್ತದೆ ಹೊರತು ಗುಣಗಳು ಅಲ್ಲಿ ಇರುವುದಿಲ್ಲ. ಜೀವಿಯು ಗುಣಚಕ್ರದಲ್ಲಿ ಗುಣಗಳ ಮಧ್ಯದಲ್ಲಿ ಇರುತ್ತಾನೆ. ಆದ್ದರಿಂದ ಜೀವಿಗು ಹೃದಯಕ್ಕು, ಗುಣಗಳಿಗು ಹೃದಯಕ್ಕು ಯಾವುದೇ ಸಂಬಂಧ ಇಲ್ಲವೆಂದು ಹೇಳಬಹುದು. ಗುಣಚಕ್ರವನ್ನು ಗುಣಚಕ್ರದಲ್ಲಿನ ಗುಣಗಳನ್ನು ಕೆಳಗಿನ ಚಿತ್ರದಲ್ಲಿ ನೋಡಬಹುದು.



**ಗುಣಚಕ್ರ**

ಗುಣಚಕ್ರದಲ್ಲಿ ಗುಣಗಳ ಮಧ್ಯದಲ್ಲಿರುವ ಜೀವಿಯನ್ನು ಕೂಡಾ ನಂತರ ಪುಟದಲ್ಲಿ ನೋಡಬಹುದು.




**ಗುಣಚಕ್ರ**

ಈ ವಿಧವಾಗಿ ಗುಣಚಕ್ರ ಮೂರು ಭಾಗಗಳಾಗಿರುವಾಗ, ಆ ಮೂರು ಭಾಗಗಳಲ್ಲಿ ಯಾವುದೋ ಒಂದು ಭಾಗದಲ್ಲಿ ಜೀವಿಯು ಇರುತ್ತಾನೆ. ಒಬ್ಬ ಜೀವಿ ತಾಮಸದಲ್ಲಿ ಇರುವಾಗ, ಮತ್ತೊಂದು ಶರೀರದಲ್ಲಿನ ಮತ್ತೊಬ್ಬ ಜೀವಿಯು ಅವನ ಕರ್ಮಬಲವನ್ನನುಸರಿಸಿ ರಾಜಸದಲ್ಲಿಯೋ ಅಥವಾ ಸಾತ್ತ್ವಿಕದಲ್ಲಿಯೋ ಇರುತ್ತಾನೆ. ಯಾವ ಗುಣದಲ್ಲಿ ಜೀವಿಯು ಇದ್ದರೆ ಆ ಗುಣ ಭಾಗದ ಹೆಸರಿನಿಂದ ಅವನನ್ನು ಸಾತ್ತ್ವಿಕನೆಂದೋ, ರಾಜಸನೆಂದೋ, ತಾಮಸನೆಂದೋ ಕರೆಯುತ್ತಿರುತ್ತಾರೆ. ಗುಣ ಭಾಗದಲ್ಲಿ ಜೀವಿಯ ಆಕಾರ ಮೂರು ಪೊರೆಗಳಿಂದ ಕೂಡಿ ಕೊಂಡಿರುತ್ತದೆ. ಆ ಮೂರು ಪೊರೆಗಳ ಹೆಸರುಗಳು ಬುದ್ಧಿ, ಚಿತ್ತ, ಅಹಮ್ ಆಗಿ ಹೇಳಲ್ಪಡುತ್ತಿವೆ. ಇವೆಲ್ಲವೂ ಪೂರ್ತಿಯಾಗಿ ಅರ್ಥವಾಗುವುದಕ್ಕೆ ಜೀವಿಯ ಚಿತ್ರಪಟವನ್ನು ನಂತರ ಪುಟದಲ್ಲಿ ತೋರಿಸುತ್ತಿದ್ದೇವೆ ನೋಡಿರಿ. ವಾಸ್ತವವಾಗಿ ನಿನ್ನ ಆಕಾರವಾಗಲಿ, ಹಾಗೇ ಜೀವಿಯಾದ ನನ್ನ ಆಕಾರವಾಗಲಿ ಚಿತ್ರಪಟದಲ್ಲಿ ನೋಡಿದಹಾಗೇ ಇರುತ್ತದೆ. ನಿನ್ನದು ನನ್ನದು ಎನ್ನುವುದೇ ಅಲ್ಲ ಪ್ರತಿ ಜೀವರಾಶಿ ಅವನವನ ಶರೀರದಲ್ಲಿ ಹೀಗೆಯೇ ಇರುತ್ತದೆಂದು ತಿಳಿಯಬೇಕು.



ಇದು ವಾಸ್ತವವಾದ ಜೀವಿಯ ಆಕಾರ. ಜೀವಿಯ ಚಿತ್ರವನ್ನು ನಾವು ಹೊರತುಪಡಿಸಿ ಇಲ್ಲಿಯವರೆಗು ಯಾರೂ ತೋರಿಸಿದವರು ಇಲ್ಲ. ಹೃದಯ ಎನ್ನುವ ಬ್ರಹ್ಮನಾಡಿಯಲ್ಲಿ ಆತ್ಮ ಇರುವಾಗ, ಬ್ರಹ್ಮನಾಡಿಯನ್ನು ಆಧಾರ ಮಾಡಿಕೊಂಡು ಕಾಲ, ಕರ್ಮ, ಗುಣ ಚಕ್ರಗಳು ಇವೆ. ಗುಣಚಕ್ರದಲ್ಲಿ ಜೀವಾತ್ಮ ಆಸೆ ಮೊದಲಾದ ಗುಣಗಳು ಇರುವಾಗ, ಹೃದಯ ಎಂಬ ಬ್ರಹ್ಮನಾಡಿ ಗುಣಗಳಿಗು ಜೀವಿಗು ಆಧಾರವಾಗಿ ಮಧ್ಯದಲ್ಲಿದೆ. ಆದ್ದರಿಂದ ಹೃದಯದಲ್ಲಿ ಕೋರಿಕೆಗಳು ಎನ್ನುವ ಗುಣಗಳು ಇರುವುದಿಲ್ಲ ಎಂದು ಹೇಳಬಹುದು. ಕೋರಿಕೆಗಳಿಗು ಹೃದಯಕ್ಕು ಎಷ್ಟೋ ದೂರವಿದೆ. ಈ ವಿಷಯ ಅರ್ಥವಾಗುವುದಕ್ಕೆ ಹೃದಯದೊಂದಿಗೆ ಸಹ ಕಾಲ, ಕರ್ಮ ಗುಣಚಕ್ರಗಳು ಇರುವ ಚಿತ್ರ ನೋಡಿರಿ.



ಈ ನಾಲ್ಕು ಚಕ್ರಗಳ ಸಮೂಹ ಶರೀರದಲ್ಲಿ ಜೀವಿಯ ಜೀವನ ಇರುವವರೆಗು ಇರುತ್ತದೆ. ಮರಣದಲ್ಲಿ ಈ ನಾಲ್ಕು ಚಕ್ರಗಳು ಅದರಲ್ಲಿನ ಆತ್ಮ, ಜೀವಾತ್ಮ, ಕರ್ಮಗಳು, ಗುಣಗಳು ಎಲ್ಲವೂ ಬೇರೆ ಹೊಸ ಶರೀರವನ್ನು ಸೇರುತ್ತವೆ. ಶರೀರಕ್ಕೆ ನಾಶವಿದೆ ಆದರೆ, ಆತ್ಮ, ಜೀವಾತ್ಮ, ಕರ್ಮಗಳು, ಗುಣಗಳಿಗೆ ನಾಶವಿಲ್ಲ. ಆದ್ದರಿಂದ ಮೇಲಿನ ಶ್ಲೋಕದಲ್ಲಿ ಹೇಳಿದಹಾಗೆ ಕೋರಿಕೆಗಳೆನ್ನುವ ಗುಣ ನಶಿಸಿಹೋಗುವುದಿಲ್ಲ. ಶರೀರ ನಶಿಸಿದರೂ ಗುಣಗಳು ನಶಿಸದೆ ಜೀವಿ ಯೊಂದಿಗೆ ಬೇರೆ ಶರೀರವನ್ನು ಸೇರುತ್ತಿರುತ್ತವೆ. ಜೀವಿಯು ಹೃದಯದಲ್ಲಿ ಇದ್ದಾನೆನ್ನುವುದು, ಹಾಗೇ ಗುಣಗಳು ಕೂಡಾ ಹೃದಯದಲ್ಲಿ ಇವೆಯೆನ್ನುವುದು ಅಜ್ಞಾನವಾಗುತ್ತದೆ. ಇಂತಹ ಅಜ್ಞಾನ ಇರುವುದರಿಂದ ಈ ಉಪನಿಷತ್ತಿನಲ್ಲಿ ಲೋಪವಿದೆಯೆಂದು ಶಾಸ್ತ್ರಬದ್ಧವಾಗಿ ಹೇಳುತ್ತಿದ್ದೇವೆ.

# ಕೈವಲ್ಯೋಪನಿಷತ್ತು

## 27) ಪ್ರಶ್ನೆ :- ಇಲ್ಲಿ ಕೈವಲ್ಯೋಪನಿಷತ್ತುನಲ್ಲಿ ಒಂದು ಶ್ಲೋಕವನ್ನು ಈಗ ನೋಡೋಣ.

**ಶ್ಲೋ॥ ಅನೇನ ಜ್ಞಾನಮಾಹ್ನೋತಿ ಸಂಸಾರಾರ್ಣವ ನಾಶನಮ್ ತಸ್ಮಾ ದೇವಂ**
**ವಿದಿತ್ವೈನಂ ಕೈವಲ್ಯಂ ಪದಮಶ್ನುತೇ, ಕೈವಲ್ಯಂ ಪದ ಮಶ್ನುತ ಇತಿ (25)**

**ಭಾವಾರ್ಥ :- ಆದ್ದರಿಂದ ಈ ಪರಮಾತ್ಮನನ್ನು ತಿಳಿದುಕೊಂಡು ಜೀವಿಯು ಸಂಸಾರ ಸಮುದ್ರವನ್ನು ನಶಿಸುವಂತೆ ಮಾಡುವಂತಹ ಜ್ಞಾನವನ್ನು ಹೊಂದುತ್ತಿದ್ದಾನೆ. ಅದರಿಂದ ಮೋಕ್ಷವನ್ನು ಸೇರುತ್ತಿದ್ದಾನೆ. ಶಾಶ್ವತ ಸುಖವನ್ನು ಹೊಂದುತ್ತಿದ್ದಾನೆ.**

**ಈ ಭಾವನೆಯಲ್ಲಿ ಜೀವಿಯು ಪರಮಾತ್ಮನನ್ನು ಕುರಿತು ತಿಳಿದುಕೊಂಡು ಜ್ಞಾನವನ್ನು ಹೊಂದುತ್ತಿದ್ದಾನೆ. ಅದರಿಂದ ಮೋಕ್ಷವನ್ನು ಹೊಂದುತ್ತಿದ್ದಾನೆ ಎಂದು ಹೇಳಿದ್ದಾರೆ. ಮೊದಲು ಪರಮಾತ್ಮನನ್ನು ಕುರಿತು ತಿಳಿಯುವುದಕ್ಕೆ ಜ್ಞಾನವಿರಬೇಕು ಆದರೆ, ಪರಮಾತ್ಮನನ್ನು ತಿಳಿದ ನಂತರ ಜ್ಞಾನವನ್ನು ಹೊಂದುವುದೇನೆಂದು ಕೇಳುತ್ತಿದ್ದೇವೆ. ಪರಮಾತ್ಮನನ್ನು ಕುರಿತು ತಿಳಿದ ನಂತರ ಜ್ಞಾನವನ್ನು ಹೊಂದಿ ಮೋಕ್ಷವನ್ನು ಸೇರುತ್ತಾನೆ ಎಂದು ಹೇಳಿದ್ದಾರೆ. ಆಧ್ಯಾತ್ಮಿಕ ಜ್ಞಾನದಲ್ಲಿ ಈ ಉಪನಿಷತ್ತಿನಲ್ಲಿ ಹೇಳಿದಹಾಗೆ ಇದೆಯಾ? ಅಥವಾ ಇನ್ನೂ ಬೇರೆ ವಿಧಾನ ಇದೆಯಾ?**

**ಉತ್ತರ :-** ನಾವು ಗತದಲ್ಲಿ ಸುಮಾರು ನಲವತ್ತು ವರ್ಷಗಳ ಕೆಳಗೆ ಒಂದು ವಾಕ್ಯವನ್ನು ಬರೆದಿದ್ದೆನು. ಅದು ಏನೆಂದರೇ! **"ಭೂಮಿ ಮೇಲೆ ನಿವಾಸಿಸುತ್ತಿರುವ ಜ್ಞಾನಿಗಳಾಗಲಿ, ಕರ್ಮಯೋಗಿಗಳಾಗಲಿ, ಬ್ರಹ್ಮಯೋಗಿಗಳಾಗಲಿ, ಪರಮಹಂಸ ರಾಗಲಿ, ತತ್ತ್ವಜ್ಞರಾಗಲಿ, ತಪಸ್ವಿಕರಾಗಲಿ, ನಿತ್ಯ ಯೋಗ ಮಾಡುವವರಾಗಲಿ, ಯಾರಾದರಾಗಲಿ ಪರಮಾತ್ಮನನ್ನು ತಿಳಿಯರು"** ಎಂದು ಹೇಳಿದ್ದೇವೆ. ಇದೇ ವಿಷಯ ಬ್ರಹ್ಮವಿದ್ಯಾ ಶಾಸ್ತ್ರದಲ್ಲಿ ಕೂಡಾ ಬದುಕಿರುವ ಯಾರಾಗಲಿ ಪರಮಾತ್ಮ ನನ್ನು ತಿಳಿಯಲಾರರೆಂದು ಹೇಳಿದ್ದಾರೆ. ಮನುಷ್ಯ ಎಷ್ಟು ದೊಡ್ಡ ಜ್ಞಾನಿ, ಯೋಗಿಯಾದರೂ ಆತನು ಆತ್ಮನನ್ನು ತಿಳಿಯಬಹುದು ಆದರೆ, ಪರಮಾತ್ಮನನ್ನು ತಿಳಿಯುವುದಕ್ಕೆ ಅವಕಾಶವಿಲ್ಲ. ಪರಮಾತ್ಮ ಭೂಮಿಮೇಲೆ ಶರೀರದೊಂದಿಗೆ ಬದುಕಿರುವ ಯಾವ ಜೀವಿಗು ತಿಳಿಯುವುದಿಲ್ಲ. ಶರೀರಕ್ಕೆ ಅಧಿಪತಿಯಾಗಿರುವ ಆತ್ಮವನ್ನು ಆತ್ಮಜ್ಞಾನದಿಂದ (ಆಧ್ಯಾತ್ಮಿಕ ಜ್ಞಾನದಿಂದ) ತಿಳಿಯಬಹುದು ಆದರೆ, ಪರಮಾತ್ಮನನ್ನು ತಿಳಿಯುವುದಕ್ಕೆ ಪರಮಾತ್ಮ ಜ್ಞಾನವೆನ್ನುವುದು ಪ್ರತ್ಯೇಕವಾಗಿ ಇಲ್ಲ.

ಪ್ರಪಂಚವೆಲ್ಲಾ ಅಣುವಣುವಿನಲ್ಲೂ ವ್ಯಾಪಿಸಿರುವ ಪರಮಾತ್ಮ ಯಾರಿಗೂ ತಿಳಿಯಲ್ಪಡುವವನಲ್ಲ. ಪರಮಾತ್ಮ ಹೀಗಿರುತ್ತಾನೆಂದು ಯಾವ ಅಂದಾಜಿನಿಂದ ಕೂಡಾ ಹೇಳುವುದಕ್ಕೆ ಸಾಧ್ಯಪಡುವುದಿಲ್ಲ. ದೇವತೆಗಳಿಗಾಗಲಿ,

ಮನುಷ್ಯರಿಗಾಗಲಿ ತಿಳಿಯದವನು ಪರಮಾತ್ಮ. ಆತನ ಆಕಾರವಾಗಲಿ, ಆತನ ವಿಸ್ತೀರ್ಣವಾಗಲಿ ಪ್ರಪಂಚದಲ್ಲಿ ಯಾರಿಗೂ ತಿಳಿದಿಲ್ಲ. ಯಾರಿಗೂ ಅಂತ್ಯಸಿಕ್ಕ ದವನು ಪರಮಾತ್ಮ. ಭಗವದ್ಗೀತೆಯಲ್ಲಿ ಅರ್ಜುನನು ಪರಮಾತ್ಮನನ್ನು ನೋಡಬೇಕೆನ್ನುವ ಕೋರಿಕೆ ಇದೆಯೆಂದು ಹೇಳಿದಾಗ ಭಗವಂತನ ಶರೀರ ದಲ್ಲಿರುವ ಪರಮಾತ್ಮ **"ನನ್ನನ್ನು ನೋಡುವುದಕ್ಕೆ ನಿನ್ನ ಕಣ್ಣುಗಳು ಕೆಲಸಕ್ಕೆ ಬರುವುದಿಲ್ಲ"** ಎಂದು ಅಂದಿದ್ದಾನೆ. ದೇವತೆಗಳು, ಋಷಿಗಳು ನನ್ನನ್ನು ನೋಡಬೇಕೆಂದು ಇದ್ದರೂ ಯಾರಿಗೂ ನನ್ನ ದರ್ಶನ ಲಭಿಸಲಿಲ್ಲವೆಂದು ಹೇಳಿದ್ದಾನೆ. ವಾಸ್ತವವಾಗಿ ಮನುಷ್ಯ ಎಷ್ಟು ಸಾಧನೆಗಳು ಮಾಡಿದರೂ ಕೊನೆಗೆ ಆತ್ಮನನ್ನು ತಿಳಿಯಬಹುದು, ಪರಮಾತ್ಮನನ್ನು ತಿಳಿಯಲಾರರು. ಮನುಷ್ಯ ಯೋಗದಿಂದ ತನ್ನ ಕರ್ಮಗಳೆಲ್ಲವನ್ನು ಇಲ್ಲದಹಾಗೆ ಮಾಡಿಕೊಂಡಾಗ, ಆತನು ಪುನಃ ಎರಡನೆ ಜನ್ಮಕ್ಕೆ ಹೋಗದಂತೆ ಪರಮಾತ್ಮನಲ್ಲಿ ಸೇರಿಹೋಗುತ್ತಾನೆ. ಅದನ್ನೇ 'ಮೋಕ್ಷ' ಎಂದು ಕರೆಯುತ್ತಿದ್ದೇವೆ. ಹಾಗೆ ಮೋಕ್ಷ ಹೊಂದಿದ ಜೀವಿಯು ಮಾತ್ರವೇ ಪರಮಾತ್ಮನಲ್ಲಿ ಐಕ್ಯವಾಗಿಹೋಗುವುದರಿಂದ ಆಗ ಜೀವಿಗೆ ಪರಮಾತ್ಮ ಎಂದರೆ ಏನೋ ತಿಳಿಯುತ್ತದೆ. ಮನುಷ್ಯ ಕೊನೆಯ ಮರಣವನ್ನು ಹೊಂದಿ ಮತ್ತೆ ಜನ್ಮಿಸದವನು ಮಾತ್ರವೇ ಪರಮಾತ್ಮನನ್ನು ತಿಳಿಯುತ್ತಾನೆ. ಹಾಗೆ ಮೋಕ್ಷ ಹೊಂದಿದವನು ಹೊರತುಪಡಿಸಿ ಪರಮಾತ್ಮನನ್ನು ಯಾರೂ ತಿಳಿಯುವುದಕ್ಕೆ ಅವಕಾಶವಿಲ್ಲ.

ಈ ವಿಧವಾಗಿ ಪರಮಾತ್ಮ ಯಾರಿಗೂ ತಿಳಿಯದವನಾಗಿ ಇರುವಾಗ ಈ ಕೈವಲ್ಯೋಪನಿಷತ್ತಿನಲ್ಲಿ ಜೀವಿಯು ಪರಮಾತ್ಮನನ್ನು ತಿಳಿದು, ಸಂಸಾರ ಸಮುದ್ರವನ್ನು ನಶಿಸುವಹಾಗೆ ಮಾಡುವಂತೆ ಅಂದರೇ ದಾಟುವಂತಹ ಜ್ಞಾನವನ್ನು ಹೊಂದುತ್ತಿದ್ದಾನೆ ಎಂದು ಬರೆಯುವುದು ಧರ್ಮವಿರುದ್ಧವಾಗಿ, ಪೂರ್ತಿ ಅಸತ್ಯವಾಗಿದೆ. ಭಗವದ್ಗೀತೆಯಲ್ಲಿ ವಿಶ್ವರೂಪ ಸಂದರ್ಶನ ಯೋಗದಲ್ಲಿ 47ನೇ ಶ್ಲೋಕದಲ್ಲಿ "ಆದ್ಯವನ್ನು, ವಿಶ್ವಮಯ, ಅನಂತವಾದ ತೇಜವಿರುವ ನನ್ನ ರೂಪವನ್ನು ಯಾರೂ ನೋಡಲಾರರು' ಎಂದು ಸ್ವತಃ ಭಗವಂತನೇ ವಿಶ್ವರೂಪ

ದಿಂದ ಹೇಳಿದ್ದಾನೆ. ಸ್ವತಃ ದೇವರೇ ಹಾಗೆ ಹೇಳಿರುವಾಗ ಜೀವಿಯು ಪರಮಾತ್ಮನನ್ನು ತಿಳಿದುಕೊಂಡು ಜ್ಞಾನವನ್ನು ಹೊಂದುವನು ಎಂದು ಹೇಳುವವಮಾತು ಉಪನಿಷತ್ತಿನೊಳಗಿನದಾದರೂ ಶುದ್ಧ ಅಸತ್ಯವೆಂದು ಹೇಳಬಹುದು.

## ಶ್ವೇತಾಶ್ವತರೋಪನಿಷತ್ತು

**28) ಪ್ರಶ್ನೆ :– ಯೋಗ ಮಾಡಿ ಯೋಗಾಗ್ನಿ ಅಥವಾ ಜ್ಞಾನಾಗ್ನಿ ಹೊಂದಿದವನಿಗೆ ರೋಗವಾಗಲಿ, ವೃದ್ಧಾಪ್ಯವಾಗಲಿ, ಮರಣ ವಾಗಲಿ ಇರುವುದಿಲ್ಲ ಎಂದು ಶ್ವೇತಾಶ್ವತರೋಪ ನಿಷತ್ತಿನಲ್ಲಿ ಕೆಳಗಿನ ಶ್ಲೋಕದಲ್ಲಿ ಹೇಳಿದ್ದಾರೆ. ಎಷ್ಟು ದೊಡ್ಡ ಯೋಗಿ ಆದರೂ ಕೊನೆಗೆ ಮರಣಿಸಿದರೆ ಅಲ್ಲವೆ! ಮೋಕ್ಷವನ್ನು ಹೊಂದುವುದು ಯೋಗಿಗೆ ಮರಣ ಇಲ್ಲ ಎಂದರೇ ಅವರು ಶರೀರದಿಂದಲೇ ಎಲ್ಲಕಾಲ ಬದುಕಬೇಕಾ?**

**ಶ್ಲೋ ॥ ನತಸ್ಯ ರೋಗೋ ನಜರಾ ನಮೃತ್ಯುಃ**
**ಪ್ರಾಪ್ತಸ್ಯ ಯೋಗಾಗ್ನಿ ಮಯಂ ಶರೀರಮ್ (2–12)**

**ಭಾವಾರ್ಥ :– ಯೋಗಾಗ್ನಿಮಯವಾದ ಶರೀರ (ಜ್ಞಾನಾಗ್ನಿಯಿಂದ ಕೂಡಿಕೊಂಡ ಶರೀರ) ಇರುವವನಿಗೆ ರೋಗವಾಗಲಿ, ವೃದ್ಧಾಪ್ಯವಾಗಲಿ, ಮರಣವಾಗಲಿ ಇರುವುದಿಲ್ಲ.**

**ಉತ್ತರ :–** ಎಷ್ಟು ದೊಡ್ಡ ಯೋಗಿ ಆದರೂ, ಆತನ ಶರೀರದಲ್ಲಿ ಎಷ್ಟು ಜ್ಞಾನಾಗ್ನಿ ಇದ್ದರೂ ಆತನಿಗೆ ವಯಸ್ಸು ಬೆಳೆದಂತೆಲ್ಲ ವೃದ್ಧಾಪ್ಯ ಬರುತ್ತಿರುತ್ತದೆ.

ಯೋಗಿ ಆದವನು ಮೋಕ್ಷ ಹೊಂದಿ ದೇವರೊಳಗೆ (ಪರಮಾತ್ಮನೊಳಗೆ) ಐಕ್ಯವಾಗಬೇಕೆಂದರೇ ಆತನು ಶರೀರವನ್ನು ಬಿಡಬೇಕಾದ್ದೆ, ಮರಣವನ್ನು ಹೊಂದಬೇಕಾದ್ದೆ. ಶರೀರವನ್ನು ಬಿಡುವುದಕ್ಕೆ "ಕಾರಣವಿಲ್ಲದೆ ಮರಣ ಬರದು" ಎಂಬ ಗಾದೆಯ ಪ್ರಕಾರ ಯಾವುದೊ ಒಂದು ರೋಗ ಕಾರಣವಾಗಿ ಮರಣ ಬರುತ್ತದೆ. ಇವೆಲ್ಲವೂ ನೋಡಿದರೆ ಯೋಗಿ ಆದವನಿಗೆ, ಯೋಗಾಗ್ನಿ ಸಂಪೂರ್ಣವಾಗಿ ಇರುವವನಿಗೆ ವೃದ್ಧಾಪ್ಯ, ರೋಗ, ಮರಣ ಬರುವುದು ತಪ್ಪುವುದಿಲ್ಲವೆಂದು ತಿಳಿಯುತ್ತಿದೆ.

ಅಷ್ಟೇಅಲ್ಲದೆ ಶರೀರವನ್ನು ಧರಿಸಿದವನು ತಪ್ಪದೆ ಅದನ್ನು ಬಿಟ್ಟುಹೋಗಬೇಕಾಗಿದೆ. ಮರಣವನ್ನು ಹೊಂದಿದ ನಂತರ ಆತನಿಗೆ ಕರ್ಮವಿದ್ದರೆ ಬೇರೆ ಜನ್ಮಕ್ಕೆ ಹೋಗುತ್ತಾನೆ. ಒಂದುವೇಳೆ ಕರ್ಮ ಇಲ್ಲದಿದ್ದರೆ ಆತನು ಮೋಕ್ಷವನ್ನು ಹೊಂದುತ್ತಾನೆ. "ಪ್ರತಿ ಮನುಷ್ಯನಿಗು ಜನ್ಮ ತಪ್ಪುವುದಿಲ್ಲ, ಜನ್ಮಿಸಿದವನಿಗೆ ಮರಣ ತಪ್ಪುವುದಿಲ್ಲ" ಎಂದು ಭಗವದ್ಗೀತೆಯಲ್ಲಿ ಸಾಂಖ್ಯಯೋಗದಲ್ಲಿ 27ನೇ ಶ್ಲೋಕದಲ್ಲಿ ಈ ವಿಷಯವನ್ನೇ ಹೇಳಿದ್ದಾರೆ.

**ಶ್ಲೋ॥ 27. ಜಾತಸ್ಯ ಹಿಧ್ರುವೊ ಮೃತ್ಯುರ್ಧ್ರುವಂ ಜನ್ಮ ಮೃತಸ್ಯಚ ।**
**ತಸ್ಮಾದ ಪರಿಹಾರ್ಯೇ ರ್ಥೇ ನತ್ವಂ ಶೋಚಿತು ಮರ್ಹಸಿ॥**

**ಭಾವಾರ್ಥ :– ಜನ್ಮಿಸುವುದು ಎಂದಿಗಾದರೂ ಮರಣಿಸುವುದಕ್ಕಾಗಿಯೇ, ಮರಣಿಸುವುದು ಮತ್ತೆ ಹುಟ್ಟುವುದಕ್ಕಾಗಿಯೇ. ಅನಿವಾರ್ಯವಾದ ಈ ಸಂಗತಿಯನ್ನು ಕುರಿತು ಜ್ಞಾನಿಯಾದವನು ಶೋಕಿಸುವುದಿಲ್ಲ.**

'ಯೋಗಿ ಆದವನು ಮರಣಿಸಿದ ನಂತರ ಪುನಃ ಜನ್ಮಿಸುವುದಿಲ್ಲ' ಎನ್ನುವ ವಿಷಯವನ್ನು ಭಗವದ್ಗೀತೆಯಲ್ಲಿ ಅಕ್ಷರ ಪರಬ್ರಹ್ಮ ಯೋಗದಲ್ಲಿ 15ನೇ ಶ್ಲೋಕದಲ್ಲಿ ಹೇಳಿದ್ದಾರೆ ನೋಡಿರಿ.

**ಶ್ಲೋ॥ 15. ಮಾ ಮುಪೇತ್ಯ ಪುನರ್ಜನ್ಮ ದುಃಖಾಲಯ ಮಶಾಶ್ವತಮ್ ।**
**ನಾ ಪ್ನುವಂತಿ ಮಹಾತ್ಮಾನ ಸಂಸಿದ್ಧಿಂ ಪರಮಾಂ ಗತಾಃ ॥**

**ಭಾವಾರ್ಥ :–** ಶ್ರೇಷ್ಠವಾದ ಯೋಗಸಿದ್ಧಿ ಹೊಂದಿದವನು ನನ್ನೊಳಗೆ ಐಕ್ಯವಾಗಿ ಮೋಕ್ಷವನ್ನು ಹೊಂದಿ, ನಂತರ ಪುನರ್ಜನ್ಮಗಳನ್ನು ಹೊಂದುವುದಿಲ್ಲ.

ಹೀಗೆ ಯೋಗಿ ಪರಮಾತ್ಮನೊಳಗೆ ಐಕ್ಯವಾದ ನಂತರ ಮತ್ತೆ ಹುಟ್ಟುವುದಿಲ್ಲವೆಂದು ಹೇಳಿದ್ದಾರೆ. ಆದರೇ ಯೋಗಿ ಆದವನು ಒಂದುಸಲ ಮರಣಿಸಿದರೇನೆ ಅಲ್ಲವೆ! ಅವನು ದೇವರಲ್ಲಿ ಐಕ್ಯವಾಗುವುದು ನಡೆಯುತ್ತದೆ. ಶರೀರವನ್ನು ಬಿಡದೆ ಮೋಕ್ಷ ಬರುವುದಿಲ್ಲ. ಶರೀರವನ್ನು ಬಿಡುವುದಕ್ಕೆ ಶರೀರ ಮುಪ್ಪಾಗಿರಬೇಕು. ಹಾಗೇ ಶರೀರಕ್ಕೆ ರೋಗ ಬರಬೇಕಾಗಿರುತ್ತದೆ. ಇದನ್ನನುಸರಿಸಿ ಎಷ್ಟುದೊಡ್ಡ ಯೋಗಿಗಾದರೂ ಮರಣ ತಪ್ಪಲ್ಲವೆಂದು ತಿಳಿಯುತ್ತಿದೆ. ಆದ್ದರಿಂದ ಶ್ವೇತಾಶ್ವತರೋಪನಿಷತ್ತಿನಲ್ಲಿ ಯೋಗಿಗೆ ರೋಗವಾಗಲಿ, ವೃದ್ಧಾಪ್ಯವಾಗಲಿ, ಮರಣವಾಗಲಿ ಬರುವುದಿಲ್ಲ ಎನ್ನುವುದು ಪೂರ್ತಿ ಅಸತ್ಯ, ಪ್ರಕೃತಿ ಧರ್ಮಕ್ಕೆ ವಿರುದ್ಧವಾಗುತ್ತದೆ. ಈ ವಿಷಯ ಈ ಉಪನಿಷತ್ತಿನಲ್ಲಿ ಕಾಣಿಸುವ ಅಸತ್ಯವಾಗಿದೆ. ಇಂತಹ ಅಸತ್ಯಗಳು ಅದರೊಳಗಿರುವ ಲೋಪಗಳು ಅಲ್ಲವಾ?

**29) ಪ್ರಶ್ನೆ :– ನೀವು ಹೇಳಿದ ಆಧ್ಯಾತ್ಮಿಕ ಬೋಧನೆಯಲ್ಲಿ ಆತ್ಮಬೇರೆ, ಪರಮಾತ್ಮ ಬೇರೆಯೆಂದು ಹೇಳಿದ್ದೀರ. ಆ ಎರಡಕ್ಕು ಎಷ್ಟೋ ವ್ಯತ್ಯಾಸವನ್ನು ತೋರಿಸಿದ್ದೀರ. ಹಾಗೇ ಪರಮಾತ್ಮನಿಗು, ಭಗವಂತನಿಗು ಇರುವ ವ್ಯತ್ಯಾಸವನ್ನು ತೋರಿಸಿ ಬೋಧಿಸಿದ್ದೀರ. ಆದರೇ ಈ ದಿನ ದೇವರಿಗು, ಭಗವಂತನಿಗು ವ್ಯತ್ಯಾಸ ತಿಳಿಯದ ಆಧ್ಯಾತ್ಮಿಕ ತಜ್ಞರು ನಾವು ಸಂಪೂರ್ಣ ಜ್ಞಾನಿಗಳೆಂದು ಹೇಳಿ ಕೊಳ್ಳುತ್ತಿದ್ದಾರೆ. ಹಾಗೇ ಆತ್ಮಗು ಪರಮಾತ್ಮಗು ಭೇದ ತಿಳಿಯದವರು ಬ್ರಹ್ಮವಿದ್ಯಾ ಶಾಸ್ತ್ರವನ್ನು**

**ತಿಳಿದ ಯೋಗಿಗಳೆಂದು ಹೇಳಿಕೊಳ್ಳುತ್ತಿದ್ದಾರೆ. ಹಾಗೇ ತಪಸ್ಸಿಗು, ಯೋಗಕ್ಕು ವ್ಯತ್ಯಾಸ ತಿಳಿಯದವರು ಸರ್ವಜ್ಞಾನವನ್ನು ತಿಳಿದವರಾಗಿ ಚಲಾವಣೆ ಆಗುತ್ತಿದ್ದಾರೆ. ಪ್ರತಿಯೊಂದಕ್ಕು ವಿವರವನ್ನು ಹೇಳುತ್ತಿರುವ ನಿಮ್ಮನ್ನು ಹಿಂದೂ ಮತದಲ್ಲಿ ಮನೆ ಕಳ್ಳರು ಎಂದು ಆರೋಪಿ ಸುತ್ತಿದ್ದಾರೆ. ಅಂತಹವರಿಗೆ ಬುದ್ಧಿ ಹೇಳುವಹಾಗೆ ನೀವು ಉಪನಿಷತ್ತುಗಳಲ್ಲಿ ಲೋಪಗಳನ್ನು ಎತ್ತಿ ತೋರಿಸಿದ್ದೀರ. ಆದರೂ ಅವರ ತಪ್ಪನ್ನು ಅವರು ಗುರುತಿಸದೆ, ಉಪನಿಷತ್ತುಗಳು ಶ್ರೇಷ್ಠವಾದವುಗಳೆಂದು ಹೇಳುತ್ತಿದ್ದಾರೆ. ಆದರೇ ನಿಮಗೆ ಅಲ್ಲದೇ ನಮಗು ಕೂಡಾ ಸ್ವಲ್ಪ ತಪ್ಪಾಗಿ ಶ್ವೇತಾಶ್ವತ ರೋಪನಿಷತ್ತಿನಲ್ಲಿ ಒಂದು ಶ್ಲೋಕ ಕಾಣಿಸುತ್ತಿದೆ. ಅದು ತಪ್ಪೋ ಒಪ್ಪೋ ನೀವೇ ನಿರ್ಣಯಿಸಿ ಹೇಳಿರಿ?**

**ಶ್ಲೋ॥ ಸರ್ವಾನನಶಿರೋಗ್ರೀವ ಸ್ಸರ್ವಭೂತ ಗುಹಾಶಯಃ**
**ಸರ್ವವ್ಯಾಪೀ ಸ ಭಗವಾನ್ ತಸ್ಮಾತ್ಸರ್ವಗತ ಶ್ಶಿವಃ (3–11)**

**ಭಾವಾರ್ಥ :– ಆ ಭಗವಂತನು ಸಮಸ್ತ ಪ್ರಾಣಿಗಳವೊಂದು ಮುಖಗಳನ್ನು, ಶಿರಸ್ಸುಗಳನ್ನು, ಕಂಠಗಳನ್ನು ಹೊಂದಿದವನಾಗಿದ್ದಾನೆ. ಸರ್ವ ಜೀವಿಗಳವೊಂದು ಹೃದಯ ಗುಹೆಗಳಲ್ಲಿ ನಿವಾಸಿಸುತ್ತಿದ್ದಾನೆ. ಆತನು ಸರ್ವವ್ಯಾಪಿ, ಮಂಗಳ ಸ್ವರೂಪನು ಆಗಿದ್ದಾನೆ.**

**ಉತ್ತರ :–** ಈ ಶ್ಲೋಕವನ್ನು ಬರೆದವನು ವ್ಯಾಸನೇ ಆದರೂ ವ್ಯಾಸನು ಶ್ವೇತಾಶ್ವತನು ಬರೆದ ವ್ಯಾಸಕ್ಕೆ ತಕ್ಕಂತೆ ಶ್ಲೋಕವನ್ನು ಬರೆದಿದ್ದಾನೆ. ಇದರಲ್ಲಿನ ಸತ್ಯ ಅಸತ್ಯಗಳ ಬಾಧ್ಯತೆ ಮೊದಲು ಬರೆದವನದ್ದೇ ಹೊರತು ವ್ಯಾಸನದ್ದು ಮಾತ್ರ ಅಲ್ಲ. ಇದರಲ್ಲಿ ಹೇಳಿರುವುದು ಕೆಲವರಿಗೆ ಸತ್ಯವಾಗಿಯೇ ಕಾಣಿಸಿದರೂ,

ವಾಸ್ತವಕ್ಕೆ ಈ ಶ್ಲೋಕವೊಂದರ ಭಾವನೆಯಲ್ಲಿ ಎಷ್ಟೊ ತಪ್ಪು ಇದೆಯೆಂದು ಹೇಳಬಹುದು. ಇದರಲ್ಲಿನ ಸತ್ಯಾಸತ್ಯವನ್ನು ವಿವರಿಸಿ ನೋಡಿದರೆ ಈ ವಿಧವಾಗಿದೆ. ಪರಮಾತ್ಮ ಪ್ರಜೆಗಳಿಗೆ ಜ್ಞಾನವನ್ನು ತಿಳಿಸುವ ನಿಮಿತ್ತ ಆಗಾಗ ಮನುಷ್ಯನಂತೆ ಅವತರಿಸಿ, ಮನುಷ್ಯರ ಮಧ್ಯದಲ್ಲಿ ನಿವಾಸಿಸುವ ಸಮಯ ಸಂದರ್ಭವನ್ನನುಸರಿಸಿ ಜ್ಞಾನವನ್ನು ಬೋಧಿಸಿ ಹೋಗುತ್ತಾನೆ. ದೈವಜ್ಞಾನವನ್ನು ದೇವರೇ ಹೇಳಬೇಕಾಗಿದೆ. ದೈವಜ್ಞಾನ ಮನುಷ್ಯರಿಗೆ ತಿಳಿದಿಲ್ಲ ಆದ್ದರಿಂದ ದೇವರ ಜ್ಞಾನವನ್ನು ದೇವರೇ ಬಂದು ಹೇಳುತ್ತಾನೆ. ದೇವರು ಮನುಷ್ಯನಾಗಿ ಬಂದರೇನೆ ಮನುಷ್ಯರೊಂದಿಗೆ ಮಾತನಾಡಿ ತನ್ನ ಜ್ಞಾನವನ್ನು ಹೇಳಬಲ್ಲನು. ಹಾಗೆ ಮನುಷ್ಯನಾಗಿ ಬಂದ ದೇವರನ್ನು ಯಾರೂ ಗುರುತು ಹಿಡಿಯದಿದ್ದರೂ, ಆತನು ಪ್ರತ್ಯೇಕವಾದವನು ಆಗಿರುವುದರಿಂದ, ಆತನು ಎಲ್ಲರಹಾಗೆ ಸಾಧಾರಣ ಮನುಷ್ಯ ಅಲ್ಲದಿರುವುದರಿಂದ ದೇವರ ಅವತಾರ ಜನ್ಮವಾದ ಮನುಷ್ಯನನ್ನು 'ಭಗವಂತ' ಎಂಬ ಪ್ರತ್ಯೇಕವಾದ ಹೆಸರಿನಿಂದ ಕರೆಯುತ್ತಿದ್ದಾರೆ. ಭಗವಂತನು ಮನುಷ್ಯನಾಗಿಯೇ ಇದ್ದರೂ ಆತನು ಸಾಧಾರಣ ಮನುಷ್ಯ ಅಲ್ಲ.

ಮನುಷ್ಯರೆಲ್ಲರೂ ತಾಯಿಗರ್ಭದಿಂದ ಹುಟ್ಟಿದ ನಂತರ ಜೀವವನ್ನು ಹೊಂದುತ್ತಿದ್ದಾರೆ. ತಾಯಿಗರ್ಭದಲ್ಲಿ ಸಾಧಾರಣ ಮನುಷ್ಯರ ಶರೀರ ಬೆಳೆಯುತ್ತಿದೆ. ಹಾಗೆ ತಾಯಿ ಗರ್ಭದಲ್ಲಿ ಶಿಶುವಾಗಿ ಬೆಳೆಯುತ್ತಿರುವಾಗ ಯಾರಿಗಾಗಲಿ ಜೀವವಿರುವುದಿಲ್ಲ. ಯಾವಮಾತ್ರ ಪ್ರಾಣವಾಗಲಿ, ಜೀವವಾಗಲಿ ಇಲ್ಲದ ಶಿಶು ಶರೀರ ತಾಯಿಗರ್ಭದಲ್ಲಿ ಬೆಳೆದು ಕೊನೆಗೆ ಪ್ರಸವ ನಡೆದಾಗ ತಾಯಿಗರ್ಭದಿಂದ ಹೊರಬಿದ್ದ ಶರೀರದೊಳಗೆ ಮೊದಲ ಶ್ವಾಸವಾಗಿ ಪ್ರಾಣ ಸೇರುವುದು, ಆ ಪ್ರಾಣದೊಂದಿಗೆ ಆತ್ಮ, ಜೀವಾತ್ಮ, ಗುಣಗಳು, ಕರ್ಮಗಳು ಎಲ್ಲವೂ ಸೇರುತ್ತವೆ. ಸಾಧಾರಣ ಮನುಷ್ಯ ಹುಟ್ಟಿದಾಗ ಶರೀರವು ಗರ್ಭದಿಂದ ಹೊರಬಿದ್ದ ನಂತರವೇ ಪ್ರಾಣ, ಜೀವ ಶಿಶು ಶರೀರದೊಳಗೆ ಸೇರುತ್ತಿವೆ.

ಸಾಧಾರಣ ಮನುಷ್ಯ ಅಲ್ಲದೇ ದೈವ (ಪರಮಾತ್ಮ) ಮನುಷ್ಯನಾಗಿ ಅವತರಿಸಿದಾಗ ಆತನು ಕೂಡಾ ತಾಯಿ ಗರ್ಭದಿಂದ ಶಿಶುವಾಗಿ ಹುಟ್ಟಬೇಕಾದ್ದೆ.

ಆದರೇ ಸಾಧಾರಣ ಮನುಷ್ಯ ಹುಟ್ಟಿದಹಾಗೆ ಭಗವಂತನು ಹುಟ್ಟುವುದಿಲ್ಲ. ದೇವರು ಭಗವಂತನಾಗಿ ಹುಟ್ಟಿದಾಗ ಆತನು ತಾಯಿಗರ್ಭದಿಂದ ಸಜೀವವಾಗಿ ಹುಟ್ಟುತ್ತಾನೆ. ಭಗದಿಂದ ಸಜೀವವಾಗಿ ಹುಟ್ಟಿದವನು ಆದ್ದರಿಂದ ಆತನಿಗೆ ಭಗವಂತನು' ಎನ್ನುವ ಗುರುತು ಹೊಂದಿದ ಪ್ರತ್ಯೇಕವಾದ ಹೆಸರನ್ನು ಇಡುವುದು ನಡೆದಿದೆ. ಪರಮಾತ್ಮ ಅಂಶ ಸ್ವಲ್ಪ ಭಗವಂತನಾಗಿ ಹುಟ್ಟಿದಲ್ಲಿಯೂ, ಪರಮಾತ್ಮನಲ್ಲಿ ಎಂತಹ ಬದಲಾವಣೆ ಇಲ್ಲದೇ ಆತನು ಎಲ್ಲಾಕಡೆ ಎಲ್ಲರೊಳಗೆ, ಎಲ್ಲರ ಹೊರಗೆ ಅಣುವಣುವಿನಲ್ಲೂ ವ್ಯಾಪಿಸಿದ್ದಾನೆ. ಭಗವಂತನು ದೇವರ ಅಂಶವೇ ಆದರೂ ಆತನು ಒಂದು ಶರೀರದಲ್ಲಿ ಮಾತ್ರ ಇದ್ದಾನೆ. ಭಗವಂತನು ತಾನು ಧರಿಸಿದ ಶರೀರ ಪರಿಧಿಯಲ್ಲಿಯೇ ಇರುತ್ತಾನೆ. ಆದ್ದರಿಂದ ಭಗವಂತನಿಗು ದೇವರಿಗು ಎಷ್ಟೋ ವ್ಯತ್ಯಾಸ ಇದೆಯೆಂದು ಹೇಳಬಹುದು.

ಭಗವಂತನಿಗು ಪರಮಾತ್ಮಗು (ದೇವರಿಗು) ಎಷ್ಟೋ ವ್ಯತ್ಯಾಸ ಇದೆಯೆಂಬ ವಿಷಯವನ್ನು ನಾವು 1980ರಲ್ಲಿ **"ಜನನ ಮರಣ ಸಿದ್ಧಾಂತ"** ಎಂಬ ಗ್ರಂಥದಲ್ಲಿ ಬರೆದಿಟ್ಟಿದ್ದೇವೆ. ಆದರೆ ನನ್ನ ಮಾತನ್ನು ಸತ್ಯವೆಂದು ಯಾರೂ ನಂಬಲಾರದೆ ಹೋಗಿದ್ದಾರೆ. ಗರ್ಭಸ್ಥ ಶಿಶುವಿಗೆ ಪ್ರಾಣವಿಲ್ಲ ಎಂದು ಹೇಳಿದರೆ ಡಾಕ್ಟರ್ಸ್ ಕೂಡಾ ಒಪ್ಪಿಕೊಳ್ಳುವವರು ಅಲ್ಲ. ಆದ್ದರಿಂದ ಬಹಳಜನ ಪ್ರಜೆಗಳಿಗಾಗಲಿ, ದೊಡ್ಡ ದೊಡ್ಡ ಸ್ವಾಮೀಜಿಗಳಿಗಾಗಲಿ ಈ ವಿಷಯ ತಿಳಿಯದು. 'ಭಗವಂತನು' ಎಂಬ ಮಾತಿನಲ್ಲಿನ ಸತ್ಯವನ್ನು ತಿಳಿಯದ ಬಹಳಜನ "ಭಗವಂತನು ಎಲ್ಲರಲ್ಲಿ ವ್ಯಾಪಿಸಿದ್ದಾನೆ. ಎಲ್ಲರನ್ನು ನೋಡುತ್ತಿದ್ದಾನೆ" ಎಂದು ಅನ್ನುತ್ತಿದ್ದಾರೆ. ಅವರ ಮಾತು ಪೂರ್ತಿ ಅಸತ್ಯವೆಂದು ತಿಳಿಯದೆಯೇ ಅವರು ಆ ವಿಧವಾಗಿ ಮಾತನಾಡುತ್ತಿದ್ದಾರೆ. ಅದೇ ವಿಧವಾಗಿಯೇ ದ್ವಾಪರಯುಗಕ್ಕಿಂತ ಮೊದಲೇ ಶ್ವೇತಾಶ್ವತನು ಎಂಬ ಮಹಾರ್ಷಿ ತನ್ನ ಉಪನಿಷತ್ತಿನಲ್ಲಿ "ಭಗವಂತನು ಸಮಸ್ತ ಪ್ರಾಣಿಗಳವೊಂದು ಮುಖಗಳನ್ನು, ಶಿರಸ್ಸುಗಳನ್ನು ಕಂಠಗಳನ್ನು ಹೊಂದಿದವನಾಗಿದ್ದಾನೆ" ಎಂದು ಹೇಳಿದ್ದಾನೆ. ಆದರೇ ಆತನು ಅಂದು ಕೊಂಡಹಾಗೆ ದೇವರು ಇರಬಹುದು ಆದರೆ, ಭಗವಂತನು ಇರುವುದಕ್ಕೆ ಅವಕಾಶ

ಇಲ್ಲ. ಏಕೆಂದರೇ! ಭಗವಂತನು ತಾನು ಧರಿಸಿದ ಶರೀರ ಪರಧಿಯಲ್ಲಿಯೇ ಇರುತ್ತಾನೆ ಆದರೆ, ಹೊರಗೆ ಮಾತ್ರ ಇಲ್ಲ. ಭಗವಂತನಿಗು ದೇವರಿಗು ವ್ಯತ್ಯಾಸ ತಿಳಿಯದ ಅಜ್ಞಾನಿಗಳು ಹೇಳುವ ಮಾತನ್ನು ಉಪನಿಷತ್ತುಗಳಲ್ಲಿ ಬರೆಯುವುದು ದೊಡ್ಡ ತಪ್ಪು. ಆದ್ದರಿಂದ ಇದು ಉಪನಿಷತ್ತಿನಲ್ಲಿ ಲೋಪವಾಗಿ ಇದೆಯೆಂದು ಹೇಳುತ್ತಿದ್ದೇನೆ. ಒಂದು ಶರೀರದಲ್ಲಿ ಭಗವಂತನಿರುವಾಗ ಆತನು ಸರ್ವ ಜೀವಿಗಳವೊಂದು ಹೃದಯ ಗುಹೆಗಳಲ್ಲಿ ನಿವಾಸಿಸುತ್ತಿದ್ದಾನೆ ಅನ್ನುವುದು ಎಂತಹ ವಿಧಾನವೊ ನೀವೆ ನೋಡಿರಿ. ದೇವರು ಅಂದರೇ ಪರಮಾತ್ಮ ಎಲ್ಲರಲ್ಲಿ, ಎಲ್ಲರ ಹೊರಗೆ ಅಣುವಣುವಿನಲ್ಲೂ ವ್ಯಾಪಿಸಿ ವಿಶ್ವ ವ್ಯಾಪಕವಾಗಿದ್ದಾನೆ. ಪೂರ್ವ ವಾಗಲಿ, ಈ ದಿನವಾಗಲಿ ಭಗವಂತನಿಗು, ದೇವರಿಗು ವ್ಯತ್ಯಾಸ ತಿಳಿಯದವರಿ ದ್ದಾರೆಂದು ಹೇಳುತ್ತಿದ್ದೇವೆ. ಸರ್ವವ್ಯಾಪಿ ಎಂದು ಭಗವಂತನನ್ನು ಈ ಶ್ಲೋಕದಲ್ಲಿ ಹೇಳಿದ್ದಾರೆ. ಹಾಗೇ ಎಲ್ಲರೂ ಅಂದುಕೊಳ್ಳುವುದು ನಡೆಯುತ್ತಿದೆ. ಭಗವದ್ಗೀತೆ ಯಲ್ಲಿ ಭಗವಂತನಿಗು ದೇವರಿಗು ಇರುವ ವ್ಯತ್ಯಾಸ ಹೇಳಲ್ಪಟ್ಟಿದೆ. ಆದರೂ ಅದನ್ನು ಸ್ವಾಮೀಜಿಗಳು ಕೂಡಾ ಗ್ರಹಿಸಲಿಲ್ಲ.

**30) ಪ್ರಶ್ನೆ :– ದೈವಜ್ಞಾನವನ್ನು ಸಂಪೂರ್ಣವಾಗಿ ಹೊಂದಿ ಯೋಗಿಯಾಗಿ ಯೋಗಾಗ್ನಿಯಿಂದ ತನ್ನ ಕರ್ಮಗಳೆಲ್ಲವನ್ನು ಇಲ್ಲದಹಾಗೆ ಮಾಡಿಕೊಂಡವನಿಗೆ ಜನ್ಮ ಇಲ್ಲದಹಾಗೆ ಹೋಗುತ್ತದಾ ಅಥವಾ ಮರಣ ಇಲ್ಲದಹಾಗೆ ಹೋಗುತ್ತದಾ?**

**ಉತ್ತರ :–** ಜನ್ಮ ಇಲ್ಲದಹಾಗೆ ಹೋಗುತ್ತದೆ. ಜನ್ಮ ಇಲ್ಲದಹಾಗೆ ಹೋದಾಗ ಪುನಃ ಮರಣವೆನ್ನುವುದು ಇರುವುದಿಲ್ಲ. ಅಂತಹವನು ಜನನ ಮರಣ ಇಲ್ಲದವನೆಂದು ಹೇಳಬಹುದು. ಜ್ಞಾನ ತಿಳಿದ ಯೋಗಿಗೆ ಮೊದಲು ಮರಣ ತಪ್ಪುವುದಿಲ್ಲ. ಆದ್ದರಿಂದ ನಿನ್ನ ಪ್ರಶ್ನೆಗೆ ಉತ್ತರವಾಗಿ ಜನ್ಮ ಇಲ್ಲದಹಾಗೆ ಹೋಗುತ್ತ ದೆಂದು ಹೇಳಿದ್ದೇವೆ.

## 31) ಪ್ರಶ್ನೆ :– ಆದರೆ ನೀವು ಹೇಳಿರುವುದಕ್ಕೆ ವಿರುದ್ಧವಾಗಿ ಮರಣ ಇರುವುದಿಲ್ಲವೆಂದು ಶ್ವೇತಾಶ್ವತರೋಪನಿಷತ್ತಿನಲ್ಲಿ ಒಂದು ಶ್ಲೋಕದಲ್ಲಿ ಹೀಗೆ ಹೇಳಿದ್ದಾರೆ ನೋಡಿರಿ.

**ಶ್ಲೋ :–**

**ಅಂಗುಷ್ಟಮಾತ್ರಃ ಪುರುಷೋಂತರಾತ್ಮಾ ಸದಾ ಜನಾನಾಂ ಹೃದಯೇ ಸನ್ನಿ ವಿಷ್ಟಃ, ಹೃದಾಮನೀಷೀ ಮನಸಾ ಭಿಕ್ಲುಪ್ತೋ ಯ ಏತದ್ವಿದು ರಮೃತಾಸ್ತೇ ಭವಂತಿ (3–13)**

**ಭಾವಾರ್ಥ :– ಪರಮಾತ್ಮ ಅಂಗುಷ್ಟಮಾತ್ರ ಪರಿಮಾಣದಿಂದ ಹೃದಯ ಗುಹೆಯಲ್ಲಿ ನಿವಾಸವಿದ್ದಾನೆ. ಆತನು ಪರಿಪೂರ್ಣನು, ಸಮಸ್ತ ಪ್ರಾಣಿಗಳ ಹೃದಯಗಳಲ್ಲಿದ್ದು ಮನಸ್ಸಿನಿಂದ ಮುಚ್ಚಲ್ಪಟ್ಟಿದ್ದಾನೆ. ಆತನು ಜ್ಞಾನಕ್ಕೆ ಪ್ರಭು ಎಂದು ತಿಳಿದವನು ಮರಣ ಇಲ್ಲದವನಾಗುತ್ತಿದ್ದಾನೆ.**

**ಈ ಶ್ಲೋಕ ಭಾವನೆಯನ್ನು ನೋಡಿದರೆ ದೈವಜ್ಞಾನ ಹೊಂದಿದವನಿಗೆ, ದೇವರನ್ನು ಕುರಿತು ತಿಳಿದವನಿಗೆ ಮರಣ ಇಲ್ಲವೆಂದು ಹೇಳಿದ್ದಾರೆ. ಒಬ್ಬ ಜ್ಞಾನಿ ಯೋಗಿಯಾಗಿ ಮರಣಿಸದೆ ಹಾಗೇ ಸ್ಥಿರಸ್ಥಾಯಿಯಾಗಿ ಭೂಮಿಮೇಲೆ ಇರುವನಾ ಎಂದು ಪ್ರಶ್ನೆ ಬರುತ್ತಿದೆ. ನಿಮಗೆ ತಿಳಿದ ಪ್ರಕಾರ ಮೇಲಿನ ಶ್ಲೋಕದಲ್ಲಿ ಹೇಳಿದಮಾತು ವಾಸ್ತವವಾ?**

**ಉತ್ತರ :–** ಮನುಷ್ಯ ತನ್ನ ಜೀವನದಲ್ಲಿ ಆತ್ಮಜ್ಞಾನವನ್ನು ಚೆನ್ನಾಗಿ ತಿಳಿದವನಾಗಿ ಪರಮಾತ್ಮನನ್ನು ಸೇರಿ ಮೋಕ್ಷ ಹೊಂದಬೇಕೆಂದು ಅಂದುಕೊಂಡವನಿಗೆ ಮೋಕ್ಷ ಲಭಿಸಬಹುದು. ಮೋಕ್ಷ ಅಂದರೇ ಕರ್ಮ ಸಂಬಂಧ ಜನ್ಮಗಳು ಇಲ್ಲದೇ ಹೋಗಿ ದೇವರಲ್ಲಿ ಸೇರಿಹೋಗುವುದೆಂದು ಅರ್ಥ. ಅಂತಹವನಿಗೆ ಮರಣ ಬಂದು ಇರುವ ಶರೀರವನ್ನು ಬಿಟ್ಟುಹೋದಾಗ ಅಲ್ಲವೇ! ಆತನು ದೇವರನ್ನು ಸೇರುವುದು. ಮರಣ ಸಂಭವಿಸದೆಹೋದರೆ ಅಲ್ಲಿಯವರೆಗೂ ಇದ್ದ ಶರೀರ

ಹಾಗೇ ಇರುತ್ತದೆ ಅಲ್ಲವೆ! ಮೋಕ್ಷ ಹೊಂದುವವನಾಗಲಿ ಅಥವಾ ಮೋಕ್ಷವನ್ನು ಹೊಂದದವನಾಗಲಿ ತಪ್ಪದೆ ಆ ಜೀವನಕ್ಕೆ ಸಂಬಂಧಿಸಿದ ಶರೀರವನ್ನು ಬಿಟ್ಟು ಮರಣವನ್ನು ಹೊಂದಬೇಕಾದ್ದೆ. ಮನುಷ್ಯ ಜ್ಞಾನಿಯಾಗಲಿ, ಅಜ್ಞಾನಿಯಾಗಲಿ ಹುಟ್ಟಿದವನು ಮರಣಿಸಬೇಕಾದ್ದೇಯೆಂದು ಭಗವದ್ಗೀತೆಯಲ್ಲಿ ಸಾಂಖ್ಯಯೋಗ ದಲ್ಲಿ 27ನೇ ಶ್ಲೋಕದಲ್ಲಿ ಹೇಳಿದ್ದಾರೆ. **"ಜಾತಸ್ಯ ಹಿ ಧೃವೋಮೃತ್ಯು"** ಎಂದು ಭಗವಂತನು ಹೇಳುವುದು ನಡೆದಿದೆ. ಅದರ ಅರ್ಥದ ಪ್ರಕಾರ **"ಹುಟ್ಟಿದವನು ತಪ್ಪದೆ ಮರಣ ಹೊಂದಬೇಕಾದ್ದೆ"** ಎಂದು ಇದೆ. ಹಾಗೇ **"ಧ್ರುವಂ ಜನ್ಮ ಮೃತಸ್ಯಚ"** ಎಂದು ಕೂಡಾ ಹೇಳಿದ್ದಾನೆ. ಅದರ ಅರ್ಥ **"ಸತ್ತವನು ಪುನಃ ಹುಟ್ಟಬೇಕಾದ್ದೆ"** ಎಂದು ಹೇಳಬಹುದು. **"ಅಜ್ಞಾನ ಜೀವನ ಕಳೆಯುವವನು ಹುಟ್ಟಿದವನು ಸಾಯದೆ ತಪ್ಪುವುದಿಲ್ಲ, ಸತ್ತವನು ಹುಟ್ಟದೆ ತಪ್ಪುವುದಿಲ್ಲ ಎಂದು ಇದು ಅನಿವಾರ್ಯವಾದ ಕಾರ್ಯ"** ಎಂದು ಹೇಳಿದ್ದಾರೆ.

ಮನುಷ್ಯನಿಗೆ ಮರಣಗಳು ನಾಲ್ಕು ವಿಧಗಳೆಂದು ಗತದಲ್ಲಿ **"ಮರಣ ರಹಸ್ಯ"** ಎಂಬ ಗ್ರಂಥದಲ್ಲಿ ಹೇಳಿದ್ದೇವೆ. ಅದರಲ್ಲಿ **ಒಂದು ಅಕಾಲ ಮರಣ, ಎರಡು ಕಾಲ ಮರಣ, ಮೂರು ತಾತ್ಕಾಲ ಮರಣ, ನಾಲ್ಕು ಅಂತಿಮ ಮರಣ** ಎಂದು ಹೇಳಿದ್ದೇವೆ. ಮನುಷ್ಯ ಕಾಲ ಮರಣವನ್ನು ಹೊಂದಿದರೆ ಆತನು ಪೂರ್ತಿ ಮರಣಿಸಿದಂತೆಯೆಂದು, ಆತನು ಹೊಸ ಶಿಶು ಶರೀರದಲ್ಲಿ ಜನ್ಮಿಸುತ್ತಾ ನೆಂದು ಹೇಳಿದ್ದೇವೆ. ಹಾಗೇ ಕೊನೆಯ ಮರಣವನ್ನು ಹೊಂದುವ ಮನುಷ್ಯ ಪುನಃ ಜನ್ಮಿಸದೆ ಮೋಕ್ಷವನ್ನು ಹೊಂದುತ್ತಾನೆ. ಅವನು ಮತ್ತೆ ಹುಟ್ಟುವುದಾಗಲಿ, ಮರಣಿಸುವುದಾಗಲಿ ಇರುವುದಿಲ್ಲ. ಜ್ಞಾನಮಾರ್ಗದಲ್ಲಿ ಜೀವನ ಕಳೆಯುವವನು ಸಂಪೂರ್ಣ ಯೋಗಿಯಾಗಿ ಕರ್ಮರಹಿತನಾಗಿ ಮತ್ತೆ ಹುಟ್ಟುವುದಿಲ್ಲ ಆದ್ದರಿಂದ ಆತನು ಹೊಂದುವ ಮರಣವನ್ನು ಕೊನೆಯ ಮರಣ ಎಂದು ಕರೆಯುತ್ತೇವೆ. ಯಾವ ವಿಧವಾಗಿ ಆದರೂ ಮನುಷ್ಯ ಹುಟ್ಟಿದ ನಂತರ ಮರಣಿಸಬೇಕಾದ್ದೆ. ಪ್ರತ್ಯೇಕಿಸಿ ಜ್ಞಾನ ಜೀವನವನ್ನು ಕಳೆದವನು ಮರಣವನ್ನು ಹೊಂದಿ ಪುನಃ ಜನ್ಮಿಸುವುದಿಲ್ಲ. ಆದ್ದರಿಂದ ದೈವವನ್ನು ಹೊಂದಬೇಕೆಂದುಕೊಳ್ಳುವವನಿಗೆ ಜನ್ಮ

ಇರುವುದಿಲ್ಲ ಎಂದು ಹೇಳಬೇಕೇ ಹೊರತು, ಮರಣ ಇರುವುದಿಲ್ಲ ಎಂದು ಹೇಳಬಾರದು. ಆದ್ದರಿಂದ ಉಪನಿಷತ್ತಿನಲ್ಲಿ ಈ ವಿಷಯವನ್ನು ಬರೆದ ಆತನಿಗೆ ಮರಣವನ್ನು ಕುರಿತಾಗಲಿ, ಕೊನೆಯ ಮರಣವನ್ನು ಕುರಿತಾಗಲಿ ತಿಳಿಯದು ಎಂದು ಅಂದುಕೊಳ್ಳುತ್ತೇನೆ. ಹಾಗೇ ಆತನಿಗೆ ಸಾವು ಹುಟ್ಟುಗಳ ರಹಸ್ಯವಾಗಲಿ, ಸಾವುಹುಟ್ಟುಗಳ ವ್ಯತ್ಯಾಸವಾಗಲಿ ತಿಳಿಯದೆಂದು ಅಂದುಕೊಳ್ಳುತ್ತೇನೆ. ಇದು ಉಪನಿಷತ್ತಿನಲ್ಲಿನ ಲೋಪ ಅಲ್ಲವಾ! ಎಂದು ಕೇಳುತ್ತಿದ್ದೇನೆ.

ಅಷ್ಟೇ ಅಲ್ಲದೆ ಪರಮಾತ್ಮ ಸಮಸ್ತ ಶರೀರಗಳ ಹೃದಯಗಳಲ್ಲಿದ್ದು ಮನಸ್ಸಿನಿಂದ ಮುಚ್ಚಲ್ಪಟ್ಟಿದ್ದಾನೆ ಎಂದು ಹೇಳುವುದು ಕೂಡಾ ಪೂರ್ತಿ ತಪ್ಪಾಗುತ್ತದೆ. ಇದು ಆತ್ಮಗು ಪರಮಾತ್ಮಗು ವ್ಯತ್ಯಾಸ ತಿಳಿಯದವರು ಮಾತನಾಡಿದ ಮಾತಾಗಿದೆ. ಆತ್ಮ ಶರೀರದಲ್ಲಿ ನಿವಾಸವಿರುತ್ತದೆ, ಪರಮಾತ್ಮ ನಿವಾಸ ಯಾರಿಗೂ ತಿಳಿಯದು, ಇಂತಹದೆಂದು ಹೇಳಲಾರೆವು. ಶರೀರದಲ್ಲಿ ಆತ್ಮ ಎಲ್ಲವನ್ನು ಮುಚ್ಚಿದೆಯೆಂದು ಹೇಳಿದರೂ ಸರಿಹೋಗುತ್ತದೆ ಆದರೆ, ಪರಮಾತ್ಮನನ್ನು ಮನಸ್ಸು ಮುಚ್ಚಿರುವುದೇನು? ಶರೀರಕ್ಕೆ ಅಧಿಪತಿಯಾಗಿ ಆತ್ಮ ಇದೆ ಆದರೆ ಮನಸ್ಸು ಅಲ್ಲವೆಂದು ತಿಳಿಯಬೇಕು.

**32) ಪ್ರಶ್ನೆ :– ಪರಮಾತ್ಮನನ್ನು ತಿಳಿಯದೆ ಹೋದರೆ ದುಃಖ ನಾಶವಾಗುವುದಿಲ್ಲವೆಂದು ಶ್ವೇತಾಶ್ವತರೋಪನಿಷತ್ತಿನಲ್ಲಿ ಬರೆದಿದ್ದಾರೆ. ಇದಕ್ಕು ಮುನ್ನ ಈ ವಿಷಯವನ್ನೇ ನೀವು ನಿರ್ಣಯಿಸಿ ಹೇಳಿದ್ದೀರ. ಆದರೂ ಅನೇಕಕಡೆ ಇದೇ ವಿಷಯ ವನ್ನೇ ಈ ಉಪನಿಷತ್ತಿನಲ್ಲಿ ಬರೆಯುವುದರಿಂದ ನಮಗೆ ಸಂಶಯ ಉಂಟಾಗುತ್ತಿದೆ. ಈ ವಿಷಯವನ್ನು ಮತ್ತೊಂದುಸಲ ವಿವರಿಸಿರೆಂದು ಕೋರುತ್ತಿದ್ದೇವೆ.**

**ಶ್ಲೋ॥ ಯದಾ ಚರ್ಮವದಾಕಾಶಂ ವೇಷ್ಟಯಿಷ್ಯಂತಿ ಮಾನವಾಃ**
**ತದಾ ಶಿವ ಮವಿಜ್ಞಾಯ ದುಃಖಶಾಂತೋ ಭವಿಷ್ಯತಿ. (6–20)**

**ಭಾವಾರ್ಥ :– ಆಕಾಶವನ್ನು ಚರ್ಮದಂತೆ ಸಿಂಬೆ ಸುತ್ತುವುದಕ್ಕೆ ಹೇಗೆ ಶಕ್ಯವಾಗುವುದಿಲ್ಲವೋ ಹಾಗೇ ಪರಮಾತ್ಮನನ್ನರಿಯದೆ ದುಃಖವೊಂದರ ನಾಶ ಈಡೇರದು.**

**ಉತ್ತರ :–** ಅವರು ಹೇಳಿದ ಭಾವನೆಯಲ್ಲಿ "ಪರಮಾತ್ಮನನ್ನು ತಿಳಿಯದೇ" ಎಂದು ಬರೆದಿದ್ದಾರೆ. ಆದರೇ ಶ್ಲೋಕದಲ್ಲಿ "ಶಿವ ಮವಿಜ್ಞಾಯ" ಎಂದು ಬರೆದಿದ್ದಾರೆ. ಶಿವ ಅಂದರೇ ಆತ್ಮಯೆಂದು, ಪರಮಶಿವ ಅಂದರೇ ಪರಮಾತ್ಮ ಯೆಂದು ಅರ್ಥವಿದೆ. ಅಲ್ಲಿ ಶ್ಲೋಕದಲ್ಲಿ ಹೇಳಿರುವುದು ಶಿವಯೆಂದು ಆತ್ಮವನ್ನು ಕುರಿತು ಹೇಳಿದ್ದಾರೆ ಹೊರತು, ಪರಮಾತ್ಮನನ್ನು ಕುರಿತು ಹೇಳಲಿಲ್ಲ. ಅವರು ಅಂದುಕೊಂಡಹಾಗೆ ಪರಮಾತ್ಮನನ್ನು ತಿಳಿಯದೆಯೇ ದುಃಖ ನಾಶವಾಗುವುದಿಲ್ಲ ಎಂದು ಅಂದುಕೊಳ್ಳುವುದು ಆಧ್ಯಾತ್ಮಿಕದಲ್ಲಿ ದಾರಿ ತಪ್ಪಿ ಹೇಳಿದಂತಾಗುತ್ತದೆ. ಮನುಷ್ಯ ಯಾರಾದರಾಗಲಿ ಆತ್ಮನನ್ನು ಆರಾಧಿಸಬಹುದು, ಆತ್ಮವನ್ನು ತಿಳಿಯಬಹುದು. ಎಂತಹ ಪರಿಸ್ಥಿತಿಯಲ್ಲಿ ಪರಮಾತ್ಮನನ್ನು ತಿಳಿಯುವುದಕ್ಕಾಗಲಿ, ಆತನನ್ನು ಆರಾಧಿಸುವುದಕ್ಕಾಗಲಿ ಸಾಧ್ಯಪಡುವುದಿಲ್ಲ. ಪರಮಾತ್ಮ ಇಂತಹ ಕಡೆ ಇದ್ದಾನೆಂದು, ಇಂತಹ ಆಕಾರದಲ್ಲಿ ಇದ್ದಾನೆಂದಾಗಲಿ, ಇಂತಹ ಹೆಸರಿನಿಂದ ಇದ್ದಾನೆಂದಾಗಲಿ, ಇಂತಹ ಕೆಲಸ ಮಾಡುತ್ತಿದ್ದಾನೆಂದಾಗಲಿ ಯಾರಿಗೂ ತಿಳಿದಿಲ್ಲ. ಆತನು ರೂಪ, ನಾಮ, ಕ್ರಿಯೆಗಳು ಇಲ್ಲದವನು. ಆದ್ದರಿಂದ ಪರಮಾತ್ಮನನ್ನು ಬದುಕಿರುವ ಮನುಷ್ಯ ಯಾರಾಗಲಿ ತಿಳಿಯಲಾರನು. ಶಿವ ಎಂಬ ಆತ್ಮಗೆ ರೂಪ, ನಾಮ, ಕ್ರಿಯೆಗಳು ಇವೆ ಆದ್ದರಿಂದ ಯಾರಾದರೂ ಆತ್ಮನನ್ನು ತಿಳಿಯಬಹುದು, ಆತ್ಮವನ್ನು ಆರಾಧಿಸಬಹುದು. ಆತ್ಮನನ್ನು ಕುರಿತೇ ಶ್ಲೋಕದಲ್ಲಿ ಹೇಳಿದ್ದಾರೆ ಹೊರತು, ಪರಮಾತ್ಮನನ್ನು ಕುರಿತು ಹೇಳಲಿಲ್ಲ. ಶರೀರದಲ್ಲಿನ ಆತ್ಮವನ್ನು ತಿಳಿಯದೇ ಶರೀರದಲ್ಲಿ ಉಂಟಾಗುವ ದುಃಖ

ನಾಶವಾಗುವುದಿಲ್ಲ ಎಂದು ಹೇಳುವುದು ಸಕ್ರಮವಾಗುತ್ತದೆ. 'ಪರಮಾತ್ಮನನ್ನು ತಿಳಿಯದೇ" ಎಂದು ಹೇಳುವುದು ಸಕ್ರಮ ಅಲ್ಲವೆಂದು ತಿಳಿಯಬೇಕು. ಭಾವದ ಪ್ರಕಾರ ಈ ವಿಷಯ ಎಷ್ಟೋ ಲೋಪದಿಂದ ಕೂಡಿಕೊಂಡಿದೆ. ಭೂಮಿಮೇಲೆ ಸಜೀವವಾಗಿ ಇರುವವನು ಯಾರಾಗಲಿ ಸೃಷ್ಠಿ ಆದಿಯಿಂದ ಪರಮಾತ್ಮನನ್ನು ತಿಳಿಯಲಿಲ್ಲ. ಮರಣಿಸಿದ ನಂತರ ಮುಕ್ತಿಹೊಂದಿದಾಗ ಪರಮಾತ್ಮನನ್ನು ತಿಳಿಯಬಹುದು. ಮನುಷ್ಯ ಶರೀರದಿಂದ ಬದುಕಿರುವಾಗ ಪರಮಾತ್ಮನನ್ನು ತಿಳಿಯುತ್ತಾನೆ ಎನ್ನುವುದು ಪೂರ್ತಿ ಅಸತ್ಯವಾಗುತ್ತದೆ.

# ಗರ್ಭೋಪನಿಷತ್ತು

**33) ಪ್ರಶ್ನೆ :– ಗರ್ಭಸ್ಥ ಶಿಶುವಿಗೆ ಪ್ರಾಣ ಇಲ್ಲವೆಂದು, ಹಾಗೇ ಜೀವಿಯು ಕೂಡಾ ಇಲ್ಲವೆಂದು ಹೇಳಿದ್ದೀರ. ಆದರೇ ಈಗ ಗರ್ಭೋಪನಿಷತ್ತಿನಲ್ಲಿ ವರಸೆಯಾಗಿ ನಾಲ್ಕು ಶ್ಲೋಕಗಳನ್ನು ನೋಡಿದರೆ ನಿಮ್ಮ ಮಾತಿಗೆ ವಿರುದ್ಧವಾಗಿ ಹೇಳಿದಹಾಗೆ ಇದೆ. ಕೆಳಗೆ ನೋಡಿರಿ.**

**ಶ್ಲೋ॥ ನಾನಾಯೋನಿ ಸಹಸ್ರಾಣಿ ದೃಷ್ಟ್ವಾಚೈವ ತತೋ ಮಯಾ,**
**ಅಹಾರಾ ವಿವಿಧಾ ಭುಕ್ತಾಃ ಪೀತಾಶ್ಚ ವಿವಿಧಾಃ ಸ್ತನಾಃ (4)**

**(ಆಗ ಗರ್ಭಸ್ಥ ಜೀವಿಯು ಈ ಪ್ರಕಾರವಾಗಿ ಚಿಂತನೆ ಮಾಡುತ್ತಿದ್ದಾನೆ)**

**ಭಾವಾರ್ಥ :– ನಾನು ಅನೇಕ ಸ್ತ್ರೀ ಯೋನಿಗಳನ್ನು ನೋಡಿದ್ದೇನೆ. ಅನೇಕವಾದ ಆಹಾರಗಳನ್ನು ಭುಜಿಸಿದ್ದೇನೆ. ಅನೇಕ ಸ್ತನಗಳ ಮೂಲಕ ಕ್ಷೀರವನ್ನು ಪಾನ ಮಾಡಿದೆನು.**

**ಶ್ಲೋ॥ ಜನ್ಮ ಭೂಮಿರ್ಹಿ ಸರ್ವಾಭೂ ಶ್ಮ್ಮಶಾನಮಪಿ ಮೇ ಪುರಾ,**
**ಚತರಶೀತಿ ಲಕ್ಷೇಷು ಯೋನಿ ಭೇದೇಷು ಚಾಭವಮ್. (5)**

**ಭಾವಾರ್ಥ :– ನನಗೆ ಸಮಸ್ತ ಭೂಮಿಯು ಜನ್ಮ ಭೂಮಿಯೇ, ಸಮಸ್ತ ಭೂಮಿಯು ಸ್ಮಶಾನವೇ, ನಾನು ಎಂಬತ್ತುನಾಲ್ಕು ಲಕ್ಷಗಳ ಯೋನಿ ಭೇದಗಳಲ್ಲಿ ಜನ್ಮಿಸಿದ್ದೇನೆ.**

**ಶ್ಲೋ॥ ಜಾತಶ್ಚಾಸ್ಮಿ ಮೃತಶ್ಚಾಸ್ಮಿ ಸಂಸಾರ್ಯಸ್ಮಿ ಪುನಃ ಪುನಃ.**
**ಜನ್ಮ ಮೃತ್ಯೂ ಪುನರ್ಜನ್ಮ ಪುನರ್ಮೃತ್ಯುಃ ಪುನರ್ಜನಿಃ (6)**

**ಭಾವಾರ್ಥ :– ಎಷ್ಟೋಬಾರಿ ಹುಟ್ಟಿದ್ದೇನೆ. ಎಷ್ಟೋಬಾರಿ ಸತ್ತಿದ್ದೇನೆ. ಎಷ್ಟೋಬಾರಿ ಸಂಸಾರಿಯಾಗಿದ್ದೆನು. ಹುಟ್ಟುವುದು, ಸಾಯುವುದು, ಮತ್ತೆ ಹುಟ್ಟುವುದು, ಮತ್ತೆ ಸಾಯುವುದು, ಈ ಪ್ರಕಾರವಾಗಿ ನನ್ನ ಕಾಲ ಕಳೆದುಹೋಗಿದೆ.**

**ಶ್ಲೋ॥ ಗರ್ಭವಾಸೇ ಮಹಾದ್ದುಃಖಂ, ಮೋಹ ದುಃಖಂ ಚ ಜನ್ಮಸು,**
**ಬಾಲ್ಯೇ ದುಃಖಂ ತಥಾ ಶೋಕಃ ಪಾರವಶ್ಯಂ ಚ ಮೂಢತಾ. (7)**

**ಭಾವಾರ್ಥ :– ಗರ್ಭವಾಸ ಮಹಾ ದುಃಖವಾದುದು. ಜನ್ಮಿಸುವುದರಲ್ಲಿ ಮೋಹವು ಮಹಾ ದುಃಖವಾದುದು. ಬಾಲ್ಯದಲ್ಲಿ ದುಃಖ, ಶೋಕ, ಪರವಶತ್ವ, ಮೂಢತ್ವ ಉಂಟಾಗುತ್ತಿವೆ.**

**ಉತ್ತರ:–** ಗರ್ಭದಲ್ಲಿನ ಶಿಶುವು ಗರ್ಭದಲ್ಲಿಯೇ ಇರುತ್ತಾ, ನಾಲ್ಕು ಶ್ಲೋಕಗಳ ಭಾವನೆಗಳಲ್ಲಿ ಹೇಳಿದಹಾಗೆ ತಿಳಿಯುತ್ತಿದ್ದಾನೆಂದು ಹೇಳುವುದು ವಾಸ್ತವಕ್ಕೆ ಪೂರ್ತಿ ವಿರುದ್ಧವಾಗಿದೆ. ನೀವು ಹೇಳಿದಹಾಗೆ ಗರ್ಭದಲ್ಲಿ ಶಿಶುವು ಸಜೀವವಾಗಿ ಇರುತ್ತದೆಂದು ಎಲ್ಲರೂ ಅಂದುಕೊಳ್ಳುವುದು ನಡೆಯುತ್ತಿದೆ. ಹಾಗೆ ಅಂದು ಕೊಳ್ಳುವುದಕ್ಕೆ ಇಂತಹ ವ್ಯಾಸಗಳನ್ನು ಬರೆದವರೆಲ್ಲರೂ ತಾಯಿಗರ್ಭದಲ್ಲಿನ ಶಿಶುವಿಗೆ ಪ್ರಾಣವಿದೆಯೆಂದು ಹೇಳುವುದರಿಂದ ಎಲ್ಲರೂ ಅದನ್ನೇ ನಂಬಿದ್ದಾರೆ. ಅದಕ್ಕೆ ಜೊತೆಯಾಗಿ ಪುರಾಣಗಳು ಕೂಡಾ ಅದೇ ವಿಷಯವನ್ನೇ ಹೇಳುವು ದರಿಂದ ಎಲ್ಲರೂ ಗರ್ಭಸ್ಥ ಶಿಶುವಿಗೆ ಪ್ರಾಣವಿದೆಯೆಂದು ನಂಬುವು ದಾಗಿದೆ.

ಭಾಗವತ ಪುರಾಣದಲ್ಲಿ ಪ್ರಹ್ಲಾದ ಜನ್ಮದಲ್ಲಿ ಪ್ರಹ್ಲಾದನು ತಾಯಿಗರ್ಭದಲ್ಲಿ ಇದ್ದಾಗಲೇ ನಾರದ ಮಹಾರ್ಷಿ ಹೇಳಿದ ನಾರಾಯಣ ಮಂತ್ರವನ್ನು ಕೇಳಿದ್ದಾನೆಂದು ಹೇಳಿರುವುದರಿಂದ ಇವೆಲ್ಲವೂ ಸತ್ಯಗಳೆಂದು ನಂಬಿದ ಪ್ರಜೆಗಳು ಎಲ್ಲರೂ ಗರ್ಭೋಪನಿಷತ್ತಿನಲ್ಲಿ ಈಗ ಹೇಳಿದ ಮಾತುಗಳೆಲ್ಲ ಸತ್ಯಗಳೇಯೆಂದು ನಂಬಿದ್ದಾರೆ. ಹಾಗೆ ಪ್ರಜೆಗಳು ನಂಬಿರುವುದರಿಂದ ಈ ದಿನ ಇವುಗಳನ್ನು ನೆಪವಾಗಿ ತೋರಿಸಿ, ತಪ್ಪು ಜ್ಞಾನವನ್ನು ಪ್ರಚಾರ ಮಾಡುವವರು ಎಷ್ಟೋಜನ ತಮ್ಮದೇ ನಿಜವಾದ ಜ್ಞಾನ ಎಂದು ಹೇಳುತ್ತಿದ್ದಾರೆ.

ತಾಯಿಗರ್ಭದಲ್ಲಿನ ಶಿಶುವಿಗೆ ಪ್ರಾಣ ಇಲ್ಲವೆಂದು ಎಷ್ಟೋ ಪ್ರತ್ಯಕ್ಷ ಸಾಕ್ಷಿಗಳನ್ನು ತೋರಿಸುತ್ತಾ ನಾನು **"ಜನನ ಮರಣ ಸಿದ್ಧಾಂತ"** ಎಂಬ ಗ್ರಂಥವನ್ನು 1980ನೇ ವರ್ಷದಲ್ಲಿಯೇ ಬರೆದಿದ್ದೇನೆಂದು ಹೇಳಿದ್ದೇನೆ. ನಾನು ಪ್ರತ್ಯಕ್ಷವಾಗಿ ನಡೆದ ಎಷ್ಟೋ ಸಂಘಟನೆಗಳನ್ನು ಬರೆಯುವುದರಿಂದ ಗರ್ಭಸ್ಥ ಶಿಶುವಿಗೆ ಪ್ರಾಣವಿಲ್ಲವೆಂದು ಸ್ವಲ್ಪಮಟ್ಟಿಗೆ ತಿಳಿದಿದೆ. ನಾನು ಈ ಮಾತು ಹೇಳುವುದಕ್ಕೆ ಬಲವಾದ ಸಾಕ್ಷಿ ಭಗವದ್ಗೀತೆಯಲ್ಲಿ ಸಾಂಖ್ಯಯೋಗದಲ್ಲಿರುವ 22ನೇ ಶ್ಲೋಕ ವೆಂದೇ ಹೇಳಬಹುದು. ಆ ಶ್ಲೋಕ ಭಾವನೆಯಲ್ಲಿ ಹೀಗೆ ಬರೆದಿದೆ. **"ಹರಿದು ಹೋದ ವಸ್ತ್ರವನ್ನು, ಧರಿಸುವುದಕ್ಕೆ ಯೋಗ್ಯತೆ ಇಲ್ಲದ ವಸ್ತ್ರವನ್ನು ಮನುಷ್ಯ ಬಿಟ್ಟುಹಾಕಿ, ಹೊಸ ವಸ್ತ್ರವನ್ನು ಹೇಗೆ ಧರಿಸುತ್ತಿದ್ದಾನೊ ಅದೇ ವಿಧವಾಗಿ ಶಿಥಿಲವಾದ ಶರೀರವನ್ನು ಬಿಟ್ಟು ಮನುಷ್ಯ ಹೊಸ ಶರೀರವನ್ನು ತೆಗೆದುಕೊಳ್ಳುತ್ತಿದ್ದಾನೆ."** ಈ ವಿಧವಾಗಿ ಹೇಳಿದ ಭಗವಂತನ ವಿಷಯ ನಾನು ಹೇಳಿದ ಜನನ ಸಿದ್ಧಾಂತಕ್ಕೆ ಆಧಾರವಾಗಿದೆ. ಬಹಳಕಡೆ ಗರ್ಭದಿಂದ ಹೊರಬಿದ್ದ ಶಿಶುವಿಗೆ ಪ್ರಾಣ ಇಲ್ಲದ್ದು ನೋಡಿ ಗರ್ಭದಲ್ಲಿಯೇ ಶಿಶುವು ಮರಣಿಸಿದೆಯೆಂದು ಶಿಶುವನ್ನು ಮಣ್ಣಿನಲ್ಲಿ ಹೂತಿಟ್ಟ ನಂತರ ಅದೇ ಶಿಶುವಿಗೆ ಪ್ರಾಣ ಬಂದು ಅರಚುತ್ತಿರುವಾಗ, ಸ್ವಲ್ಪ ಶಬ್ದವನ್ನು ಕೇಳಿ ಮತ್ತೆ

ಶಿಶು ವನ್ನು ಹೊರಗೆ ತೆಗೆದುಕೊಂಡ ಸಂಘಟನೆಗಳು ಅನೇಕವಾಗಿ ಅಲ್ಲಲ್ಲಿ ನಡೆದಿವೆ. ಹಾಗೆ ನಡೆದವುಗಳಿಗೆ ಸಮಾಧಾನ ಯಾರೂ ಹೇಳದಿದ್ದರೂ ಗರ್ಭದಲ್ಲಿನ ಶಿಶುವಿಗೆ ಪ್ರಾಣವಿದೆಯೆಂಬ ವಿಷಯವನ್ನೇ ಎಲ್ಲರೂ ನಂಬುತ್ತಿದ್ದಾರೆ.

ಎಷ್ಟೋ ಪ್ರತ್ಯಕ್ಷ ಸಂಘಟನೆಗಳಲ್ಲಿ ತಾಯಿಗರ್ಭದಿಂದ ಹೊರಗೆ ಬಂದ ಶಿಶುಗಳಿಗೆ ಐದು, ಹತ್ತು ನಿಮಿಷಗಳಿಗಾಗಲಿ, ಗಂಟೆ ಎರಡು ಗಂಟೆಗಳಿಗಾಗಲಿ ಪ್ರಾಣಬಂದ ಸಂಘಟನೆಗಳು ಅನೇಕ ಇವೆ. ಆದರೂ ಪ್ರಜೆಗಳು ಕೆಲವರು ಮೂರ್ಖವಾಗಿ ಅಸತ್ಯವನ್ನೇ ನಂಬುತ್ತಾ ಕಲ್ಪಿತ ಪುಕ್ಕಟೆ ಪುರಾಣಗಳು, ಊಹಾ ಜನಿತ ಉಪನಿಷತ್ತುಗಳನ್ನು ನಂಬುತ್ತಿದ್ದಾರೆ. ಸತ್ಯವನ್ನು ವಿಸ್ಮರಿಸುತ್ತಿದ್ದಾರೆ. ಸತ್ಯದ ಪ್ರಕಾರ ನೋಡಿದರೆ **"ಗರ್ಭದಲ್ಲಿ ಶಿಶುವಿಗೆ ಪ್ರಾಣವಿಲ್ಲ"** ಎನ್ನುವುದು ವಾಸ್ತವ. ಆದ್ದರಿಂದ ಗರ್ಭೋಪನಿಷತ್ತಿನಲ್ಲಿ ಹೇಳಿದಹಾಗೆ ಶಿಶುವು ಗರ್ಭದಲ್ಲಿಯೇ ಅಂದುಕೊಳ್ಳುತ್ತಿದ್ದಾನೆ ಎನ್ನುವ ವಿಷಯಗಳೆಲ್ಲವೂ ಪೂರ್ತಿ ಅಸತ್ಯಗಳು. ಗರ್ಭದಲ್ಲಿ ಪ್ರಾಣವಿಲ್ಲ. ಜೀವಿಯು ಅಷ್ಟಕ್ಕೂ ಇಲ್ಲ. ಮರಣಿಸಿದಾಗ ಶರೀರದಲ್ಲಿನ ಜೀವಿಯು ಹೊರಗೆ ಬಂದ ಸೆಕೆಂಡು ಕಾಲದಲ್ಲಿಯೇ, ಇನ್ನೂ ವಿವರವಾಗಿ ಹೇಳಿದರೆ ಒಂದು ಸೆಕೆಂಡಿನಲ್ಲಿ ಹತ್ತನೇ ಭಾಗದಲ್ಲಿಯೇ ಹೊಸದಾಗಿ ಪ್ರಸವಿಸಲ್ಪಟ್ಟ ಶಿಶು ಶರೀರದೊಳಗೆ ಸೇರುತ್ತಿದ್ದಾನೆ. ಮರಣಿಸಿದ ಕೂಡಲೇ ಜನ್ಮ ಉಂಟಾಗುತ್ತಿದೆ. ಮನುಷ್ಯ ಹೊರಗಿನ ಶರೀರವನ್ನು ಬಿಟ್ಟು, ಹೊರಗೇ ಇರುವ ಶಿಶು ಶರೀರವನ್ನು ಸೇರುತ್ತಿದ್ದಾನೆ. ತಾಯಿಗರ್ಭದೊಳಗೆ ಹೋಗಿ ಸ್ವಲ್ಪಕಾಲ ಇರುತ್ತಾನೆನ್ನುವುದು ಪೂರ್ತಿ ಅಸತ್ಯ. ಆದ್ದರಿಂದ ಗರ್ಭೋಪನಿಷತ್ತಿನಲ್ಲಿ ಹೇಳಿದ ಮಾತುಗಳೆಲ್ಲ ಪೂರ್ತಿ ಅಸತ್ಯಗಳೆಂದು, ಆ ಉಪನಿಷತ್ತಿನಲ್ಲಿನ ಲೋಪಗಳೆಂದು ತಿಳಿಯಬೇಕು. ಗರ್ಭೋಪನಿಷತ್ತು ಒಟ್ಟಾರೆ ಕಲ್ಪನೆಯಿಂದ ಕೂಡಿಕೊಂಡಿದೆಯೆಂದು ತಿಳಿಯಬೇಕು.

# ನಾರಾಯಣೋಪನಿಷತ್ತು

**34) ಪ್ರಶ್ನೆ :– "ಓಂ ನಮೋ ನಾರಾಯಣಾಯ" ಎಂಬ ಮಂತ್ರ ಅಷ್ಟಾಕ್ಷರ ಮಂತ್ರವೆಂದು ನಾರಾಯಣೋಪನಿಷತ್ತಿನಲ್ಲಿ ಹೇಳಿದ್ದಾರೆ. ಈ ಮಾತು ವಾಸ್ತವವೆಂದು ನಂಬಿಸುವುದಕ್ಕೆ ಪ್ರಮಾಣವಾಗಿ ಕೆಳಗಿನ ಶ್ಲೋಕವನ್ನು ಹೇಳಿದ್ದಾರೆ. ಅಷ್ಟಾಕ್ಷರಿ ಮಂತ್ರ ಎನ್ನುವುದು ಅವರು ಹೇಳಿದ ನಾರಾಯಣ ಮಂತ್ರವೇನಾ ಎಂದು ಕೇಳುತ್ತಿದ್ದೇವೆ.**

ಶ್ಲೋ॥ ಓ ಮಿತ್ಯಗ್ರೇ ವ್ಯಾಹರೇತ್, ನಮ ಇತಿ ಪಶ್ಚಾತ್, ನಾರಾಯಣಾಯೇತ್ಯು ಪರಿಷ್ಟಾತ್ಃ ಓ ಮಿತ್ಯೇಕಾಕ್ಷರಂ ನಮ ಇತಿ ದ್ವೇ ಅಕ್ಷರೇ, ನಾರಾಯಣಾಯೇತಿ ಪಂಚಾಕ್ಷರಾಣಿ, ಎತದ್ವೈ ನಾರಾಯಣಾಸ್ಯಾಷ್ಟಾಕ್ಷರಂ ಪದಂ, ಯೊಹವೈ ನಾರಾಯಣ ಸ್ಯಾಷ್ಟಾಕ್ಷರಂ ಪದಮಧ್ಯೇತಿ. ಅನ ಪ್ರಬ್ರುವನ್ಸರ್ವ ಮಾಯುರೇತಿ. ವಿಂದತೇ ಪ್ರಾಜಾ ಪತ್ಯಗ್ಂ ರಾಯಸ್ಪೋಷಂ ಗೌಪತ್ಯಂ ತತೋಮೃತತ್ವ ಮಶ್ನುತೇ ತತೋಮೃತತ್ವ ಮಶ್ನುತ ಇತಿಯ ಏವಂ ವೇದ. (2)

ಭಾವಾರ್ಥ :– ಮೊದಲು "ಓಂ" ಎಂದು ಉಚ್ಛರಿಸಬೇಕು. ನಂತರ "ನಮೊ" ಎಂದು ಉಚ್ಛರಿಸಬೇಕು. ಆ ನಂತರ "ನಾರಾಯಣ" ಎಂದು ಉಚ್ಛರಿಸಬೇಕು. "ಓಂ" ಎನ್ನುವ ಅಕ್ಷರ ಒಂದು "ನಮೊ" ಎನ್ನುವ ಅಕ್ಷರಗಳು ಎರಡು "ನಾರಾಯ ಣಾಯ" ಎನ್ನುವ ಅಕ್ಷರಗಳು ಐದು ಎಲ್ಲವನ್ನು ಸೇರಿಸಿ ಇದೇ ಶ್ರೀ ನಾರಾಯಣ ಅಷ್ಟಾಕ್ಷರ ಮಂತ್ರ.. ಎಂಟು ಅಕ್ಷರಗಳಿರುವ ಈ ಮಂತ್ರವನ್ನು ಯಾರು ಭಕ್ತಿ ಶ್ರದ್ಧೆಗಳಿಂದ, ಪ್ರೀತಿಯಿಂದ, ವಿಶ್ವಾಸದಿಂದ ಸ್ಮರಣೆ ಮಾಡುತ್ತಾನೋ ಆತನು ದೀರ್ಘಾಯುಷ್ಷು ಇರುವವನಾಗುತ್ತಾನೆ. ಪ್ರಜಾ ಪತಿತ್ವವನ್ನು ಹೊಂದುತ್ತಾನೆ. ಸ್ವರ್ಗಾಧಿಪತ್ಯವನ್ನು ಬೀಳಿಸುತ್ತಾನೆ. ಧನ ದಾನ್ಯಾದಿ ಐಶ್ವರ್ಯಗಳು, ಸಂಪದವನ್ನು

**ಪಡೆಯುತ್ತಾನೆ. ಯಾರು ಇದನ್ನು ತಿಳಿಯುತ್ತಾರೊ ಆತನು ಅಮೃತತ್ವವನ್ನು (ಮೋಕ್ಷವನ್ನು) ಹೊಂದುತ್ತಿದ್ದಾನೆ.**

**ಉತ್ತರ :–** “ಓಂ ನಮೋ ನಾರಾಯಣಾಯ” ಎನ್ನುವ ಮಂತ್ರವನ್ನು ಅಷ್ಟಾಕ್ಷರಿ ಮಂತ್ರ ಎಂದು ಹೇಳುತ್ತಾ ಇದನ್ನು ಸ್ಮರಿಸುವುದರಿಂದ ಎಷ್ಟೋ ಲಾಭಗಳು ಉಂಟಾಗುತ್ತವೆಂದು, ಕೊನೆಗೆ ಮೋಕ್ಷ ಉಂಟಾಗುತ್ತದೆಂದು ನಾರಾಯಣೋಪ ನಿಷತ್ತಿನಲ್ಲಿ ಹೇಳುವುದು ಒಳ್ಳೆಯದೇ. ಆದರೇ ಈ ಮಾತಿಗೆ ವಿರುದ್ಧವಾಗಿ ಶೈವರು ನಮ್ಮ ಪಂಚಾಕ್ಷರಿ ಮಂತ್ರವನ್ನು ಜಪಿಸುವುದರಿಂದ ಪಾಪಗಳೆಲ್ಲವೂ ನಶಿಸಿಹೋಗಿ ಕೊನೆಗೆ ಮೋಕ್ಷ ಲಭಿಸುತ್ತದೆಂದು ಹೇಳಿದ್ದಾರೆ. ವೈಷ್ಣರು ನಾರಾಯಣ ಮಂತ್ರವಾದ ‘ಅಷ್ಟಾಕ್ಷರಿ’ ಶ್ರೇಷ್ಠವಾದುದೆಂದು ಹೇಳಿದಾಗ, ಹಾಗೇ ಶೈವರು ಶಿವನಿಗೆ ಸಂಬಂಧಿಸಿದ ‘ಪಂಚಾಕ್ಷರಿ’ ಶ್ರೇಷ್ಟವಾದುದು ಎನ್ನುತ್ತಿದ್ದಾರೆ. ಅವರವರ ನಂಬಿಕೆಯನ್ನನುಸರಿಸಿ ಅವರವರ ಮಂತ್ರ ಶ್ರೇಷ್ಠವಾದುದಾಗಬಹುದು. ಆದರೇ ನಾರಾಯಣೋಪನಿಷತ್ತಿನಲ್ಲಿ ಹೇಳಿದ ಮಂತ್ರವನ್ನು ಅಕ್ಷರಗಳು ಲೆಕ್ಕಿಸಿ ಅಷ್ಠಾಕ್ಷರಿ ಮಂತ್ರ ಎಂದು ಹೇಳಿದ್ದಾರೆ. ಅದೇ ವಿಧವಾಗಿ ಶೈವರು ಹೇಳುವ ಪಂಚಾಕ್ಷರಿ ಮಂತ್ರದಲ್ಲಿ ಅಕ್ಷರಗಳು ಲೆಕ್ಕಿಸಿದರೆ ಐದು ಅಕ್ಷರಗಳ ಮಂತ್ರ ಅಲ್ಲದೇ ಆರು ಅಕ್ಷರಗಳು ಕಾಣಿಸುತ್ತಿವೆ. ಅಷ್ಟ ಎಂದರೇ ಎಂಟು ಎನ್ನುವಂತೆ, ಪಂಚ ಎಂದರೇ ಐದು ಎಂದು ಅರ್ಥವಿದೆ. ಹಾಗಿರುವಾಗ “ಓಂ ನಮಃ ಶಿವಾಯ” ಎಂಬ ಮಂತ್ರದಲ್ಲಿ ಆರು ಅಕ್ಷರಗಳು ಇವೆ ಅಲ್ಲವೆ! ನಿಮ್ಮದು ಪಂಚಾಕ್ಷರಿ ಹೇಗೆ ಆಗುತ್ತದೆ? ಎಂದು ಶೈವರನ್ನು ಪ್ರಶ್ನಿಸಿದ್ದೇವೆ. ಅದಕ್ಕೆ ಅವರು ತಕ್ಕ ಉತ್ತರವನ್ನು ಹೇಳಿದ್ದಾರೆ.

ಶೈವರು ಹೇಳಿದ ಉತ್ತರದಲ್ಲಿ ವೈಷ್ಣವರು ಹೇಳುವ ನಾರಾಯಣ ಮಂತ್ರದಲ್ಲಿ ಎಂಟು ಅಕ್ಷರಗಳು ಇಲ್ಲ, ಅದು ಏಳು ಅಕ್ಷರಗಳ ಮಂತ್ರವೇಯೆಂದು ಹೇಳುತ್ತಿದ್ದಾರೆ. ಏಕೆಂದರೇ! ಅವರು ಹೇಳುವ ವಿಧಾನವನ್ನು ನೋಡಿದರೆ ಮೊದಲಿರುವ “ಓಂ” ಎಂಬ ಶಬ್ದ ದೇವರಿಗು, ದೈವಶಕ್ತಿಗು ಗುರುತಾಗಿ ಇದೆ. ಆದ್ದರಿಂದ ಎಲ್ಲಾದರಾಗಲಿ ‘ಓಂ’ ಎಂಬ ಶಬ್ದ ಪ್ರತಿ ಮಂತ್ರದ ಮೊದಲಿಗೇ

ಹೇಳಲ್ಪಡುವ ಪವಿತ್ರ ಶಬ್ದ. ಆದ್ದರಿಂದ ಅದನ್ನು ಪ್ರಣವ ಶಬ್ದ ಅಥವಾ ಪ್ರಣವ ಮಂತ್ರ ಎಂದು ಅನ್ನುತ್ತಿದ್ದಾರೆ. ಪ್ರತಿ ಮಂತ್ರಕ್ಕು ಮೊದಲಿಗೇ ಹೇಳುತ್ತಿರುವ 'ಓಂ'ನ್ನು ಒಂದು ಅಕ್ಷರವಾಗಿ ಲೆಕ್ಕಿಸಬಾರದೆಂದು, ಅದು ಎಲ್ಲದಕ್ಕು ಸಮಾನವಾದುದಾಗಿ ತಿಳಿದು ಅದರ ಪಕ್ಕದಲ್ಲಿರುವ ಮಂತ್ರದಲ್ಲಿನ ಅಕ್ಷರಗಳನ್ನು ಮಾತ್ರ ಲೆಕ್ಕಿಸಬೇಕೆಂದು ಶೈವರು ಹೇಳುತ್ತಿದ್ದಾರೆ. ಅವರ ಮಾತಿನ ಪ್ರಕಾರ "ಓಂ ನಮಃ ಶಿವಾಯ" ಎನ್ನುವ ಮಂತ್ರದಲ್ಲಿ ಮೊದಲಿರುವ ಓಂ ನ್ನು ಬಿಟ್ಟು "ನಮಃ" ಎನ್ನುವ ಎರಡು ಅಕ್ಷರಗಳನ್ನು, "ಶಿವಾಯ" ಎನ್ನುವ ಮೂರು ಅಕ್ಷರಗಳನ್ನು ಸೇರಿಸಿ ಐದು ಅಕ್ಷರಗಳ ಮಂತ್ರವೆಂದು ಕರೆಯುತ್ತಿದ್ದಾರೆ. ಅದನ್ನೇ ಪಂಚಾಕ್ಷರಿ ಮಂತ್ರವೆಂದು ಕೂಡಾ ಹೇಳುತ್ತಿದ್ದಾರೆ. ಇವರ ಮಾತಿನ ಪ್ರಕಾರವಾದರೆ "ನಮೊ ನಾರಾಯಣಾಯ" ಎನ್ನುವ ಅಕ್ಷರಗಳನ್ನು ಮಾತ್ರ ಲೆಕ್ಕಿಸಿ ನೋಡಿದರೆ ಏಳು ಅಕ್ಷರಗಳ ಮಂತ್ರವೇ ಆಗುತ್ತದೆ. ಹಾಗಿರುವಾಗ ನಾರಾಯಣೋಪನಿಷತ್ತಿನಲ್ಲಿ ಹೇಳಿರುವುದು ತಪ್ಪಾಗುತ್ತದಾ ಎಂದು ಅನುಮಾನ ಬರುತ್ತಿದೆ. ಪ್ರತಿ ಮಂತ್ರದ ಮೊದಲಿಗೇ ಹೇಳಲ್ಪಡುವ ಓಂ ನ್ನು ಬಿಟ್ಟುಹಾಕಬೇಕಾ ಅಥವಾ ಅದನ್ನು ಕೂಡಾ ಲೆಕ್ಕಿಸಬೇಕಾ? ಇದರಲ್ಲಿ ಪಂಚಾಕ್ಷರಿಯೆನ್ನುವ ಮಂತ್ರದಲ್ಲಿ ಹೇಳಿದಹಾಗೆ ನೋಡಿದರೆ ಅಷ್ಟಾಕ್ಷರಿ ಮಂತ್ರ ಇಲ್ಲ. ಹಾಗೇ ಅಷ್ಟಾಕ್ಷರಿಯಲ್ಲಿ ಹೇಳಿದ ಹಾಗೆ ನೋಡಿದರೆ ಪಂಚಾಕ್ಷರಿ ಮಂತ್ರ ಇಲ್ಲ. ಇದರಲ್ಲಿ ಯಾವುದು ಸರಿಯಾದುದೆಂದು ಅನುಮಾನ ಬರುತ್ತದೆ. ಅನುಮಾನವನ್ನು ಇಲ್ಲದಹಾಗೆ ಮಾಡುವುದಕ್ಕೆ, ಅಷ್ಟಾಕ್ಷರಿ ಎನ್ನುವುದು ತಪ್ಪೆಂದು ಹೇಳುವುದಕ್ಕೆ, ಅಕ್ಷರಗಳ ಸಂಖ್ಯೆಯನ್ನನುಸರಿಸಿ ಅಷ್ಟಾಕ್ಷರಿ ಎಂದು ಹೇಳುವುದು ತಪ್ಪೆಂದು ತಿಳಿಯುವುದಕ್ಕೆ ಸಾಕ್ಷಿಯಾಗಿರುವ ಒಂದು ಆಧಾರವನ್ನು ಈಗ ಗಮನಿಸೋಣ.

ಪ್ರಪಂಚದಲ್ಲಿ ಮೊಟ್ಟಮೊದಲು ತಯಾರಾದ ಭಾಷೆ ತೆಲುಗು ಭಾಷೆ. ಆದ್ದರಿಂದ ಎಲ್ಲದಕ್ಕಿಂತ ತೆಲುಗು ಲಿಪಿಯೇ ಮೊದಲು ತಯಾರು ಮಾಡಲ್ಪಟ್ಟಿದೆ. ತೆಲುಗು ಲಿಪಿ ಏರ್ಪಟ್ಟ ನಂತರವೇ ಅಲ್ಲವೆ! ನಾರಾಯಣೋಪನಿಷತ್ತಿನಲ್ಲಿ ಅಷ್ಟಾಕ್ಷರಿ ಮಂತ್ರವನ್ನು ಬರೆದಿರುವುದು. ತೆಲುಗು ಭಾಷೆ, ಲಿಪಿ ತಯಾರಾದ

ಸ್ವಲ್ಪ ಕಾಲಕ್ಕೆ ಅಷ್ಟಾಕ್ಷರಿ ಮಂತ್ರ ಹೇಳಲ್ಪಟ್ಟಿದೆ. ಭಾಷೆ ತಯಾರಾದಾಗಲೇ ಪಂಚಾಕ್ಷರಿ ಮಂತ್ರ ಹೇಳಲ್ಪಟ್ಟಿದೆ. ಅಷ್ಟಾಕ್ಷರಿ ಮಂತ್ರಕ್ಕಿಂತ ಪಂಚಾಕ್ಷರಿ ಮಂತ್ರ ಎಷ್ಟೋಕಾಲದ ಮೊದಲೇ ಹೇಳಲ್ಪಟ್ಟಿದೆ. ಅಷ್ಟೇಅಲ್ಲದೆ ಪಂಚಾಕ್ಷರಿ ಮಂತ್ರದ ಅಕ್ಷರಗಳ ಸಂಖ್ಯೆಯನ್ನು ಲೆಕ್ಕಿಸಿ ಹೇಳಲಿಲ್ಲ. ಅಕ್ಷರಗಳಲ್ಲಿನ ಅರ್ಥವನ್ನು ತಿಳಿಯುವಹಾಗೆ ಹೇಳಿದ್ದಾರೆ. "ಓಂ ನಮಃ ಶಿವಾಯ" ಎನ್ನುವ ಅಕ್ಷರಗಳ ಮೊತ್ತ ಆರು ಇವೆ. ಆದರೇ ಅಕ್ಷರಗಳನ್ನು ಲೆಕ್ಕಿಸಿ ಹೇಳಲಿಲ್ಲ. ಆದ್ದರಿಂದ ಅಕ್ಷರದ ಭಾವನೆಯನ್ನನುಸರಿಸಿ ಹೇಳುವುದು ಆದ್ದರಿಂದ ಅದನ್ನು ಪಂಚಾಕ್ಷರಿ ಮಂತ್ರವೆಂದೇ ಹೇಳಬಹುದು.

"ಓಂ ನಮಃ ಶಿವಾಯ" ಎನ್ನುವ ಆರು ಅಕ್ಷರಗಳಿಗೆ ಅರ್ಥ ಈ ವಿಧವಾಗಿ ಹೇಳಿದ್ದಾರೆ. ಈ ಪ್ರಪಂಚದಲ್ಲಿ ಕಾಣಿಸುವ ಪ್ರಕೃತಿ, ಕಾಣಿಸದ ದೇವರು (ಪರಮಾತ್ಮ) ಇಬ್ಬರೇ ಇದ್ದಾರೆ. ಕಾಣಿಸುವ ಪ್ರಕೃತಿ ಆಕಾಶ, ಗಾಳಿ, ಅಗ್ನಿ, ನೀರು, ಭೂಮಿ ಎನ್ನುವ ಐದು ಭಾಗಗಳಾಗಿ ಇದೆ. ಕಾಣಿಸದ ಪರಮಾತ್ಮ ಏಕ ಸ್ವರೂಪನಾಗಿ ಯಾರಿಗೂ ತಿಳಿಯದವನಾಗಿ ಇದ್ದಾನೆ. ಪ್ರಕೃತಿ ಒಂದರ ಐದು ಭಾಗಗಳಲ್ಲಿ ಯಾವವೊಂದು ಭಾಗದಿಂದಾಗಲಿ ಪರಮಾತ್ಮ ನಶಿಸುವವನಲ್ಲ. ಆದ್ದರಿಂದ ಆತನನ್ನು ಐದಕ್ಕೆ ನಾಶವಾಗದವನೆಂದು ಹೇಳುತ್ತಾ ಪಂಚ ಅಕ್ಷರಿ (ಪಂಚಾಕ್ಷರಿ) ಎಂದು ಹೇಳಿದ್ದಾರೆ. ಪಂಚಕ್ಕೆ ನಾಶವಾಗದವನೆಂದು ಅದರ ಅರ್ಥ.

ದೇವರು ಎಂದರೇ ಪರಮಾತ್ಮ ಪ್ರಕೃತಿಗೆ ನಾಶವಾಗದವನೆಂದು ಎಲ್ಲರಿಗೂ ತಿಳಿಯುವಹಾಗೆ ಪರಮಾತ್ಮನನ್ನು **"ಪಂಚಾಕ್ಷರಿ"** ಎಂದು ಕರೆದಿದ್ದಾರೆ. ಪಂಚಾಕ್ಷರಿಯಲ್ಲಿ ಆರು ಅಕ್ಷರಗಳಿದ್ದರೂ ಅದು ಅಕ್ಷರಗಳ ಲೆಕ್ಕ ಅಲ್ಲವೆಂದು **ಕ್ಷರ ಎಂದರೇ ನಾಶ ಎಂದು, ಅಕ್ಷರ ಎಂದರೇ ನಾಶ ಇಲ್ಲದಿರುವುದೆಂದು ತಿಳಿಸುವ** ಆಧ್ಯಾತ್ಮಿಕ ಅರ್ಥದ ಪ್ರಕಾರ **'ಪಂಚ ಅಕ್ಷರಿ'** ಎಂದು ಕರೆದಿದ್ದಾರೆ. ಪಂಚ ಭೂತಗಳಾಗಿ ಇರುವ ಪ್ರಕೃತಿಯನ್ನು ಒಂದೊಂದು ಭಾಗಕ್ಕು ಒಂದೊಂದು ಅಕ್ಷರವನ್ನು ಗುರುತಾಗಿ ತೋರಿಸಿದ್ದಾರೆ. ಪ್ರಕೃತಿಯಲ್ಲಿರುವ ಆಕಾಶಕ್ಕೆ ಗುರುತಾಗಿ

ಅಥವಾ ಬೀಜಾಕ್ಷರವಾಗಿ **"ನ"** ಎಂಬ ಕಾಣಿಸುವ ಭಾಷಾಲಿಪಿಯಲ್ಲಿರುವ ಅಕ್ಷರವನ್ನು ಇಟ್ಟಿದ್ದಾರೆ. ಹಾಗೇ ಗಾಳಿಗೆ ಗುರುತಾಗಿ ಅಥವಾ ಬೀಜಾಕ್ಷರವಾಗಿ **"ಮಃ"** ಎಂಬ ಅಕ್ಷರವನ್ನು ಇಟ್ಟಿದ್ದಾರೆ. ಹಾಗೇ ಅಗ್ನಿಗೆ ಗುರುತಾಗಿ ಅಥವಾ ಬೀಜಾಕ್ಷರವಾಗಿ **"ಶಿ"** ಎಂಬ ಅಕ್ಷರವನ್ನು ಇಟ್ಟಿದ್ದಾರೆ. ನಂತರ ಇರುವ ನೀರಿಗೆ ಗುರುತಾಗಿ ಅಥವಾ ಬೀಜಾಕ್ಷರವಾಗಿ **"ವಾ"** ಎಂಬ ಭಾಷಾ ಲಿಪಿಯನ್ನು ಇಟ್ಟಿದ್ದಾರೆ. ಕೊನೆಯದಾಗಿ ಪ್ರಕೃತಿಯಲ್ಲಿನ ಭಾಗವಾಗಿರುವ ಭೂಮಿಗೆ ಚಿಹ್ನೆಯಾಗಿ ಅಥವಾ ಬೀಜಾಕ್ಷರವಾಗಿ **"ಯ"** ಎಂಬ ಅಕ್ಷರವನ್ನು ಬರೆದಿದ್ದಾರೆ. ಈ ವಿಧವಾಗಿ ಪ್ರಕೃತಿಯಲ್ಲಿನ ಐದು ಭಾಗಗಳಿಗೆ ಐದು ಅಕ್ಷರಗಳನ್ನು **"ನಮಃ ಶಿವಾಯ"** ಎಂದು ಬರೆದಿದ್ದಾರೆ. ಈ ಐದು ಭಾಗಗಳ ಪ್ರಕೃತಿ, ಮೊದಲೇ ಇದ್ದ ಪರಮಾತ್ಮನಿಂದ ಸೃಷ್ಠಿಸಲ್ಪಟ್ಟಿದೆ ಆದ್ದರಿಂದ ಪರಮಾತ್ಮಗೆ ಗುರುತು ಅಥವಾ ಬೀಜಾಕ್ಷರವಾಗಿ **"ಓಂ"** ಎಂಬ ತೆಲುಗು ಭಾಷಾ ಅಕ್ಷರವನ್ನು ಬರೆಯುವುದೇ ಅಲ್ಲದೆ, ಪ್ರಕೃತಿಗಿಂತ ಮೊದಲೇ ಇದ್ದು ಪ್ರಕೃತಿಯನ್ನು ಸೃಷ್ಠಿಸಿದವನು ಪರಮಾತ್ಮ ಆಗಿರುವುದರಿಂದ ಪರಮಾತ್ಮ ಗುರುತು ಆದ **'ಓಂ'** ನ್ನು, **ನಮಃ ಶಿವಾಯ** ಎಂಬ ಪ್ರಕೃತಿ ಗುರುತುಗಳಿಗೆ ಮೊದಲೇ ಬರೆಯುವುದು ನಡೆದಿದೆ. ಆದ್ದರಿಂದ **"ಓಂ ನಮಃಶಿವಾಯ"** ಎಂಬ ಮಂತ್ರವನ್ನು ಹೇಳಿದ್ದಾರೆ.

ಓಂ ನಮಃ ಶಿವಾಯದಲ್ಲಿ ಪ್ರಕೃತಿ ಐದು ಅಕ್ಷರಗಳು, ಪರಮಾತ್ಮ ಒಂದು ಅಕ್ಷರವಾಗಿದೆ. ಪ್ರಕೃತಿಯಿಂದ ಸಮಸ್ತವೂ ನಶಿಸಿದರೂ ಪರಮಾತ್ಮ ನಾಶ ಹೊಂದುವವನಲ್ಲ. ಆದ್ದರಿಂದ ಐದಕ್ಕು ಅಂತ್ಯವಾಗದವನು ಪರಮಾತ್ಮ ಯೆಂದು ತಿಳಿಯುವಹಾಗೆ, **'ಓಂ'** ನ್ನು ಮೊದಲು ಇಟ್ಟು ಪ್ರಕೃತಿ ಭಾಗಗಳನ್ನು ಮುಂದಿಟ್ಟು **'ಪಂಚಾಕ್ಷರಿ'** ಎಂದು ಕರೆದಿದ್ದಾರೆ. ಪಂಚಾಕ್ಷರಿ ಅಂದರೇ 'ಐದಕ್ಕು ನಾಶವಾಗದವನು' ಎಂದು ಅರ್ಥ. ಭಾಷೆ ತಯಾರಾದ ಮೊದಲಿನಲ್ಲಿಯೇ ಪಂಚಾಕ್ಷರಿ ಎಂಬ ಮಂತ್ರ ತಯಾರಾಗಿದೆ. ತೆಲುಗು ಭಾಷೆಯನ್ನು ಕಲಿಯಬೇಕೆಂದುಕೊಂಡವರಿಗೆಲ್ಲಾ ಈ ವಿಷಯ ತಿಳಿಯುವಹಾಗೆ, ಭಾಷಾ ಅಕ್ಷರಾಭಾಸ್ಯದಲ್ಲಿಯೇ ಮೊದಲು ಪರಮಾತ್ಮ ಪ್ರಕೃತಿಗೆ ಸಂಬಂಧಿಸಿದ

ಬೀಜಾಕ್ಷರಗಳನ್ನು ಕಲಿಸಿ ನಂತರ ಭಾಷೆಯನ್ನು ಕಲಿಸುತ್ತಿದ್ದರು. ಆದ್ದರಿಂದ **ಅ ಆ** ಗಳನ್ನು ಕಲಿಸುವ ಮೊದಲು **"ಓಂ ನಮಃ ಶಿವಾಯ"** ಎಂದು ಪೂರ್ವದಲ್ಲಿ ಕಲಿಸುತ್ತಿದ್ದರು. ಈ ದಿನ ಆಧ್ಯಾತ್ಮಿಕ ವಿದ್ಯೆಯನ್ನು ಮರೆತ ಗುರುಗಳು ಪಂಚಾಕ್ಷರಿ ಯನ್ನು ಬಿಟ್ಟು ಹಾಕಿ ಸ್ವರಗಳಿಂದ ಪ್ರಾರಂಭಿಸಿ ಭಾಷೆಯನ್ನು ಕಲಿಸುತ್ತಿದ್ದಾರೆ. ಈ ವಿಧವಾಗಿ ನೋಡಿದರೆ **'ಪಂಚಾಕ್ಷರಿ'**, ಭಾಷೆ ಹುಟ್ಟಿದಾಗಲೇ ಹುಟ್ಟಿದೆಯೆಂದು, ಪಂಚಾಕ್ಷರಿ ನಂತರ ಎಷ್ಟೋಕಾಲಕ್ಕೆ ಅಂದರೇ ವಿಷ್ಣು ಭಕ್ತರು ಬಂದ ನಂತರ ಅಷ್ಟಾಕ್ಷರಿ ಮಂತ್ರ ಬಂದಿದೆಯೆಂದು ಹೇಳಬಹುದು. ಪಂಚಾಕ್ಷರಿ ಅರ್ಥಸಹಿತವಾಗಿ ದೇವರು ಪ್ರಕೃತಿಯೆಂದು, ಪ್ರಕೃತಿಗೆ ದೇವರು ನಶಿಸುವುದಿಲ್ಲ ಎಂದು ತಿಳಿಸುವ ಭಾವನೆಯನ್ನು ಜೊತೆಗೂಡಿಸಿ ಪಂಚಾಕ್ಷರಿ ಎಂದು ಭಾವಯುಕ್ತವಾಗಿ ಹೇಳಿದ್ದಾರೆ. ಹಾಗಲ್ಲದೆ ಭಾಷಾ ಅಕ್ಷರಗಳ ಕೂಡಿಕೆಯಿಂದ ಹೇಳುವ ಅಷ್ಟಾಕ್ಷರಿ ಮಂತ್ರ ಭಾವಯುಕ್ತ ಅಲ್ಲದಿರುವುದೆಂದು. ಅಂತಹ ಲೆಕ್ಕ ಹೇಳಿದ ನಾರಾಯಣೋಪ ನಿಷತ್ತಿನಲ್ಲಿ **'ಓಂ ನಮೋನಾರಾಯಣಾಯ'** ಎಂಬ ಮಂತ್ರ ಸಪ್ತ ಅಕ್ಷರಿ ಎನ್ನದಂತೆ ಅಷ್ಟಾಕ್ಷರಿಯೆಂದು ಹೇಳುವುದು ತಪ್ಪಾಗಿ ಕಾಣಿಸುತ್ತಿದೆ. ಅರ್ಥದ ಪ್ರಕಾರವಾದರೆ ಓಂ ಏಳು ಅಕ್ಷರಗಳ ಮೊದಲಿಗೇ ಇರುವುದರಿಂದ ಸಪ್ತಾಕ್ಷರಿ ಎನ್ನುವುದು ಸ್ವಲ್ಪಮಟ್ಟಿಗೆ ಒಳ್ಳೆಯದಾದರೂ ಏಳು ಅಕ್ಷರಗಳಿಗೆ ಅರ್ಥವಿಲ್ಲ. ಹಾಗೆ ಸಪ್ತಾಕ್ಷರಿ ಹೇಳಿದರೂ ಸ್ವಲ್ಪ ಲೋಪವಾಗಿಯೇ ಇರುತ್ತದೆ.

# ಮೈತ್ರಾಯಣ್ಯುಪನಿಷತ್ತು

**35) ಪ್ರಶ್ನೆ :- ಮನೋನಿಗ್ರಹ ಜ್ಞಾನದಿಂದಲೇ ಮೋಕ್ಷ ಲಭಿಸುತ್ತದೆಂದು ಹೇಳಿದ್ದಾರೆ. ಮನೋನಿಗ್ರಹಕ್ಕಿಂತ ಮೀರಿದ ಬೋಧನೆ ಇಲ್ಲವೆಂದು ಹೇಳಿದ್ದಾರೆ. ಈ ವಿಷಯ ಮೈತ್ರಾ**

**ಯಣ್ಯುಪನಿಷತ್ತಿನಲ್ಲಿ ಹೇಳಿದ್ದಾರೆ. ಅದಕ್ಕೆ ಸಂಬಂಧಿಸಿದ ಶ್ಲೋಕವನ್ನು, ಭಾವನೆಯನ್ನು ಕೆಳಗೆ ನೋಡಬಹುದು.**

**ಶ್ಲೋ॥ ತಾವದೇವ ನಿರೋದ್ಧವ್ಯಂ ಹೃದಿ ಯಾವತ್ ಕ್ಷಯಂ ಗತಮ್.**
**ಏತ ಜ್ಞಾನಂ ಚ ಮೋಕ್ಷಂ ಚ ಶೇಷಾಸ್ತು ಗ್ರಂಥ ವಿಸ್ತಾರಾಃ. (4–11)**

**ಭಾವಾರ್ಥ :– ಸಾಧಕನು ತನ್ನ ಹೃದಯದಲ್ಲಿನ ಸಂಕಲ್ಪಗಳು ನಿಶ್ಶೇಷವಾಗಿ ನಶಿಸಿ ಹೋಗುವವರೆಗು ಮನಸ್ಸನ್ನು ನಿಗ್ರಹಿಸಬೇಕು. ಸಂಪೂರ್ಣ ಮನೋನಿಗ್ರಹವೇ ಜ್ಞಾನ ಆದೇ ಮೋಕ್ಷ. ತಕ್ಕ ಬೋಧನೆಗಳೆಲ್ಲವೂ ಗ್ರಂಥವಿಸ್ತಾರಗಳೇ. ಇಲ್ಲಿ ಹೇಳಿದ ಭಾವನೆ ಪ್ರಕಾರ ಮನೋನಿಗ್ರಹಕ್ಕೆ ಸಮಾನವಾದುದು ಏನೂ ಇಲ್ಲವೆನ್ನುತ್ತೀರಾ? ಇದಕ್ಕೆ ನಿಮ್ಮ ಉತ್ತರವೇನು?**

**ಉತ್ತರ :–** ಮನೋನಿಗ್ರಹ ಎನ್ನುವುದನ್ನು ಬ್ರಹ್ಮವಿದ್ಯಾ ಶಾಸ್ತ್ರವಾದ ಭಗವದ್ಗೀತೆ ಯಲ್ಲಿ **'ಬ್ರಹ್ಮಯೋಗ'** ಎಂದು ಕರೆಯುತ್ತಾರೆ. ಮನುಷ್ಯ ದೇವರನ್ನು ಸೇರುವುದಕ್ಕೆ ಎರಡು ವಿಧಗಳ ಸಾಧನೆಗಳು ಇವೆ. ಅದರಲ್ಲಿ ಒಂದು ಬ್ರಹ್ಮಯೋಗ, ಎರಡು ಕರ್ಮಯೋಗ ಎಂದು ಹೇಳಬಹುದು. ಬ್ರಹ್ಮಯೋಗವಾಗಲಿ, ಕರ್ಮಯೋಗ ವಾಗಲಿ ಎರಡೂ ಧರ್ಮಯುಕ್ತವಾದ ಯೋಗಗಳೇ. ಧರ್ಮಗಳಿಗೆ ಸಂಬಂಧ ವಿಲ್ಲದ ಧರ್ಮಾತೀತವಾದ ಯೋಗ ಕೂಡಾ ಮತ್ತೊಂದು ಇದೆ. ಅದೇ ಭಕ್ತಿಯೋಗ. ಇದರಲ್ಲಿ ಬ್ರಹ್ಮಯೋಗದಲ್ಲಿ ಮನಸ್ಸನ್ನು ನಿಗ್ರಹಿಸುವುದೇ ಮುಖ್ಯವಾದ ಕೆಲಸವಾಗಿದೆ. ಕರ್ಮಯೋಗದಲ್ಲಿ ಅಹಮ್‌ನ್ನು ನಿಗ್ರಹಿಸುವುದೇ ಮುಖ್ಯವಾದ ಕೆಲಸವಾಗಿದೆ. ಧರ್ಮದಿಂದ ಕೂಡಿಕೊಂಡ ಮನೋನಿಗ್ರಹವನ್ನು ಬ್ರಹ್ಮಯೋಗ ವನ್ನು ಮತ್ತು ಅಹಮ್‌ನ್ನು ಅಡಗಿಸುವ ಕರ್ಮಯೋಗವನ್ನು ಮನುಷ್ಯರು ಆಚರಿಸುವುದಕ್ಕೆ ಯಾವುದು ಶ್ರೇಷ್ಠವಾದುದೆಂದು ಅರ್ಜುನನು ಭಗವಂತನನ್ನು ಕೇಳಿದಾಗ ಕರ್ಮಯೋಗ ಎಂಬ ಅಧ್ಯಾಯದಲ್ಲಿ ಮತ್ತು ಕರ್ಮಸನ್ಯಾಸ ಯೋಗ ಎಂಬ ಅಧ್ಯಾಯದಲ್ಲಿ ಮೊದಲಿನಲ್ಲಿಯೇ ಮನೋನಿಗ್ರಹ ಕ್ಕಿಂತ ಕರ್ಮಗಳು ಮಾಡುವ ಕರ್ಮಯೋಗವೇ ಶ್ರೇಷ್ಠ ಎಂದು ಹೇಳಿದ್ದಾರೆ.

ಮನೋನಿಗ್ರಹವನ್ನು ಕರ್ಮಸನ್ಯಾಸ ಎಂದೂ, ಅಹಮ್‌ನ್ನು ನಿಗ್ರಹಿಸುವುದು ಕರ್ಮಯೋಗ ಎಂದೂ ಭಗವದ್ಗೀತೆಯಲ್ಲಿ ಹೇಳಿದ್ದಾರೆ. ಈ ಎರಡು ಯೋಗಗಳಲ್ಲಿ ಯಾವ ಯೋಗ ದೊಡ್ಡದು ಎಂದು ಅರ್ಜುನನು ಭಗವಂತನಾದ ಕೃಷ್ಣನನ್ನು ಕೇಳಿದಾಗ, ಕೃಷ್ಣನು "ಮನೋನಿಗ್ರಹ ಎನ್ನುವ ಸನ್ಯಾಸಕ್ಕಿಂತ ಕರ್ಮಯೋಗ ಮಾಡುವುದೇ ದೊಡ್ಡದು" ಎಂದು ಹೇಳಿದ್ದಾನೆ. ಅರ್ಜುನನು ಕೇಳಿರುವುದು, ಕೃಷ್ಣನು ಹೇಳಿರುವುದು ಎರಡೂ ಕೆಳಗೆ ಕರ್ಮಸನ್ಯಾಸ ಯೋಗ ಶ್ಲೋಕಗಳಲ್ಲಿ ಗಮನಿಸೋಣ.

ಅರ್ಜುನನು ಹೀಗೆ ಹೇಳಿದ್ದಾನೆ :-

**ಶ್ಲೋ॥ 1. ಸನ್ಯಾಸಂ ಕರ್ಮಣಾಂ ಕೃಷ್ಣ! ಪುನರ್ಯೋಗಂ ಚ ಶಂಸಸಿ।**
**ಯ ಚ್ಛ್ರೇಯ ಏತಯೋ ರೇಕಂ ತನ್ಮೇ ಬ್ರೂಹಿ ಸುನಿಶ್ಚಿತಮ್ ।**

**ಭಾವಾರ್ಥ :-** ಕರ್ಮಸನ್ಯಾಸವನ್ನು, ಕರ್ಮಯೋಗವನ್ನು ಎರಡನ್ನು ತಿಳಿಸಿದ್ದೀಯಾ. ಈ ಎರಡರಲ್ಲಿ ನನಗೆ ಯಾವುದು ಶ್ರೇಷ್ಠವೊ ಅದನ್ನು ನಿಶ್ಚಯಿಸಿ ಹೇಳು.

**ಭಗವಂತನು ಹೀಗೆ ಹೇಳಿದ್ದಾನೆ :-**

**ಶ್ಲೋ॥ 2 ಸನ್ಯಾಸಂ ಕರ್ಮಯೋಗಶ್ಚ ನಿಶ್ರ್ತೇಯ ಸಕರಾವುಭೌ ।**
**ತಯೊಸ್ತು ಕರ್ಮಸನ್ಯಾಸಾ ಕರ್ಮಯೋಗೋ ವಿಶಿಷ್ಟತೇ ॥**

**ಭಾವಾರ್ಥ :-** ಕರ್ಮಯೋಗ ಮಾರ್ಗ, ಕರ್ಮಸನ್ಯಾಸವೆಂಬ ಬ್ರಹ್ಮಯೋಗ ಮಾರ್ಗ ಎರಡೂ ಒಳ್ಳೆಯದೇ ಮಾಡುತ್ತವೆ. ಆದರೇ ಎರಡರಲ್ಲಿ ಜ್ಞಾನಿಮಾಡುವ ಮನೋನಿಗ್ರಹ ಬ್ರಹ್ಮಯೋಗಕ್ಕಿಂತ ಕರ್ಮಯೋಗವೇ ಬಹಳ ದೊಡ್ಡದೆಂದು ಹೇಳಬಹುದು.

ಈ ವಿಧವಾಗಿ ಭಗವದ್ಗೀತೆಯಲ್ಲಿ ಭಗವಂತನು ಹೇಳಿರುವುದರಿಂದ, ಮನೋನಿಗ್ರಹಕ್ಕಿಂತ ಕರ್ಮಗಳನ್ನು ಆಚರಿಸುವ ಕರ್ಮಯೋಗವೇ ಶ್ರೇಷ್ಠವೆಂದು

ಹೇಳಿರುವುದರಿಂದ, ಮೈತ್ರಾಯಣ್ಯುಪನಿಷತ್ತಿನಲ್ಲಿ ಹೇಳಿದ ಮನೋನಿಗ್ರಹಕ್ಕಿಂತ ಸಮಾನವಾದುದು ಇಲ್ಲ ಎಂಬಮಾತು ಅಸತ್ಯವೆಂದು ತಿಳಿಯುತ್ತಿದೆ. ಮನೋನಿಗ್ರಹ ಎಂಬ ಬ್ರಹ್ಮಯೋಗಕ್ಕಿಂತ ಅಹಮ್‌ನ್ನು ನಿಗ್ರಹಿಸುವ ಕರ್ಮಯೋಗ ಹೆಚ್ಚು ಶ್ರೇಷ್ಠವಾದುದುಯೆಂದು ಹೇಳುವುದರಿಂದ, ಈ ಉಪನಿಷತ್ತಿನಲ್ಲಿ ಕೂಡಾ ಲೋಪ ಕಾಣಿಸುತ್ತಿದೆಯೆಂದು ಹೇಳಬಹುದು.

# ಮೈತ್ರೇಯೊಪನಿಷತ್ತು

**36) ಪ್ರಶ್ನೆ :– ಒಬ್ಬ ಮನುಷ್ಯ ನಾನೇ ದೇವರು ಅಂದು ಕೊಂಡಷ್ಟು ಮಾತ್ರಕ್ಕೆ ಆತನು ದೇವರು ಆಗುತ್ತಾನಾ? ಎಂದು ಪ್ರಶ್ನೆ ಬರಬಹುದು. ಈ ವಿಷಯವನ್ನು ಕೆಳಗೆ ಮೈತ್ರೇಯೊಪ ನಿಷತ್ತಿನಲ್ಲಿ ಹೇಳಿದ್ದಾರೆ ನೋಡಿರಿ.**

ಶ್ಲೋ॥ ಸರ್ವಪೂರ್ಣ ಸ್ವರೂಪೋ ಸ್ಮಿ ಸಚ್ಚಿದಾನಂದ ಲಕ್ಷಣಃ
ಸರ್ವ ತೀರ್ಥ ಸ್ವರೂಪೋಸ್ಮಿ ಪರಮಾತ್ಮಾ ಸ್ತ್ಯಹರಿ ಶಿವಃ (3–12)

ಭಾವಾರ್ಥ :– ನಾನು ಸರ್ವತ್ರ ಪರಿಪೂರ್ಣವಾದ ಸ್ವರೂಪ ಇರುವವನು. ಸಚ್ಚಿದಾನಂದ ಸ್ವರೂಪನು, ಸರ್ವತೀರ್ಥ ಸ್ವರೂಪನು ಪರಮಾತ್ಮನು ಶಿವ ಸ್ವರೂಪನು ಆಗಿದ್ದೇನೆ.

ಶ್ಲೋ॥ ಅಖಂಡಾಕಾಶರೂಪೋಸ್ಮಿ ಹ್ಯಖಂಡಾಕಾರ ಮಸ್ಮ್ಯಹಮ್.
ಪ್ರಪಂಚಮುಕ್ತ ಚಿತ್ತೊಸ್ಮಿ ಪ್ರಪಂಚರಹಿತೋ ಸ್ಮ್ಯಹಮ್. (3–20)

ಭಾವಾರ್ಥ :– ನಾನು ಅಖಂಡಾಕಾರ ಸ್ವರೂಪನು, ಅಖಂಡಾಕಾರ ರೂಪನು, ಪ್ರಪಂಚ ರಹಿತ ಚಿತ್ತನು, ಪ್ರಪಂಚ ರಹಿತನಾಗಿ ಇದ್ದೇನೆ.

**ಶ್ಲೋ॥ ಸರ್ವಪ್ರಕಾಶರೂಪೋಸ್ಮಿ ಚಿನ್ಮಾತ್ರ ಜ್ಯೋತಿ ರಸ್ಮ್ಯಹಮ್.**
**ಕಾಲತ್ರಯ ವಿಮುಕ್ತೋಸ್ಮಿ ಕಾಮಾದಿ ರಹಿತೋ ಸ್ಮ್ಯಹಮ್ (3–21)**

**ಭಾವಾರ್ಥ :– ನಾನು ಸರ್ವಪ್ರಕಾಶ ಸ್ವರೂಪನು, ಚಿನ್ಮಾತ್ರ ಜ್ಯೋತಿಸ್ವರೂಪನು. ಕಾಲತ್ರಯ ವರ್ಜಿತನು ಆಗಿದ್ದೇನೆ.**

**ಶ್ಲೋ॥ ಗನ್ತವ್ಯದೇಶಹೀನೊಸ್ಮಿ ಗಮನಾದಿ ವಿವರ್ಜಿತಃ,**
**ಸರ್ವದಾ ಸಮರೂಪೋಸ್ಮಿ ಶಾಂತೋಸ್ಮಿ ಪುರುಷೋತ್ತಮಃ (3–23)**

**ಭಾವಾರ್ಥ:– ನಾನು ಗನ್ತವ್ಯವಾಗುವ ಪ್ರದೇಶ ಇಲ್ಲದವನು, ಗಮನಾದಿ ರಹಿತನು ಸದಾ ಸಮರೂಪನು ಶಾಂತನು, ಪುರುಷೋತ್ತಮನು ಆಗಿದ್ದೇನೆ.**

**ಶ್ಲೋ॥ ಏವಂ ಸ್ವಾನುಭವೊ ಯಸ್ಯ ಸೊಹಮಸ್ಮಿ ನ ಸಂಶಯಃ, ಯಶ್ಶೃನೋತಿ ಸಕೃದ್ವಾಪಿ ಬ್ರಹ್ಮೈವ ಭವತಿ ಸ್ವಯಂ ಬ್ರಹ್ಮೈವ ಭವತಿ ಸ್ವಯಮಿತ್ಯುಪನಿಷತ್ (3–24)**

**ಭಾವಾರ್ಥ : ಈ ಪ್ರಕಾರವಾಗಿ ಸ್ವಾನುಭವ ಯಾರಿಗೆ ಉಂಟಾಗಿರುತ್ತದೊ ಆತನು ನಾನೇ ದೇವರಾಗಿ ಇದ್ದೇನೆ. ಇದರಲ್ಲಿ ಸಂಶಯವಿಲ್ಲ. ಯಾರು ಇದನ್ನು ಒಂದುಸಲವಾದರೂ ಕೇಳುತ್ತಾನೊ ಆತನು ಸ್ವತಃವಾಗಿ ಬ್ರಹ್ಮವೇ ಆಗುತ್ತಿದ್ದಾನೆ.**

**ಉತ್ತರ :–** ಈ ವಿಷಯವಿರುವ ಮೈತ್ರೇಯೊಪನಿಷತ್ತನ್ನು ಬರೆದ ದೊಡ್ಡವನು ಯಾರೋ ಏನೋ, ಆತನು ಬರೆದ ಬರಹವನ್ನನುಸರಿಸಿ ತನಗು ಕೂಡಾ ಅನುಭವ ಇಲ್ಲದ ವಿಷಯವನ್ನು ಹೇಳಿದ್ದಾನೆಂದು ತಿಳಿಯುತ್ತಿದೆ. ಇಷ್ಟು ಆಳವಾಗಿ ಬರೆದ ವ್ಯಕ್ತಿ ಮೊದಲು ತಾನು ಜೀವಿಯಿಂದ ದೇವರು ಆಗಿರಬೇಕು ಅಲ್ಲವೆ! ಇತರರು ಬ್ರಹ್ಮವಾಗಿ ಬದಲಾಗುತ್ತಾರೋ ಇಲ್ಲವೋ ಆದರೆ, ಮೊದಲು ತಾನು ಬದಲಾಗಿದ್ದರೆ ಇದು ಸತ್ಯವೆಂದು ಇತರರಿಗೆ ಹೇಳಬೇಕು. ಮೊಟ್ಟಮೊದಲು ಸೂರ್ಯನಿಂದ ಜ್ಞಾನವನ್ನು ಕೇಳಿದ ಮನುವು ಕೂಡಾ ಆ ಜನ್ಮದಲ್ಲಾಗಲಿ ನಂತರ ಜನ್ಮದಲ್ಲಾಗಲಿ ಮೋಕ್ಷವನ್ನು ಹೊಂದಲಾರದೆ ಹೋಗಿದ್ದಾನೆ.

ಕೃತಯುಗದಿಂದ ಸಾಯುತ್ತಾ ಹುಟ್ಟುತ್ತಾ ಬಂದು ಕೊನೆಗೆ ದ್ವಾಪರಯುಗದ ಕೊನೆಯಲ್ಲಿ ಭೀಷ್ಮನಾಗಿ ಹುಟ್ಟಿದ ನಂತರ ವೃದ್ಧಾಪ್ಯದಲ್ಲಿ ಮೋಕ್ಷವನ್ನು ಹೊಂದಿದ್ದಾನೆ. ಆ ದಿನ ಪ್ರಪಂಚಕ್ಕೇ ಜ್ಞಾನವನ್ನು ತಿಳಿಸಿದ ಮನುವು ಸಾಯುತ್ತಾ ಹುಟ್ಟುತ್ತಾ ಕೊನೆಗೆ ಭೀಷ್ಮನವರೆಗು ಬಂದಿದ್ದಾನೆಂದರೇ ಮೋಕ್ಷ ಎಂದರೇ ಎಷ್ಟು ಕಷ್ಟವಾದುದೋ ಅರ್ಥವಾಗಬಲ್ಲದು.

ಮೇಲಿನ ಶ್ಲೋಕಗಳಲ್ಲಿ ಹೇಳಿದ ಪ್ರಕಾರ ನಾನು ದೇವರು ಎಂದು ಅಂದುಕೊಂಡಷ್ಟು ಮಾತ್ರಕ್ಕೆ ಯಾರೂ ದೇವರು ಆಗಲಾರರು. ಏನು ತಿಳಿಯದವರಿಗೆ ಏನು ಹೇಳಿದರೂ ನಿಜವೇನೊ ಎಂದು ನಂಬುತ್ತಾರೆ. ಹಾಗೇ ನಂಬಿಸುವುದಕ್ಕೆ ಈ ಉಪನಿಷತ್ತಿನಲ್ಲಿ ಹೇಳಿದ್ದಾರೆ ಹೊರತು, ಮನುಷ್ಯ ತಾನು ಬ್ರಹ್ಮವು ಆಗಿದ್ದೇನೆ ಅಂದುಕೊಂಡಷ್ಟು ಮಾತ್ರಕ್ಕೆ ಯಾರೂ ಬ್ರಹ್ಮ ಆಗಲಾರನು. ಬಹಳಜನ ಅದ್ವೈತರು ಈ ವಿಧವಾಗಿಯೇ ಹೇಳುತ್ತಿರುತ್ತಾರೆ. ಜೀವಿಯು ಕರ್ಮಗಳೆಲ್ಲ ಮುಗಿದುಹೋದ ನಂತರ ದೇವರಾಗಿ ಬದಲಾಗುವುದು ವಾಸ್ತವವೇ ಆದರೆ, ಅದು ಪೂರ್ತಿ ಮನುಷ್ಯ ಯೋಗಿಯಾಗಿ ಬದಲಾಗಿ ತನ್ನ ಕರ್ಮಗಳನ್ನು ಯೋಗಾಗ್ನಿಯಲ್ಲಿ ಸುಟ್ಟುಕೊಂಡಾಗ ಮೋಕ್ಷ ಹೊಂದಿ ದೇವರಾಗಿ ಬದಲಾಗ ಬಹುದು. ಹಾಗೆ ಅದ್ವೈತ ಸಿದ್ಧಾಂತ ಕೊನೆಯಲ್ಲಿ ನೆರವೇರಬಲ್ಲದು. ಪ್ರಸ್ತುತ ಮನುಷ್ಯ ಮೊದಲು ಯೋಗಿಯಾಗಿ ಬದಲಾಗಬೇಕಾಗಿದೆ. ಅದಕ್ಕೆ ಮನುಷ್ಯ ಮೊದಲು ಜ್ಞಾನಿ ಆಗಬೇಕು. ಸಂಪೂರ್ಣ ಜ್ಞಾನಿಯಾದ ನಂತರ ಯೋಗಿಯಾಗಿ ಬದಲಾದರೆ ನಂತರ ಕರ್ಮಗಳು ಸುಡುವವರೆಗು ಸ್ವಲ್ಪಕಾಲವಿದ್ದು ಎಷ್ಟೋ ಜನ್ಮಗಳು ಯೋಗಿಯಾಗಿ ಬದುಕಿದ ನಂತರ ಅದ್ವೈತ ಸಿದ್ಧಾಂತದ ಪ್ರಕಾರ ಜೀವಿಯೇ ದೇವರಾಗುತ್ತಾನೆ.

ಮನುಷ್ಯ ಎಂದರೇ ಜೀವಿಯಾಗಿ ಇರುವವನು ಒಂದು ಶರೀರದಲ್ಲಿ ನಿವಾಸಿಸುತ್ತಿರುತ್ತಾನೆ. ಶರೀರ ಪ್ರಕೃತಿ ಸಂಬಂಧವಾಗಿದ್ದು, ಜೀವಿಯು ಆತ್ಮ ಸಂಬಂಧವಾಗಿದ್ದಾನೆ. ಸ್ವಲ್ಪ ವಿವರವಾಗಿ ಹೇಳಿಕೊಂಡರೆ ಪ್ರಕೃತಿ ಅಂದರೇ ಸ್ತ್ರೀ ತತ್ತ್ವ (ಸ್ತ್ರೀ ಲಿಂಗ) ಎಂದು, ಹಾಗೆ ಆತ್ಮ ಎಂದರೇ ಪುರುಷತತ್ತ್ವ

(ಪುರುಷ ಲಿಂಗ) ಎಂದು ಹೇಳಬಹುದು. ಜೀವಿಯು ಕೂಡಾ ಜೀವಾತ್ಮಯೆಂದು ಒಂದು ಆತ್ಮವಾಗಿ ಹೇಳಲ್ಪಡುತ್ತಿದ್ದಾನೆ. ಆದ್ದರಿಂದ ಜೀವಾತ್ಮವನ್ನು ಪುರುಷನಾಗಿ, ಜೀವಾತ್ಮ ನಿವಾಸಿಸುವ ಶರೀರವನ್ನು ಸ್ತ್ರೀಯಾಗಿ ಹೇಳುತ್ತಿದ್ದೇವೆ. ಸ್ತ್ರೀ ತತ್ತ್ವವಾದ ಶರೀರದಲ್ಲಿ ಪುರುಷ ತತ್ತ್ವವಾದ ಮೂರು ಆತ್ಮಗಳು ಇವೆ. ಅವುಗಳನ್ನು ವರಸೆಯಾಗಿ **ಜೀವಾತ್ಮ, ಆತ್ಮ, ಪರಮಾತ್ಮಯೆಂದು** ಹೇಳುತ್ತಿದ್ದೇವೆ. ಪ್ರಕೃತಿ ಶರೀರದಲ್ಲಿ ಕರ್ಮಗಳು ಎಂಬ ಹಗ್ಗಗಳಿಂದ ಕಟ್ಟಲ್ಪಟ್ಟಿರುವ ಜೀವಾತ್ಮ ತನ್ನ ಕರ್ಮ ಬಂಧನಗಳೆಲ್ಲ ತ್ಯಜಿಸಿಕೊಂಡ ನಂತರ ಕರ್ಮ ಬಂಧಗಳು ಇಲ್ಲದವನಾಗಿ ಕೊನೆಗೆ ಪರಮಾತ್ಮದೊಂದಿಗೆ ಬೆರೆತುಹೋಗುವುದನ್ನು ಮೋಕ್ಷ ಎಂದು ಹೇಳುತ್ತೇವೆ.

ಸಜೀವವಾಗಿರುವ ಮನುಷ್ಯ ನಿರ್ಜೀವವಾಗಿ ದೇವರಲ್ಲಿ ಸೇರುವುದಕ್ಕೆ ಮೊದಲು ಜೀವಾತ್ಮಗು ಪರಮಾತ್ಮಗು ಮಧ್ಯದಲ್ಲಿರುವ ಆತ್ಮವನ್ನು ತಿಳಿಯಬೇಕಾಗಿರುತ್ತದೆ. ಜೀವಿಗು ದೇವರಿಗು ಆತ್ಮ ಮಧ್ಯವರ್ತಿಯಂಥಾದ್ದು. ಆತ್ಮ ಮೂಲಕವೇ ಯಾರಾದರೂ ದೇವರಾದ ಪರಮಾತ್ಮನನ್ನು ಸೇರಬೇಕಾಗಲಿ ಆತ್ಮನನ್ನು ತಿಳಿಯದೆ ಯಾವ ಜೀವಾತ್ಮ ಪರಮಾತ್ಮನನ್ನು ಸೇರಲಾರನು, ಮೋಕ್ಷವನ್ನು ಹೊಂದಲಾರನು. ಮೊದಲು ಮೂರು ಆತ್ಮಗಳಾಗಿರುವ ಜೀವಿಯು ಜೀವಾತ್ಮ, ಆತ್ಮ, ಪರಮಾತ್ಮ ಎನ್ನುವ ವರಸೆಯಲ್ಲಿ ಇದ್ದಾನೆಂದು ಹೇಳಬಹುದು. ತ್ರೈತವಾಗಿರುವ ಜೀವಿಯು ಮೊದಲು ಆತ್ಮನಲ್ಲಿ ಸೇರಿಹೋದಾಗ ಯೋಗಿ ಎಂದು ಅನಿಸಿಕೊಳ್ಳುತ್ತಾನೆ. ಯೋಗ ಎಂದರೇ ಬೆರೆಯುವಿಕೆ. ಜೀವಾತ್ಮ ಆತ್ಮದೊಂದಿಗೆ ಬೆರೆಯುವುದನ್ನು ಯೋಗ ಎನ್ನಬಹುದು. ಹೀಗೆ ತ್ರೈತವಾಗಿರುವ ವನು ಎಂದರೇ ಮೂರನೆಯವನಾಗಿರುವ ಜೀವಿಯು ಆತ್ಮ ಸಂಬಂಧವಾಗಿ, ಆತ್ಮನಾಗಿ ಬದಲಾಗಿಹೋಗುವುದರಿಂದ ದ್ವೈತವಾಗಿ (ಎರಡಾಗಿ) ಬದಲಾಗಿಹೋ ಗುತ್ತಿದ್ದಾನೆ. ಜೀವಾತ್ಮ ಆತ್ಮನಾಗಿ ಬದಲಾದ ನಂತರ, ಆತ್ಮ ಪರಮಾತ್ಮವಾಗಿ ಬದಲಾಗಿಹೋಗಬಲ್ಲದು. ಆಗ ಆತ್ಮನಲ್ಲಿರುವ ಜೀವಾತ್ಮ ಪರಮಾತ್ಮನೊಳಗೆ ಹೋಗುತ್ತಿದ್ದಾನೆ. ಜೀವಾತ್ಮ, ಆತ್ಮ ಮೂಲಕ ಪರಮಾತ್ಮನಲ್ಲಿ ಬೆರೆತುಹೋ

ಗುವುದನ್ನು ಮೋಕ್ಷ ಎಂದು ಕರೆಯುತ್ತಿದ್ದೇವೆ. ಆಗ ಜೀವಾತ್ಮ, ಆತ್ಮ ಎರಡು ಇಲ್ಲದೆ ಹೋಗಿ ಪರಮಾತ್ಮ ಒಬ್ಬನೇ ಇರುತ್ತಿದ್ದಾನೆ. ಆಗ ಮನುಷ್ಯ ಅದ್ವೈತವನ್ನು ಹೊಂದುತ್ತಿದ್ದಾನೆ. **ಅದ್ವೈತ** ಎಂದರೇ ಪರಮಾತ್ಮ ಒಬ್ಬನೇಯೆಂದು, **ದ್ವೈತ** ಎಂದರೇ ಆತ್ಮ, ಪರಮಾತ್ಮ ಎರಡುಯೆಂದು, ತ್ರೈತ ಎಂದರೇ ಜೀವಾತ್ಮ, ಆತ್ಮ, ಪರಮಾತ್ಮ ಮೂರುಯೆಂದು ಹೇಳಬಹುದು. ಮೊದಲು ತ್ರೈತದಲ್ಲಿರುವ ಸಾಧಾರಣ ಮನುಷ್ಯ ಜ್ಞಾನಿಯಾಗಿ ಬದಲಾಗಿ ಯೋಗಿಯಾದರೆ ಆಗ **ದ್ವೈತಿ**ಯಾಗಿ ಬದಲಾಗಿಹೋಗಿದ್ದಾನೆಂದು ಹೇಳಬಹುದು. ನಂತರ ಆತ್ಮ ಕೂಡಾ ಇಲ್ಲದಹಾಗೆ ಹೋಗಿ ಪರಮಾತ್ಮನಲ್ಲಿ ಬೆರೆತುಹೋದರೆ ಆಗ **ಅದ್ವೈತಿಯಾಗಿ** ಬದಲಾಗಿ ಹೋಗಿದ್ದಾನೆಂದು ಹೇಳಬಹುದು. ಅದನ್ನನುಸರಿಸಿ ಸಾಧಾರಣ ಮನುಷ್ಯ ಯಾವಾಗಲೂ ತ್ರೈತದಲ್ಲಿ **ತ್ರೈತಿಯಾಗಿ** ಇದ್ದಾನೆಂದು ಹೇಳಬಹುದು. ಅಂತಹ ಮನುಷ್ಯ ಯೋಗವನ್ನು ಹೊಂದಿ ಯೋಗಿಯಾಗಿ ಬದಲಾದರೆ ಆಗ ದ್ವೈತದಲ್ಲಿ ದ್ವೈತಿಯಾಗಿ ಇದ್ದಾನೆಂದು ಹೇಳಬಹುದು. ಕೊನೆಗೆ ಮನುಷ್ಯ ಮೋಕ್ಷವನ್ನು ಹೊಂದಿದರೆ ಆಗ ಅದ್ವೈತದಲ್ಲಿ ಅದ್ವೈತಿಯಾಗಿ ಬದಲಾಗಿ ಹೋಗಿದ್ದಾನೆಂದು ಹೇಳಬಹುದು. ಹೀಗೆ ಮನುಷ್ಯ ಮೂರನೆ ದಶೆ(ಹಂತ) ಹೊಂದಿದಾಗ ಮೋಕ್ಷದಲ್ಲಿ ಪರಮಾತ್ಮನಾಗಿ ಬದಲಾಗಿಹೋಗಬಲ್ಲನು. ಹೀಗೆ ಇಷ್ಟು ತತಂಗ ನಡೆಯಬೇಕಾಗಿರುವಾಗ, 'ನಾನು ದೇವರು' ಎಂದು ಅಂದುಕೊಂಡಷ್ಟು ಮಾತ್ರಕ್ಕೆ ದೇವರು ಆಗುತ್ತಾನೆಂದು ಹೇಳುವುದು ಈ ಉಪನಿಷತ್ತಿನಲ್ಲಿ ಲೋಪವೇಯೆಂದು ಹೇಳಬಹುದು.

## ಶುಕ ರಹಸ್ಯೋಪನಿಷತ್ತು

**37) ಪ್ರಶ್ನೆ :– ಕೆಳಗೆ ಹೇಳಿದ ಶ್ಲೋಕದಲ್ಲಿ ಪ್ರಜ್ಞಾನವನ್ನು ಕುರಿತು ಹೇಳಿದ್ದಾರೆ. ಪ್ರಜ್ಞಾನಂ ಬ್ರಹ್ಮ ಎಂದು ವೇದ ಸಾರಾಂಶವಾಗಿ ಮತ್ತೊಂದುಕಡೆ ಇದೆ. ಈ ಶುಕ ರಹಸ್ಯ ಉಪನಿಷತ್ತಿನಲ್ಲಿ**

**ಹೇಳಿದ ಪ್ರಜ್ಞಾನಕ್ಕು ವೇದಗಳ ಸಾರವಾದ ಪ್ರಜ್ಞಾನಕ್ಕು ಏನಾದರೂ ವ್ಯತ್ಯಾಸ ಇದೆಯಾ! ಎಂದು ಕೇಳುತ್ತಿದ್ದೇವೆ?**

**ಶ್ಲೋ॥ ಯೇನೇಕ್ಷತೇ ಶೃಣೇತಿದಂ ಜಿಘ್ರುತಿ ವ್ಯಾಕರೋತಿಚ,**

**ಸ್ವಾದ್ವ ಸ್ವಾದು ವಿಜಾನಾತಿ ತತ್ಪ್ರಜ್ಞಾನ ಮುದೀರಿತಮ್. (3–1)**

**ಭಾವಾರ್ಥ :– ಜೀವಿಯು ಏನನ್ನು ನೋಡುತ್ತಿದ್ದಾನೊ, ಕೇಳುತ್ತಿದ್ದಾನೊ, ವಾಸನೆ ನೋಡುತ್ತಿದ್ದಾನೊ, ಮಾತನಾಡುತ್ತಿದ್ದಾನೊ, ರುಚಿ ನೋಡುತ್ತಿದ್ದಾನೊ, ಅದೇ ಪ್ರಜ್ಞಾನವೆಂದು ಹೇಳಲ್ಪಟ್ಟಿದೆ.**

**ಉತ್ತರ :–** 'ಪ್ರಜ್ಞಾನಂ ಬ್ರಹ್ಮ' ಯೆಂದು ವೇದಸಾರಾಂಶ ಎಂದು ಕೆಲವರು ವೇದವಾದಿಗಳು ಹೇಳಿದಾಗ ಕೇಳಿದ್ದೇವೆ. ಪ್ರಜ್ಞಾನವೇ ದೇವರು ಎಂದಾಗಲಿ, ಪ್ರಜ್ಞಾನವೇ ಆತ್ಮಯೆಂದಾಗಲಿ ಅದರ ಅರ್ಥ. ಆತ್ಮವನ್ನು ಬ್ರಹ್ಮಯೆನ್ನುವುದು ನಡೆಯುತ್ತಿದೆ. ಬ್ರಹ್ಮ ಎಂದರೇ ದೇವರು ಎಂದು ಕೂಡಾ ಅರ್ಥವಿದೆ. ಇಲ್ಲಿ ಈ ಉಪನಿಷತ್ತಿನಲ್ಲಿ ನಾಲ್ಕು ಜ್ಞಾನೇಂದ್ರಿಯ ಜ್ಞಾನಗಳನ್ನು ಪ್ರಜ್ಞಾನವೆಂದು ಹೇಳಿದ್ದಾರೆ. ನಂತರ ಇನ್ನು ಕರ್ಮೇಂದ್ರಿಯ ಕಾರ್ಯವನ್ನು ಅಂದರೇ ಬಾಯಿ ಮಾತನಾಡುವುದನ್ನು ಕೂಡಾ ಪ್ರಜ್ಞಾನದೊಳಗೆ ಬೆರೆಸಿ ಹಾಕಿದ್ದಾರೆ. ಶರೀರದಲ್ಲಿನ ಐದು ಜ್ಞಾನೇಂದ್ರಿಯಗಳಾದ ಕಣ್ಣು, ಕಿವಿ, ಮೂಗು, ಚರ್ಮ, ನಾಲಿಗೆ ಎನ್ನುವವುಗಳಿಗೆ ಮಾತ್ರವೇ ಹೊರಗಿನ ಪ್ರಪಂಚದಲ್ಲಿನ ವಿಷಯಗಳನ್ನು ಗ್ರಹಿಸಿಕೊಳ್ಳುವ ಜ್ಞಾನವಿರುತ್ತದೆ. ಆದ್ದರಿಂದ ಈ ಐದನ್ನು ಮಾತ್ರವೇ ಜ್ಞಾನೇಂದ್ರಿಯ ಗಳೆಂದು ಹೇಳಿದ್ದೇವೆ. ಹಾಗೇ ಸ್ಥೂಲ ಶರೀರಕ್ಕಿರುವ ಹತ್ತು ಇಂದ್ರಿಯ ಭಾಗಗಳಲ್ಲಿ ಐದು ಜ್ಞಾನೇಂದ್ರಿಯಗಳು ಆಗಿದ್ದು, ಉಳಿದ ಐದು ಕರ್ಮೇಂದ್ರಿಯಗಳಾಗಿ ಇವೆ. ಕರ್ಮೇಂದ್ರಿಯಗಳು ಐದು ವರಸೆಕ್ರಮದಲ್ಲಿ ಕಾಲು, ಕೈಗಳು, ಬಾಯಿ, ಗುದ, ಲಿಂಗ ಎಂದು ಹೇಳಬಹುದು. ಕರ್ಮೇಂದ್ರಿಯಗಳು ಶರೀರದಲ್ಲಿನ ಕರ್ಮವನ್ನನುಸರಿಸಿ ಬುದ್ಧಿಯಿಂದ ಬಂದಿರುವ ಆಜ್ಞೆ ಪ್ರಕಾರ ಕೆಲಸ ಮಾಡುತ್ತಿರುತ್ತವೆ. ಕೇವಲ ಕೆಲಸವನ್ನು ಮಾಡುವ ಭಾಗಗಳು ಆಗಿರುವುದರಿಂದ

ಇವುಗಳನ್ನು ಕರ್ಮೇಂದ್ರಿಯಗಳೆಂದು ಹೇಳಿದ್ದಾರೆ. ಕರ್ಮೇಂದ್ರಿಯಗಳಿಗೆ ಪ್ರಪಂಚ ಜ್ಞಾನವನ್ನು ಗ್ರಹಿಸಿಕೊಳ್ಳುವ ಶಕ್ತಿ ಇರುವುದಿಲ್ಲ. ಆದರೇ ಈ ಉಪನಿಷತ್ತಿನಲ್ಲಿ ಜ್ಞಾನೇಂದ್ರಿಯಗಳೊಳಗೆ ಕರ್ಮೇಂದ್ರಿಯವಾದ ಬಾಯಿ ಮಾತನಾಡುವ ಕೆಲಸವನ್ನು ಸೇರಿಸಿ ಹೇಳುವುದು ದೊಡ್ಡ ತಪ್ಪು. ಉಪನಿಷತ್ತುಗಳು ಎಂದು ದೊಡ್ಡ ಹೆಸರಿಟ್ಟು ಬರೆದವರಿಗೆ ಶರೀರದಲ್ಲಿನ ಜ್ಞಾನೇಂದ್ರಿಯಗಳ್ಯಾವೊ, ಕರ್ಮೇಂದ್ರಿಯ ಗಳ್ಯಾವೊ ತಿಳಿಯದಿರುವುದು ಅಜ್ಞಾನ ಅಲ್ಲವಾ! ಕರ್ಮೇಂದ್ರಿಯಕ್ಕೆ ಜ್ಞಾನವಿದೆಯೆಂದು ಜ್ಞಾನೇಂದ್ರಿಯಗಳಲ್ಲಿ ಬೆರೆಸುವುದು ಇಲ್ಲಿ ದೊಡ್ಡ ಲೋಪವಾಗಿದೆ.

ಶರೀರಕ್ಕೆ ಐದು ಜ್ಞಾನೇಂದ್ರಿಗಳು ಇವೆ. ಈ ಐದು ಪ್ರಪಂಚ ಜ್ಞಾನವನ್ನು ತಿಳಿಸುತ್ತಿವೆ. ಅಷ್ಟೇಯಾಗಲಿ ದೇವರ ಜ್ಞಾನವನ್ನಾಗಲಿ, ಆತ್ಮಜ್ಞಾನವನ್ನಾಗಲಿ ತಿಳಿಸುತ್ತಿಲ್ಲ ಅಲ್ಲವೇ! ಆತ್ಮಜ್ಞಾನವನ್ನು ಪ್ರಜ್ಞಾನ ಎಂದು ಹೇಳಿದರೂ ಸರಿಹೋಗುತ್ತದೆ ಆದರೆ, ಪ್ರಪಂಚ ಜ್ಞಾನವನ್ನು ಪ್ರಜ್ಞಾನವೆಂದು ಹೇಳುವುದೇನೆಂದು ನಾವು ಪ್ರಶ್ನಿಸುತ್ತಿದ್ದೇವೆ. ಪ್ರಜ್ಞಾನವೇ ಬ್ರಹ್ಮಯೆಂದು ಕೆಲವರು ವೇದಗಳನ್ನು ತಿಳಿದವರು ಹೇಳುತ್ತಿದ್ದಾರೆ ಅಲ್ಲವೆ! ಆ ಮಾತಿನ ಪ್ರಕಾರ ಪ್ರಜ್ಞಾನ ದೇವರಿಗೆ ಸಂಬಂಧಿಸಿರುವುದಾಗಿರಬೇಕು. ಆದರೇ ಇಲ್ಲಿ ಶುಕರಹಸ್ಯೋಪನಿಷತ್ತುನಲ್ಲಿ ಶರೀರ ಜ್ಞಾನೇಂದ್ರಿಯಗಳು ಜ್ಞಾನವಾದ ನೋಡುವುದು, ಕೇಳುವುದು, ರುಚಿ ನೋಡುವುದು, ವಾಸನೆ ನೋಡುವುದು, ಸ್ಪರ್ಶ ಮುಂತಾದ ಶರೀರ ಇಂದ್ರಿಯ ಜ್ಞಾನಗಳನ್ನು ಪ್ರಜ್ಞಾನವೆಂದು ಹೇಳುವುದು ವಿಚಿತ್ರವಾಗಿದೆ. ಪ್ರಪಂಚ ಜ್ಞಾನವನ್ನು ಪ್ರಜ್ಞಾನವೆಂದು ಅಥವಾ ದೈವಜ್ಞಾನವೆಂದು ಹೇಳುವುದು ಹುಣಿಸೆಕಾಯನ್ನು ನಿಂಬೆಹಣ್ಣೆಂದು ಹೇಳಿದಂತಿದೆ. ದೈವಜ್ಞಾನ, ಪ್ರಪಂಚ ಜ್ಞಾನ ಎರಡು ಜ್ಞಾನಗಳಾದರೆ ಯಾವ ಜ್ಞಾನ ಯಾವಕಡೆ ಹೋಗುತ್ತದೆಂದು ತಿಳಿಯದೆ ಎರಡನ್ನು ಸೇರಿಸಿ ಹೇಳುವುದು ದೊಡ್ಡ ಲೋಪ. ನಿಂಬೆಹಣ್ಣಿನಲ್ಲಿ ಹುಳಿಯೇ ಇರುತ್ತದೆ. ಹಾಗೇ ಹುಣಿಸೆಕಾಯಲ್ಲಿ ಹುಳಿಯೇ ಇರುತ್ತದೆ. ಆದರೇ ಯಾವ ಹುಳಿಯನ್ನು ಎಲ್ಲಿ ಬಳಸುತ್ತೇವೆಂದು ತಿಳಿಯದೆಹೋದರೆ ಅವನಿಗೆ ಪ್ರಪಂಚ ಜ್ಞಾನವೇ

ತಿಳಿಯದು ಎನ್ನುವಂತೆ ದೈವಜ್ಞಾನ ಪ್ರಪಂಚ ಜ್ಞಾನ ಎರಡೂ ಜ್ಞಾನಗಳೇ ಆದರೂ ಯಾವುದು ಮೋಕ್ಷಕ್ಕೆ ಕೆಲಸಕ್ಕೆ ಬರುತ್ತದೊ ತಿಳಿಯದೆಹೋದರೆ, ಅವನಿಗೆ ಪೂರ್ತಿ ದೈವಜ್ಞಾನ ತಿಳಿಯದೆಂದು ಹೇಳಬಹುದು.

ಪ್ರಜ್ಞಾನ ಎಂದರೇ ದೈವಜ್ಞಾನ ಆಗಿರುವುದರಿಂದ ಅದು ಮೋಕ್ಷ ಸಾಧನೆಗೆ ಕೆಲಸಕ್ಕೆ ಬರುತ್ತದೆ. ಪ್ರಪಂಚ ಜ್ಞಾನ ಅಂದರೇ ಅದು ಪ್ರಪಂಚ ಕಾರ್ಯ ಸಾಧನೆಗೆ ಕೆಲಸ ಬರುತ್ತದೆ. ಆದ್ದರಿಂದ ಭಗವದ್ಗೀತೆಯಲ್ಲಿ ಜ್ಞಾನಯೋಗ ಎಂಬ ಅಧ್ಯಾಯದಲ್ಲಿ 'ಜ್ಞಾನ ಯಜ್ಞ' ಶ್ರೇಷ್ಠವಾದುದು ಎಂದು ಹೇಳಿದ್ದಾರೆ. ಯಜ್ಞ ಎಂದರೇ ಸುಡುವುದು, ಬೂದಿ ಮಾಡುವುದೆಂದು ಅರ್ಥ. ಪ್ರಪಂಚ ಸಂಬಂಧ ಐದು ಜ್ಞಾನಗಳನ್ನು ಸುಟ್ಟುಹಾಕುವುದೆಂದು ಹೇಳುತ್ತಾ ಜ್ಞಾನಯಜ್ಞ ಶ್ರೇಷ್ಠವಾದುದು ಎಂದು ಹೇಳಿದ್ದಾರೆ. ಹೊಟ್ಟೆಯಲ್ಲಿ ಜಠರಾಗ್ನಿಯಿಂದ ತಿಂದಿರುವ ದ್ರವ್ಯಗಳನ್ನು ಯಜ್ಞ (ಸುಡುವುದ) ಕ್ಕಿಂತ ಹೊರಗೆ ಜ್ಞಾನೇಂದ್ರಿಯಗಳ ಪ್ರಪಂಚ ಜ್ಞಾನಗಳನ್ನು ಯೋಗಾಗ್ನಿ (ಜ್ಞಾನಾಗ್ನಿ) ಯಿಂದ ಸುಡುವುದು ಶ್ರೇಷ್ಠ ಎಂದು ಆ ಶ್ಲೋಕದಲ್ಲಿ ಹೇಳಿರುವಾಗ, ಈ ಉಪನಿಷತ್ತಿನಲ್ಲಿ ಇಂದ್ರಿಯ ಜ್ಞಾನಗಳನ್ನು ಪ್ರಜ್ಞಾನವೆಂದು ಹೇಳುವುದು ದೊಡ್ಡ ತಪ್ಪು, ತೀರದ ಲೋಪವೆಂದು ತಿಳಿಯಬೇಕು.

# ತೇಜಬಿಂದೂಪನಿಷತ್ತು

**38) ಪ್ರಶ್ನೆ :– ನೀನಿದ್ದೀಯ ನಾನಿದ್ದೇನೆ. ನಾನು ನಿನ್ನನ್ನು ಪ್ರಶ್ನೆ ಕೇಳುತ್ತಿದ್ದೇನೆ. ನೀವು ನನಗೆ ಉತ್ತರ ಹೇಳುತ್ತಿದ್ದೀರ. ನಾನು ಇಲ್ಲದೆ ಹೋದರೆ, ನೀನು ಕೂಡಾ ಇಲ್ಲದೆ ಹೋದರೆ ನಾನು ಪ್ರಶ್ನೆ ಕೇಳುವುದು ಇರುವುದಿಲ್ಲ, ನೀವು ಉತ್ತರ ಹೇಳುವುದು ಇರುವುದಿಲ್ಲ. ನಾವು ಇಬ್ಬರು ಇದ್ದೇವೆ ಆದ್ದರಿಂದ ಪ್ರಶ್ನೆ ಉತ್ತರ**

**ಎನ್ನುವ ಮೂರನೆ ಕೆಲಸ ನಡೆಯುತ್ತಿದೆ. ಒಂದುಕಾಲಕ್ಕೆ ನಾವು ಇಬ್ಬರು ಇಲ್ಲದಹಾಗೆ ಹೋಗಿದ್ದೇವೆ ಎಂದುಕೊಂಡರೆ, ನಾವು ಇಲ್ಲವಾದ್ದರಿಂದ ನಮ್ಮ ಮಧ್ಯದಲ್ಲಿ ನಡೆಯುವ ಕಾರ್ಯ ಕೂಡಾ ಇರುವುದಿಲ್ಲ. ಹಾಗೇ ಈಗಲೇ ನಾವು ಇಲ್ಲದಹಾಗೆ ಹೋಗಿದ್ದೇವೆ ಎಂದುಕೊಳ್ಳೋಣ. ಆಗ ನಮ್ಮ ಮಧ್ಯೆ ಯಾವ ಕಾರ್ಯ ಇರುವುದಿಲ್ಲ. ನಾವು ಇದ್ದೇವೆ ಇಲ್ಲ ಎನ್ನುವುದಕ್ಕೆ ಸಾಕ್ಷಿಯಾಗಿ ನಮ್ಮ ಮಧ್ಯದಲ್ಲಿ ಕಾರ್ಯಗಳಿವೆ.**

ಒಬ್ಬ ಪುರುಷನು ಒಬ್ಬ ಸ್ತ್ರೀ ಇದ್ದರೆ ಅವರಿಬ್ಬರ ಸೇರುವಿಕೆಯಿಂದ ಅವರಿಗೆ ಸಂತಾನ ಉಂಟಾಗಬಹುದು. ಈಗ ನಾವಿದ್ದೇವೆ ಎಂದರೇ ನಮ್ಮ ತಾಯಿ ತಂದೆಯರು ಇದ್ದಂತೆ ಅಲ್ಲವೆ! ನಮ್ಮ ತಾಯಿ ತಂದೆಯರು ಇದ್ದಾರೆಂದರೇ ಗತದಲ್ಲಿ ಅವರ ತಾಯಿ ತಂದೆಯರು ಇದ್ದಂತೆ ಅಲ್ಲವೆ! ನಾನಾಗಲಿ, ನೀನಾಗಲಿ, ಈ ಪ್ರಪಂಚದಲ್ಲಿ ಯಾರಾಗಲಿ ಇಲ್ಲ ಎಂದರೇ ಗತದಲ್ಲಿ ನಮ್ಮ ಹಿರಿಯರು ಇಲ್ಲದಂತೇ, ಹಾಗೇ ಈಗ ನಾವು ಇಲ್ಲದೆ ಹೋದರೆ ಭವಿಷ್ಯತ್ತಿನಲ್ಲಿ ನಮ್ಮ ವಾರಸುದಾರರು ಕೂಡಾ ಇಲ್ಲದಂತೇ. ಆದರೆ ಗತದಲ್ಲಿ ನಮ್ಮ ಹಿರಿಯರಿದ್ದಾರೆನ್ನುವುದು ಸತ್ಯವಾದರೆ ಈಗ ನಾವಿದ್ದೇವೆನ್ನುವುದು ಸತ್ಯ. ನಂತರ ಭವಿಷ್ಯತ್ತಿನಲ್ಲಿ ನಮ್ಮ ವಾರಸದಾರರಿರುತ್ತಾರೆ ಎನ್ನುವುದು ಕೂಡಾ ಸತ್ಯವೇ. ಸೃಷ್ಠಿ. ಸೃಷ್ಠಿಕರ್ತ ಇರುವಾಗ ಸೃಷ್ಠಿಸಲ್ಪಟ್ಟಿರುವುದು ಇದೆಯೆಂದೇ ಹೇಳಬೇಕು. ಹಾಗಲ್ಲದೆ ಸೃಷ್ಠಿಯಿಲ್ಲ, ಸೃಷ್ಠಿಕರ್ತ ಇಲ್ಲ, ಯಾರೂ ಇಲ್ಲ ಎಂದಾಗ ಆ ಮಾತು ಹೇಳುವವನು ಕೂಡಾ ಇಲ್ಲ ಅಲ್ಲವೇ! ಹಾಗಿರುವಾಗ ಆತನು ಯಾರಿದ್ದಾರೆಂದು ಹೇಳುತ್ತಿದ್ದೀಯಾ. ಹೇಳುವವನು ನೀನಿದ್ದರೆ ಕೇಳುವವನು ಕೂಡಾ ಇರುತ್ತಾನೆ ಅಲ್ಲವೆ!

ಒಬ್ಬನಿಗೆ ಹುಚ್ಚು ಹಿಡಿದಾಗ ಒನಕೆಯನ್ನು ತಲೆಗೆ ಸುತ್ತಿರೆಂದು ಹೇಳಿದ್ದಾನಂತೆ. ಒನಕೆ ನೇರವಾಗಿ, ಕಟ್ಟಿಗೆಯಿಂದ ಮಾಡಲ್ಪಟ್ಟಿದೆ ಅಲ್ಲವೆ! ಅದು

**ಬಗ್ಗುವುದಿಲ್ಲ ಅಲ್ಲವೆ! ಹಾಗಿರುವಾಗ ಹುಚ್ಚುಹಿಡಿದವನು ನನ್ನ ತಲೆಗೆ ಒನಕೆಯನ್ನು ಸುತ್ತಿರಿ ಎಂಬ ಮಾತನ್ನು ಕೇಳಿ ಎಲ್ಲರೂ ನಗುತ್ತಾರೆ. ಹಾಗೆ ಹೇಳಿದವನಿಗೆ ಹುಚ್ಚು ಹಿಡಿದಿದೆ, ಮತಿ ಸ್ಥಿಮಿತ ಇಲ್ಲದೆ ಹಾಗೆ ಮಾತ ನಾಡುತ್ತಿದ್ದಾನೆ ಎಂದು ಅನ್ನುತ್ತಾರೆ. ಅದೇ ವಿಧವಾಗಿ ಕೆಳಗಿನ ಶ್ಲೋಕಗಳು ತೇಜಬಿಂದೂಪನಿಷತ್ತಿನಲ್ಲಿ ಹೇಳಿದ್ದಾರೆ ನೋಡಿರಿ.**

**ಶ್ಲೋ॥ ಇದಂ ಪ್ರಪಂಚಂ ನಾಸ್ತ್ಯೇವ ನೊತ್ಪನ್ನಂ ನೋ ಸ್ಥಿತಂ ಕ್ವಚಿತ್ (5–31)**

**ಭಾವಾರ್ಥ:– ಈ ಪ್ರಪಂಚ ವಾಸ್ತವವಾಗಿ ಇಲ್ಲ. ಇದು ಉತ್ಪನ್ನವಾಗಲಿಲ್ಲ, ಸ್ಥಿತಿ ಉಂಟಾಗಿ ಇರಲಾರದು.**

**ಶ್ಲೋ॥ ಚಿತ್ತಂ ಪ್ರಪಂಚ ಮಿತ್ಯಾಹು ರ್ನಾಸ್ತಿ ನಾಸ್ತ್ಯೇವ ಸರ್ವದಾ।**
**ನೀ ಪ್ರಪಂಚಂ ನಚಿತ್ತಾದಿ ನಾಹಂಕಾರೋ ನ ಜೀವಕಃ ॥**
**(5–32)**

**ಭಾವಾರ್ಥ:– ಪ್ರಪಂಚ ವಾಸ್ತವವಾಗಿ ಎಂದಿಗೂ ಇಲ್ಲವೇಯಿಲ್ಲ. ಪ್ರಪಂಚವಾಗಲಿ, ಚಿತ್ತಾದಿಗಳಾಲಿ, ಅಹಂಕಾರವಾಗಲಿ, ಜೀವಿಯಾಗಲಿ ಇಲ್ಲವೇಯಿಲ್ಲ.**

**ಶ್ಲೋ॥ ಮಾಯಾಕಾರ್ಯಾಧಿಕಂ ನಾಸ್ತಿಮಾಯಾ ನಾಸ್ತಿಭಯಂ ನಹಿ**
**ಕರ್ತಾ ನಾಸ್ತಿ ಕ್ರಿಯಾ ನಾಸ್ತಿ ಶ್ರವಣಂ, ಮನನಂ ನಹಿ (5–33)**

**ಭಾವಾರ್ಥ:– ಮಾಯ ಕಾರ್ಯಾದಿಗಳು ಇಲ್ಲವೇಯಿಲ್ಲ. ಮಾಯೆ ಇಲ್ಲ ಆದ್ದರಿಂದ ಭಯ ಇಲ್ಲ. ಕರ್ತ ಇಲ್ಲ, ಕ್ರಿಯೆಯಿಲ್ಲ. ಮನನ ಇಲ್ಲ.**

**ಉತ್ತರ :–** ಯಾರಿಗೋ ಹುಚ್ಚು ಹಿಡಿದು ಒನಕೆಯನ್ನು ತಲೆಗೆ ಸುತ್ತಿರೆನ್ನುವಹಾಗೆ ನೀವು ಹೇಳಿದ್ದೀರ. ವಾಸ್ತವವಾಗಿ ಈ ಶ್ಲೋಕಗಳನ್ನು ನೋಡಿದ ನಂತರ "ನನಗೂ ಹುಚ್ಚು ಹಿಡಿದಿದೆ ನನ್ನನ್ನು ಒನಕೆಗೆ ಸುತ್ತಿರಿ" ಎನ್ನುವಂತಿದೆ. ಒಟ್ಟಾರೆ ನಾವು ಯಾರೂ ಇಲ್ಲ, ಮಾಯೆಯಿಲ್ಲ, ಕರ್ತನಿಲ್ಲ, ಕ್ರಿಯೆಯಿಲ್ಲ ಎಂದಾಗ ಯಾರಿಗೂ ಕರ್ಮಗಳು ಕೂಡಾ ಇಲ್ಲದಂತೆ ಅಲ್ಲವೇ! ಕರ್ಮಯಿಲ್ಲ, ಹುಟ್ಟುಯಿಲ್ಲ,

ಮಾಯೆಯಿಲ್ಲ ಎಂದಾಗ ಆ ಮಾತುಗಳು ಹೇಳುವವನು ಎಲ್ಲಿಂದ ಹೇಳಿದಂತೆ, ಯಾರಿಗೆ ಹೇಳಿದಂತೆ ಲೆಕ್ಕಿಸಬೇಕು. ಏನೂ ಇಲ್ಲ, ಪ್ರಪಂಚವೇ ಇಲ್ಲ ಎಂದಾಗ ಹೇಳುವವನು ನಾನೂ ಇಲ್ಲ, ಕೇಳುವವನು ನೀನೂ ಇಲ್ಲ ಎಂದಂತೇ ಅಲ್ಲವೆ! ಇಬ್ಬರೂ ಇಲ್ಲದಿರುವಾಗ ಮಧ್ಯದಲ್ಲಿ ಈ ಗ್ರಂಥವೇತಕ್ಕೆ ಓದಬೇಕು. ಈ ಉಪನಿಷತ್ತಿನ ಮಾತು ಏಕೆ ಕೇಳಬೇಕು? ಉಳಿದ ಉಪನಿಷತ್ತುಗಳಲ್ಲಿ ದೇವರು, ಮಾಯೆ, ಜೀವಿ, ಜ್ಞಾನ, ಅಜ್ಞಾನ, ದೇವತೆಗಳು ಎಂದು ಹೇಳಿದ ಮಾತುಗಳು ಎಲ್ಲಾ ಸತ್ಯವಾ? ಅಷ್ಟೇತಕ್ಕೆ ಇದೇ ತೇಜ ಬಿಂದೂಪನಿಷತ್ತಿನಲ್ಲಿ ಮತ್ತೊಂದುಕಡೆ ಏನು ಬರೆದಿದ್ದಾರೊ ನೋಡೋಣ.

**ಶ್ಲೋ॥ ಅಹಮೇವ ಹರಿಸ್ಸಾಕ್ಷಾ ದಹಮೇವ ಸದಾಶಿವಃ.**

**ಶುದ್ಧ ಚೈತನ್ಯ ಭಾವೋಹಂ ಶುದ್ಧ ಸತ್ವಾನು ಭಾವನಃ (6–64)**

**ಭಾವಾರ್ಥ :– ನಾನು ಸಾಕ್ಷಾತ್ತು ಹರಿ, ನಾನೇ ಸದಾ ಶಿವನು, ನಾನೇ ಶುದ್ಧ ಚೈತನ್ಯ ಸ್ವರೂಪನು, ಶುದ್ಧ ಸತ್ಯವೊಂದರ ಅನುಭವ ಇರುವವನು.**

ಮೊದಲು ಈ ಪ್ರಪಂಚವೇ ಇಲ್ಲ ಎಂದ ಆತನೇ, ಈಗ ಈ ಶ್ಲೋಕದಲ್ಲಿ ನಾನು ಸಾಕ್ಷ್ಯಾತ್ತು ಹರಿ, ಸದಾಶಿವನು, ಚೈತನ್ಯ ಸ್ವರೂಪನು, ಶುದ್ಧ ಸತ್ಯವೊಂದರ ಅನುಭವ ಇರುವವನೆಂದು ಹೇಗೆ ಹೇಳಿದ್ದಾನೆ? ಪ್ರಪಂಚವೇ ಇಲ್ಲ ಅಸಲಿಗದು ಹುಟ್ಟಲೇ ಇಲ್ಲ ಎಂದಾಗ ವಿಷ್ಣು ಏಕೆ ಇದ್ದಾನೆ, ನೀನು ಎಲ್ಲಿ ಇದ್ದೀಯಾ, ನಿನಗೆ ಅನುಭವಗಳು ಎಲ್ಲಿಯವು? ಎಂದು ನಾವು ಕೇಳಬಹುದು ಅಲ್ಲವೆ! ಒಂದುಕಡೆ ಮಾಯೆಯಿಲ್ಲ ಎಂದವನು ಮತ್ತೊಂದುಕಡೆ ನನಗೆ ಅನುಭವಗಳಿವೆ ಯೆಂದು ಹೇಳುವುದು ಅಸತ್ಯ ಹೇಳಿದಹಾಗೆ ಅಲ್ಲವೆ! ಎಷ್ಟೋ ಜವಬ್ಧಾರಿಯಿಂದ ಜ್ಞಾನ ಹೇಳಬೇಕಾದವರು ತಮ್ಮ ಉಪನಿಷತ್ತುಗಳಲ್ಲಿ ಹೀಗೆ ಬರೆಯುವುದು ಇರುವ ಪ್ರಪಂಚವನ್ನು ಇಲ್ಲ ಎನ್ನುವುದು ಅಜ್ಞಾನಮಾರ್ಗದಲ್ಲಿ ಹೇಳಿದಂತೆ ಅಲ್ಲವೆ! ಎಲ್ಲರೂ ಇದ್ದು ಎಲ್ಲಾ ಅನುಭಗಳು ಇರುವಾಗ, ಅದು ಎಲ್ಲರಿಗೂ

ತಿಳಿಯುತ್ತಿರುವಾಗ ಏನುಯಿಲ್ಲ, ನಾವು ಹುಟ್ಟಲೇ ಇಲ್ಲ ಎಂದರೇ ಹಾಗೆ ಹೇಳುವವನಿಗೆ ಹುಚ್ಚು ಹಿಡಿದಿದೆ ಎಂದು ಹೇಳದೆ ತಪ್ಪುವುದಿಲ್ಲ.

ಪರಮಾತ್ಮ ಭಗವಂತನಾಗಿ ಹುಟ್ಟಿ ಭಗವದ್ಗೀತೆಯನ್ನು ಹೇಳಿದಾಗ ಪ್ರಪಂಚ ಇದೆ, ಮನುಷ್ಯರು ಇದ್ದಾರೆ. ಅವರಲ್ಲಿ ಗುಣಗಳು ಇವೆಯೆಂದು ಹೇಳಿದ್ದಾನೆ ಅಲ್ಲವೆ! ಮನುಷ್ಯನಾಗಿ ಅವತರಿಸಿದ ದೇವರಿಗು ನಿನಗು ತಿಳಿದಷ್ಟು ತಿಳಿದಿಲ್ಲವಾ! ದೇವರು ಮನುಷ್ಯರು ಇದ್ದಾರೆ. ಮಾಯೆ, ಮನುಷ್ಯರಲ್ಲಿ ಗುಣಗಳ ರೂಪದಲ್ಲಿ ಇದೆಯೆಂದು ಹೇಳುವುದೇ ಅಲ್ಲದೆ, ತನ್ನ ಬೋಧನೆಯನ್ನು ಹದಿನೆಂಟು ಅಧ್ಯಾಯಗಳ ಭಗವದ್ಗೀತೆ ಗ್ರಂಥವಾಗಿ ಹೇಳಿದ್ದಾನೆ. ಎಷ್ಟೋ ಜವಬ್ಧಾರಿಯಿಂದ ದೇವರು ಮನುಷ್ಯರಿಗೆ ಜ್ಞಾನವನ್ನು ಹೇಳಿದರೆ, ಏನು ತಿಳಿಯದವರು ಯಾರೂ ಇಲ್ಲ, ಏನುಯಿಲ್ಲ ಎನ್ನುವುದು ಪೂರ್ತಿ ತಪ್ಪು ಅಲ್ಲವೆ! ಆದ್ದರಿಂದ ತೇಜಬಿಂದೂಪ ನಿಷತ್ತಿನಲ್ಲಿ ಇದು ದೊಡ್ಡ ಲೋಪವಾಗಿ ಇದೆಯೆಂದು ಹೇಳುತ್ತಿದ್ದೇವೆ.

# ಪೈಂಗಲೋಪನಿಷತ್ತು

**39) ಪ್ರಶ್ನೆ :– ನೀವು ಶಾಸ್ತ್ರ ಪ್ರಮಾಣ ಇಲ್ಲದ ಜ್ಞಾನ ಪ್ರಜೆಗಳಿಗೆ ಸರಿಯಾದುದು ಅಲ್ಲವೆಂದು ಹೇಳಿದ್ದೀರ. ಅಷ್ಟೇಅಲ್ಲದೆ ದೇವರು ಭಗವಂತನಾಗಿ ಬಂದಾಗ ಆತನು ಹೇಳುವ ಮಾತುಗಳೇ ಶಾಸ್ತ್ರಗಳಾಗಿ ಇರುತ್ತವೆ. ಮನುಷ್ಯರು ಶಾಸ್ತ್ರವನ್ನು ನೋಡಿ ಮುಂದಕ್ಕೆ ಹೋಗಬೇಕು. ಭಗವಂತನು ಶಾಸ್ತ್ರವನ್ನು ನೋಡದೆಯೇ ಬೋಧಿಸುತ್ತಾನೆ. ಆದರೂ ಆತನು ಹೇಳಿರುವ ವೆಲ್ಲ ಶಾಸ್ತ್ರಕ್ಕೆ ಸಂಬಂಧಿಸಿದ ಜ್ಞಾನವೇ ಇರುತ್ತದೆಂದು ಗತದಲ್ಲಿ**

**ನೀವು ಹೇಳಿದ್ದೀರ. ಈಗ ಪೈಂಗಲೋಪ ನಿಷತ್ತಿನಲ್ಲಿ ನೀವು ಹೇಳಿದ ಮಾತಿಗೆ ವಿರುದ್ಧವಾಗಿ ಶಾಸ್ತ್ರವನ್ನು ಸಮೂಲವಾಗಿ ಬಿಟ್ಟು ಸತ್ಯವಾದ ದೇವರನ್ನು ಆರಾಧಿಸಬೇಕೆಂದು ಹೇಳಿದ್ದಾರೆ. ಹಾಗೆ ಮಾಡುವುದು ಶಾಸ್ತ್ರವಿರುದ್ಧ ಆಗುತ್ತದೆ ಮತ್ತು ಅಸತ್ಯ ಮಾರ್ಗ ಆಗುತ್ತದೆ. ಹಾಗಿರುವಾಗ ಸತ್ಯವಾದ ದೇವರನ್ನು ಹೇಗೆ ತಿಳಿಯಲಾಗುತ್ತದೆ? ಈ ವಿಷಯವನ್ನು ಹೇಳಿದ ಪೈಂಗಲೋಪ ನಿಷತ್ತಿನಲ್ಲಿನ ಕೆಳಗಿನ ಶ್ಲೋಕವನ್ನು ನೋಡಿರಿ.**

**ಶ್ಲೋ॥ ವಿಜ್ಞೇಯೋ ಕ್ಷರ ತನ್ಮಾತ್ರೋ ಜೀವಿತಂ ಚಾಪಿ ಚಂಚಲಮ್,**
**ವಿಹಾಯ ಶಾಸ್ತ್ರಾ ಜಾಲಾನಿ ಯತ್ಸತ್ಯಂ ತದುಪಾಸ್ಯತಾಮ್.**
**(ಚತುರ್ಥೋಽಧ್ಯಾಯಃ)**

**ಭಾವಾರ್ಥ :– ಅಕ್ಷರವಾದ ಪರಮಾತ್ಮನನ್ನು ಅರಿತುಕೊಳ್ಳಬೇಕು. ಜೀವನ ಚಂಚಲವಾದುದು. ಶಾಸ್ತ್ರಸಮೂಲಗಳನ್ನು ಬಿಟ್ಟು ಸತ್ಯಮಾದ ಪರಮಾತ್ಮನನ್ನು ಉಪಾಶಿಸಬೇಕು.**

**ಉತ್ತರ :–** ಶಾಸ್ತ್ರ ಎಂದರೇ ಸತ್ಯ ಎಂದು ಒಂದು ವಿಧವಾಗಿ ಹೇಳಬಹುದು. ಇನ್ನೂ ವಿವರವಾಗಿ ಹೇಳಿದರೆ ಶಾಸ್ತ್ರ ಎಂದರೇ ಶಾಸನಗಳಿಂದ ಕೂಡಿಕೊಂಡಿರುವು ದೆಂದು ಹೇಳಬಹುದು. ಶಾಸನ ಎಂದರೇ ಜಾರಿ ನಡೆದೇ ನಡೆಯುತ್ತದೆಂದು ಹೇಳಬಹುದು. ಶಾಸನ ಎಂಬ ಪದ ಶಾಪ ಎಂಬ ಶಬ್ದದಿಂದ ಹುಟ್ಟಿದೆ. ಶಾಸ್ತ್ರ ಕೆಲವು ಸಿದ್ಧಾಂತಗಳಿಂದ ಇಲ್ಲವೆ ಕೆಲವು ಸೂತ್ರಗಳಿಂದ ತಯಾರಾಗಿರುತ್ತದೆ. ಭೂಮಿಮೇಲೆ ಶಾಸ್ತ್ರಗಳು ಆರು ಇವೆ. ಅವುಗಳನ್ನೇ ಷಟ್ ಶಾಸ್ತ್ರಗಳು ಎಂದು ಕರೆಯುತ್ತೇವೆ. ಆರು ಶಾಸ್ತ್ರಗಳು ವರಸೆಯಾಗಿ ಈ ವಿಧವಾಗಿ ಇವೆ. 1) ಗಣಿತ ಶಾಸ್ತ್ರ 2) ಖಗೋಳ ಶಾಸ್ತ್ರ 3) ರಸಾಯನ ಶಾಸ್ತ್ರ 4) ಭೌತ ಶಾಸ್ತ್ರ 5) ಜ್ಯೋತಿಷ್ಯ ಶಾಸ್ತ್ರ 6) ಬ್ರಹ್ಮವಿದ್ಯಾ ಶಾಸ್ತ್ರ. ಆರು ಶಾಸ್ತ್ರಗಳಲ್ಲಿ ಐದು

ಶಾಸ್ತ್ರಗಳು ಪ್ರಪಂಚಕ್ಕೆ ಸಂಬಂಧಿಸಿರುವವು ಆಗಿದ್ದು, ಕೊನೆಯಲ್ಲಿರುವ ಬ್ರಹ್ಮವಿದ್ಯಾ ಶಾಸ್ತ್ರ ಒಂದು ಮಾತ್ರ ದೇವರಿಗು, ದೇವರ ಜ್ಞಾನಕ್ಕು ಸಂಬಂಧಿಸಿದ ಶಾಸ್ತ್ರವಾಗಿ ಹೇಳಲ್ಪಡುತ್ತಿದೆ.

ಬ್ರಹ್ಮವಿದ್ಯಾಶಾಸ್ತ್ರ ಎಂದರೇ ಆತ್ಮ ವಿದ್ಯಾಶಾಸ್ತ್ರ ಎಂದು ಅರ್ಥ. ಆತ್ಮವಿದ್ಯೆಯನ್ನು ಅಧ್ಯಾಯನ ಮಾಡುವುದೇ ಆಧ್ಯಾತ್ಮಿಕ ಎಂದು ಹೇಳುತ್ತಾರೆ. ಇಲ್ಲಿ ಮೇಲಿನ ಶ್ಲೋಕದಲ್ಲಿ ಪರಮಾತ್ಮನನ್ನು ತಿಳಿಯಬೇಕೆಂದು ಹೇಳುತ್ತಾ, ಶಾಸ್ತ್ರಗಳನ್ನು ಸಮೂಲವಾಗಿ ಬಿಟ್ಟು ಪರಮಾತ್ಮನನ್ನು ಆರಾಧಿಸಬೇಕೆಂದು ಹೇಳಿದ್ದಾರೆ. ಬ್ರಹ್ಮ ವಿದ್ಯಾಶಾಸ್ತ್ರ ಆತ್ಮವನ್ನು ಕುರಿತು ಜ್ಞಾನವನ್ನು ತಿಳಿಸುತ್ತದೆ ಆದರೆ, ಪರಮಾತ್ಮ ಜ್ಞಾನವನ್ನು ಹೇಳುವುದಿಲ್ಲ. ಅಷ್ಟೇ ಅಲ್ಲದೆ ಶಾಸ್ತ್ರಗಳನ್ನು ಬಿಟ್ಟು ಪರಮಾತ್ಮನನ್ನು ಆರಾಧಿಸೆಂದು ಈ ಉಪನಿಷತ್ತಿನಲ್ಲಿ ಹೇಳುವುದು ದೊಡ್ಡ ತಪ್ಪಾಗಿ ಇದೆ. ಎಷ್ಟು ದೊಡ್ಡ ಜ್ಞಾನಿಯಾದರೂ ಆತ್ಮವನ್ನು ತಿಳಿದು ಆರಾಧಿಸಬಹುದು ಆದರೆ, ಪರಮಾತ್ಮನನ್ನು ಆರಾಧಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಪರಮಾತ್ಮನನ್ನು ಆರಾಧಿಸುವುದಕ್ಕೆ ಆತನು ಇಂತಹವನೆಂದು ಹೇಳುವುದಕ್ಕೆ ಪರಮಾತ್ಮಗೆ ಹೆಸರು ಇಲ್ಲ, ರೂಪವಿಲ್ಲ. ಇಂತಹ ಕೆಲಸ ಮಾಡುವವನೆಂದು ಹೇಳುವುದಕ್ಕೂ ಕೂಡಾ ಸಾಧ್ಯಪಡುವುದಿಲ್ಲ ಏಕೆಂದರೇ! ಪರಮಾತ್ಮಗೆ ಕಾರ್ಯಗಳು ಕೂಡಾ ಇಲ್ಲ. ಏನೂ ಅಲ್ಲದವನು, ಯಾರಿಗೂ ತಿಳಿಯದವನು ಪರಮಾತ್ಮ ಆಗಿರುವುದರಿಂದ ಆತನನ್ನು ಯಾರೂ ಉಪಾಶಿಸುವುದಕ್ಕೆ ಸಾಧ್ಯಪಡುವುದಿಲ್ಲ. ಶಾಸ್ತ್ರಗಳು ಕೂಡಾ ಆತನನ್ನು ತಿಳಿಸಲಾರವು. ಹಾಗೇ ಪರಮಾತ್ಮ ಧರ್ಮಗಳಿಗು ಕೂಡಾ ಅತೀತನು. ಧರ್ಮಗಳೆಲ್ಲವೂ ಆತ್ಮವನ್ನು ತಿಳಿಸುವವೇ ಹೊರತು ಪರಮಾತ್ಮನನ್ನು ತಿಳಿಸುವ ಧರ್ಮಗಳು ಇರುವುದಿಲ್ಲ. ಆದ್ದರಿಂದ ಸರ್ವ ಧರ್ಮಗಳನ್ನು ಬಿಟ್ಟು ನನ್ನನ್ನೇ ಆಶ್ರಯಿಸಿರೆಂದು ಭಗವದ್ಗೀತೆ ಯಲ್ಲಿ ಮೋಕ್ಷ ಸನ್ಯಾಸಯೋಗದಲ್ಲಿ ಅರವತ್ತಾರನೆಯ (66) ಶ್ಲೋಕದಲ್ಲಿ ಹೇಳಿದ್ದಾರೆ. **"ಸರ್ವ ಧರ್ಮಾನ್ ಪರಿತ್ಯಜ್ಯ ಮಾ ಮೇಕಂ ಶರಣಂ ವ್ರಜ"** ಎಂದು ಹೇಳಿದ್ದಾರೆ. ಹಾಗೆ ಧರ್ಮಗಳಿಗೆ ಅತೀತನಾಗಿರುವ ಪರಮಾತ್ಮನನ್ನು

ಶರಣು ಬೇಡಿದರೆ ಆತನು ನಮ್ಮನ್ನು ಪಾಪಗಳಿಂದ ಕಾಪಾಡುವನು. ಪಾಪಗಳಿಂದ ಆತ್ಮ ರಕ್ಷಿಸಲಾರನು, ಕರ್ಮಗಳನ್ನು ಇಲ್ಲದಹಾಗೆ ಕ್ಷಮಿಸುವ ಶಕ್ತಿ ಪರಮಾತ್ಮಗೆ ಮಾತ್ರ ಇರುತ್ತದೆ. ಅಷ್ಟು ದೊಡ್ಡ ಪರಮಾತ್ಮನನ್ನು ಯಾರಾದರೂ ಶರಣುಬೇಡಬೇಕಾದ್ದೇ ಹೊರತು, ಆರಾಧಿಸ ಬಾರದು. ಆದರೆ ಎಲ್ಲದಕ್ಕು ವಿರುದ್ಧವಾಗಿ ಪೈಂಗಲೋಪನಿಷತ್ತಿನಲ್ಲಿ ಪರಮಾತ್ಮನನ್ನು ಆರಾಧಿಸಬೇಕೆಂದು ಹೇಳುವುದು ದೊಡ್ಡ ತಪ್ಪು.

## ಮಹೋಪನಿಷತ್ತು

**40) ಪ್ರಶ್ನೆ :– ದೇಹಕ್ಕೆ ಒಳಗು ಹೊರಗು, ಮೇಲೆ ಕೆಳಗೆ ದಶ ದಿಕ್ಕುಗಳು ಈಕಡೆ ಆಕಡೆ ಎಲ್ಲವೂ ಆತ್ಮವೇ ಇದೆ. ಆತ್ಮ ಇಲ್ಲದೆ ಜಗತ್ತು ಇಲ್ಲ ಎಂದು ಹೇಳಿದ್ದಾರೆ. ದೇಹಕ್ಕೆ ಹೊರಗೆ ಎಲ್ಲಾಕಡೆ ಆತ್ಮ ಇದೆಯಾ? ಎಂದು ನಾವು ಕೇಳುತ್ತಿದ್ದೇವೆ. ಈ ದಿನ ಗ್ರಂಥಗಳಲ್ಲಿ ಬರೆದಿರುವುದು ಸತ್ಯಗಳೆಂದು ನಂಬುವುದಕ್ಕೆ ಅವಕಾಶವಿಲ್ಲ. ಆದ್ದರಿಂದ ಸತ್ಯವನ್ನು ತಿಳಿಸಿರಿ.**

**ಶ್ಲೋ॥** ಸಬಾಹ್ಯಾ ಭ್ಯನ್ತರೇ ದೇಹೇ ಹ್ಯಥ ಊರ್ಧ್ವಂ ಚ ದಿಕ್ಷುಚ.
ಇತ ಆತ್ಮಾ ತತೋ ಸ್ವಾತ್ಮಾ ನಾಸ್ತ್ಯ ನಾತ್ಮ ಮಯಂ ಜಗತ್. (6–10)

**ಭಾವಾರ್ಥ :–** ದೇಹಕ್ಕೆ ಒಳಗು ಹೊರಗು ಕೆಳಗೆ ಮೇಲೆ ಒಟ್ಟಾರೆ ದಶ ದಿಕ್ಕುಗಳು ಎಲ್ಲಾಕಡೆ ಆತ್ಮವೇ ಇದೆ. ಅನಾತ್ಮವಾಗಿ ಆತ್ಮ ಇಲ್ಲದೇ ಎಲ್ಲಿಯೂ ಇಲ್ಲ. ಜಗತ್ತು ಎಲ್ಲಾಕಡೆ ಆತ್ಮ ತುಂಬಿಕೊಂಡಿದೆ.

**ಉತ್ತರ :–** ದೇಹ ಎಂದರೇ ದೇಹಿ ಇರುವುದು ಎಂದು ಅರ್ಥ. ದೇಹಿ ಎಂದರೇ ಆತ್ಮ ಎಂದು, ದೇಹವನ್ನು ಧರಿಸಿ ಇದೆಯೆಂದೂ ಅರ್ಥ ಹೇಳಬಹುದು.

ಆತ್ಮಗೆ ಮುಂದೆ ಹಿಂದೆ ಎರಡು ಆತ್ಮಗಳು ಇವೆ. ಅದರಲ್ಲಿ ಒಂದು ಜೀವಾತ್ಮ ವಾಗಿದ್ದು, ಎರಡನೆಯದು ಪರಮಾತ್ಮಯೆಂದು ಹೇಳಬಹುದು. ವರಸೆ ಕ್ರಮವಾಗಿ ಹೇಳಿದರೆ **ಜೀವಾತ್ಮ, ಆತ್ಮ, ಪರಮಾತ್ಮ** ಎಂದು ಹೇಳಬಹುದು. ಜೀವಾತ್ಮವನ್ನು ಮೂರಾಗಿ, ಆತ್ಮನನ್ನು ಆರಾಗಿ, ಪರಮಾತ್ಮನನ್ನು ಒಂಭತ್ತಾಗಿ ಗುರುತಿಸಿದ್ದೇವೆ. ಈ ಮೂರು ಆತ್ಮಗಳನ್ನು ವಿವರವಾಗಿ ಹೇಳಿಕೊಂಡರೆ ಜೀವಾತ್ಮ, ಆತ್ಮ ಎರಡು ಜೋಡಿ ಆತ್ಮಗಳಾಗಿ ಕೂಡಿ ಶರೀರದಲ್ಲಿ ನಿವಾಸಿಸುತ್ತಿವೆ. ಪರಮಾತ್ಮ ಶರೀರ ದೊಳಗೆ, ಶರೀರದ ಹೊರಗೆ ಅಣುಅಣುವಿನಲ್ಲೂ ವ್ಯಾಪಿಸಿದ್ದಾನೆ. ಆದ್ದರಿಂದ ಪರಮಾತ್ಮನನ್ನು ಅಂತ್ಯವಿಲ್ಲದವನೆಂದು ಹೇಳಬಹುದು.

ಶರೀರದಲ್ಲಿ ಇರುವವರು, ಶರೀರದಲ್ಲಿ ಇಲ್ಲದವರು ಎಂದು ಮೂರು ಆತ್ಮಗಳನ್ನು ಎರಡು ಭಾಗಗಳಾಗಿ ವಿಭಜಿಸಬಹುದು.

| | | |
|---|---|---|
| **ಶರೀರದಲ್ಲಿ ಇರುವವರು** | = | **ಜೀವಾತ್ಮ**<br>**ಆತ್ಮ** } |
| **ಶರೀರದಲ್ಲಿ ಇಲ್ಲದವನು** | = | **ಪರಮಾತ್ಮ** |

ಮತ್ತೊಂದು ವಿಧವಾಗಿ ಕರ್ಮಗಳು ಇರುವವರು, ಕರ್ಮಗಳು ಇಲ್ಲದವರೆಂದು ಮೂರು ಆತ್ಮಗಳನ್ನು ಎರಡು ಭಾಗಗಳಾಗಿ ಬಿಡಿಸಿ ಹೇಳಬಹುದು.

| | | |
|---|---|---|
| **ಕರ್ಮಗಳಿರುವವರು** | = | **ಜೀವಾತ್ಮ** |
| **ಕರ್ಮಗಳು ಇಲ್ಲದವರು** | = | **ಆತ್ಮ**<br>**ಪರಮಾತ್ಮ** } |

ಈ ವಿಧವಾಗಿ ಕರ್ಮಗಳನ್ನನುಸರಿಸಿ, ಶರೀರದಲ್ಲಿರುವ ಅವರನ್ನನುಸರಿಸಿ ಎರಡು ವಿಧಗಳಾಗಿ ವಿಭಜಿಸಿ ನೋಡಿದರೆ ಎರಡು ಗುಂಪುಗಳಲ್ಲಿಯೂ ಆತ್ಮ ಇದೆ. ಜೀವಾತ್ಮ ಕರ್ಮಗಳಿರುವವನಾಗಿ ಅವುಗಳನ್ನು ಅನುಭವಿಸುವುದಕ್ಕೆ

ಶರೀರದಲ್ಲಿ ಸಿಕ್ಕಿಕೊಂಡಿದ್ದಾನೆ. ಆತ್ಮ ಜೀವಿಯ ಪಾಲಿಗೆ ಯಮಧರ್ಮರಾಜನಾಗಿ ಶರೀರದಲ್ಲಿದ್ದು, ಜೀವಿಯಿಂದ ಕರ್ಮಗಳನ್ನು ಅನುಭವಿಸುವಂತೆ ಮಾಡುತ್ತಿದೆ. ಜೀವಾತ್ಮ, ಆತ್ಮ ಶರೀರದಲ್ಲಿ ಇರುವಾಗ, ಪರಮಾತ್ಮ ಶರೀರದೊಳಗೆ, ಶರೀರದ ಹೊರಗೆ ಎಲ್ಲಾಕಡೆ ವ್ಯಾಪಿಸಿದ್ದಾನೆ. ಇನ್ನೂ ವಿವರವಾಗಿ ಹೇಳಿದರೆ ಜೀವಾತ್ಮ ಶರೀರದಲ್ಲಿ ತಲೆಯಲ್ಲಿ ಯಾರಿಗೂ ಕಾಣಿಸದಿರುವ ಗುಣಚಕ್ರದಲ್ಲಿನ ಗುಣಗಳ ಮಧ್ಯೆ ನಿವಾಸಿಸುತ್ತಿದೆ. ಹಾಗೆ ಜೀವಾತ್ಮ ದೇಹದಲ್ಲಿ ಒಂದುಕಡೆ ರವೆಯಷ್ಟು ಇರುವಾಗ, ಆತ್ಮ ಶರೀರವೆಲ್ಲವೂ ವ್ಯಾಪಿಸಿದೆ. ಆತ್ಮ ಶರೀರವೆಲ್ಲಾ ಇರುವುದೇ ಅಲ್ಲದೇ ಶರೀರದಲ್ಲಿನ ಜೀವಿಗೆ ಅಧಿಪತಿಯಾಗಿದ್ದು, ಜೀವಿಯು ಗತದಲ್ಲಿ ಸಂಪಾದಿಸಿಕೊಂಡ ಕರ್ಮಗಳನ್ನು ಅನುಭವಿಸುವಹಾಗೆ ಆತ್ಮ ಯಾವಾಗಲೂ ಮಾಡುತ್ತಿದೆ. ಶರೀರದಲ್ಲಿನ ಪ್ರತಿ ಕೆಲಸವನ್ನು ಆತ್ಮ ಮಾಡುತ್ತಾ ಆ ಕೆಲಸದಲ್ಲಿನ ಅನುಭವಗಳನ್ನು ಜೀವಿಯಿಂದ ಅನುಭವಿಸುವಹಾಗೆ ಮಾಡುತ್ತಿದೆ. ಆತ್ಮ ತನ್ನ ಶಕ್ತಿಯಿಂದಲೇ ಹುಟ್ಟಿದಾಗಿನಿಂದ ಮರಣಿಸುವವರೆಗು ಶರೀರವನ್ನು ಕದಲುವಂತೆ ಮಾಡುತ್ತಿದೆ. ಇನ್ನು ಪರಮಾತ್ಮ ವಿಷಯಕ್ಕೆ ಬಂದರೆ ಪರಮಾತ್ಮ ಶರೀರದೊಳಗೆ, ಶರೀರದ ಹೊರಗೆ ಅಣುವಣುವಿನಲ್ಲೂ ವ್ಯಾಪಿಸಿದ್ದಾನೆ. ಆತನು ಶರೀರದಲ್ಲಿ ಜೀವಾತ್ಮಗು, ಆತ್ಮಗು ಸಾಕ್ಷಿಯಾಗಿದ್ದಾನೆ ಹೊರತು ಏನು ಮಾಡುವವನಲ್ಲ. ಈ ವಿಧವಾಗಿ ಶರೀರದಲ್ಲಿ ಜೀವಾತ್ಮ ಆತ್ಮಗಳು ಇರುವಾಗ, ಶರೀರದೊಳಗೆ ಹೊರಗೆ ಪರಮಾತ್ಮವಿದೆ. ಇದನ್ನನುಸರಿಸಿ ಆತ್ಮ ಹೊರಗೆ ಇಲ್ಲವೆಂದು ಹೇಳಬಹುದು. ಆದರೇ ಈ ಮಹೋಪನಿಷತ್ತಿನಲ್ಲಿ ಆತ್ಮ ಶರೀರದ ಹೊರಗೆ ಒಳಗೆ ಇದೆಯೆಂದು ಹೇಳುವುದು ದೊಡ್ಡ ಲೋಪವಾಗಿ ಇದೆಯೆಂದು ಹೇಳಬಹುದು.

ಈ ವಿಧವಾಗಿ 1108 ಉಪನಿಷತ್ತುಗಳಲ್ಲಿ ಅಲ್ಲಲ್ಲಿ ಅನೇಕ ಲೋಪಗಳು ಕಾಣಿಸುತ್ತಲೇ ಇವೆ. ಉಪನಿಷತ್ತುಗಳನ್ನು ಬರೆದವರು ಸಾಧಾರಣ ಮನುಷ್ಯರೇ ಆಗಿರುವುದರಿಂದ ಈ ವಿಧವಾಗಿ ಲೋಪಗಳಿವೆಯೆಂದು ಹೇಳುತ್ತಿದ್ದೇವೆ. ಪರಮಾತ್ಮ ಭಗವಂತನಾಗಿ ಭೂಮಿಮೇಲಕ್ಕೆ ಬಂದು ಹೇಳಿದ ಜ್ಞಾನ ಮೂರು

ದೈವ ಗ್ರಂಥಗಳಾಗಿ ಇದೆ. ಅದರಲ್ಲಿ ಪ್ರಥಮ ದೈವಗ್ರಂಥ ಭಗವದ್ಗೀತೆಯೆಂದು ಹೇಳುತ್ತಿದ್ದೇವೆ. ಭಗವದ್ಗೀತೆ ಉಳಿದ ಎರಡು ದೈವ ಗ್ರಂಥಗಳಿಗು ಕೂಡಾ ಆಧಾರವಾಗಿದೆ. ಭಗವದ್ಗೀತೆಯಲ್ಲಿ ಕೂಡಾ ಕೆಲವು ಲೋಪಗಳು ಕಾಣಿಸಿದರೂ ಅವುಗಳನ್ನು ಮನುಷ್ಯರು ಮಧ್ಯದಲ್ಲಿ ಸೇರಿಸಿದ್ದಾರೆಂದು ಹೇಳಬಹುದು. ದೇವರು ಹೇಳಿದ ಜ್ಞಾನದಲ್ಲಿ ಯಾವ ಲೋಪ ಕಾಣಿಸುತ್ತಿಲ್ಲ. ಮನುಷ್ಯರು ಹೇಳಿದ ಜ್ಞಾನದಲ್ಲಿಯೇ ಲೋಪಗಳು ಕಾಣಿಸುತ್ತಿವೆ. ಮೂರು ದೈವಗ್ರಂಥಗಳಲ್ಲಿ ಅಲ್ಲಲ್ಲಿ ಮನುಷ್ಯರ ಬರಹಗಳು ಬೆರೆತಿರುವಹಾಗೆ ತಿಳಿಯುತ್ತಿದೆ. ಆದ್ದರಿಂದ ಅಂತಹ ಲೋಪಗಳನ್ನು ಅಲ್ಲದೆ ಸಕ್ರಮವಾದ ಜ್ಞಾನವನ್ನೇ ತಿಳಿಯುವಹಾಗೆ ಲೋಪಗಳ ಬಗ್ಗೆ ಜಾಗ್ರತೆಯಾಗಿ ಇರುವಂತೆ ಉದಾಹರಣೆಗೆ ಕೆಲವುಗಳಲ್ಲಿರುವ ಅಜ್ಞಾನದಿಂದ ಕೂಡಿಕೊಂಡ ಮಾತುಗಳನ್ನು ನಿಮಗೆ ಕಾಣಿಸುವಂತೆ ಈ ಗ್ರಂಥದಲ್ಲಿ ಬರೆದಿದ್ದೇವೆ. ಜ್ಞಾನ ಜಿಜ್ಞಾಸಿಗಳು ಅಜ್ಞಾನದಲ್ಲಿ ಹೆಜ್ಜೆ ಇಡದಹಾಗೆ ಮೊದಲೇ ಜ್ಞಾನವಾಗಿ ಕಾಣಿಸುವವುಗಳಲ್ಲಿ ಅಜ್ಞಾನ ಹೇಗಿರುತ್ತದೊ ಸ್ವಲ್ಪ ತೋರಿಸಿದ್ದೇನೆ. ಅಷ್ಟೇಹೊರತು ನಾನು ಹೆಚ್ಚು ಇತರರು ಕಡಿಮೆ ಎನ್ನುವಹಾಗೆ ಹೇಳಲಿಲ್ಲ. ಉಪನಿಷತ್ತು ಎನ್ನುವಮಾತು ದೊಡ್ಡ ಜ್ಞಾನದಿಂದ ಕೂಡಿಕೊಂಡಿದೆಯೆಂದು ಹೇಳಿದ್ದೇವೆ. ಅಷ್ಟು ದೊಡ್ಡ ಹೆಸರಿರುವ ಉಪನಿಷತ್ತುಗಳಲ್ಲಿ ಕಾಣಿಸುವಂತಿರುವ ಲೋಪಗಳನ್ನು ಕೆಲವನ್ನು ನಿಮಗೆ ತೋರಿಸುವುದು ನಡೆದಿದೆ.

**ಒಂದು ವಿಷಯವನ್ನು ಸಮರ್ಥಿಸುವುದಕ್ಕೆ ಶಾಸ್ತ್ರ ಎಷ್ಟು ಅವಶ್ಯವೊ ಹಾಗೆ ಒಂದು ವಿಷಯವನ್ನು ಖಂಡಿಸುವುದಕ್ಕೆ ಶಾಸ್ತ್ರ ಅಷ್ಟೇ ಅವಶ್ಯವಾಗುತ್ತದೆ.**

**ಅಸತ್ಯವನ್ನು ಸಾವಿರಮಂದಿ ಹೇಳಿದರೂ, ಅದು ಸತ್ಯವಲ್ಲ.**
**ಸತ್ಯವನ್ನು ಸಾವಿರಮಂದಿ ಅಲ್ಲಗಳೆದರೂ ಅದು ಅಸತ್ಯವಲ್ಲ.**

ಮೂಲ ಕರ್ತ

ತ್ರಿಮತ ಏಕೈಕ ಗುರುವು, ತ್ರೈತ ಸಿದ್ಧಾಂತ ಆದಿಕರ್ತ

**ಶ್ರೀಶ್ರೀಶ್ರೀ ಆಚಾರ್ಯ ಪ್ರಬೋಧಾನಂದ ಯೋಗೀಶ್ವರರು**

# ಪ್ರಬೋಧ ಸೇವಾ ಸಮಿತಿ




**ಪ್ರಬೋಧ ಸೇವಾ ಸಮಿತಿ (P.S.S.)**

**(Regd.No.: 304/1991)**

ಚಿನ್ನಪೊಡಮಲ(ಗ್ರಾ), ತಾಡಿಪತ್ರಿ(ಮಂ), ಅನಂತಪುರಂ (ಜಿಲ್ಲಾ), ಆಂಧ್ರಪ್ರದೇಶ್-515411

e-mail id : info@thraithashakam.org

***www. thraithashakam.org***

ಮೂಲ ಕರ್ತ

ತ್ರಿಮತ ಏಕೈಕ ಗುರುವು, ತ್ರೈತ ಸಿದ್ಧಾಂತ ಆದಿಕರ್ತ

**ಶ್ರೀಶ್ರೀಶ್ರೀ ಆಚಾರ್ಯ ಪ್ರಬೋಧಾನಂದ ಯೋಗೀಶ್ವರರು**

# ಇಂದೂ ಜ್ಞಾನವೇದಿಕೆ




**ಇಂದೂ ಜ್ಞಾನವೇದಿಕೆ (I.G.V)**

**(Regd.No.: 168/2004)**

ಚಿನ್ನಪೊಡಮಲ(ಗ್ರಾ), ತಾಡಿಪತ್ರಿ(ಮಂ), ಅನಂತಪುರಂ (ಜಿಲ್ಲಾ), ಆಂಧ್ರಪ್ರದೇಶ್-515411

e-mail id : info@thraithashakam.org

www. thraithashakam.org